

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 2 ಭಾನುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 312 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4



ಕೊಳ್ಳೇಗಾಲ ಬಳಿ ಭೀಕರ ಅಪಘಾತ


ಐವರು ಇಂಜಿನಿಯರಿಂಗ್ ವಿದ್ಯಾರ್ಥಿಗಳು ಸಾವು

●ಮತ್ತೊಂದು ವಾಹನ ಹಿಂದಿಕ್ಕುವ ಟಿಪ್ಪರ್ ಚಾಲಕನ ದುಸ್ಸಾಹಸಕ್ಕೆ ಎಳೆಜೀವಗಳು ಬಲಿ ●ವಿವಿಧೆಡೆಯಿಂದ ಬಂದು ಮೈಸೂರಲ್ಲಿ ವ್ಯಾಸಂಗ ಮಾಡುತ್ತಿದ್ದರು; ಮಲೆ ಮಹದೇಶ್ವರನ ದರ್ಶನಕ್ಕೆ ಹೋಗುವಾಗ ದುರ್ಘಟನೆ ●ವರ್ಷಕ್ಕೆ ಕೋಟ್ಯಾಂತರ ಜನ ಸಂಚರಿಸುವ ಪ್ರಸಿದ್ಧ ಯಾತ್ರಾಸ್ಥಳಕ್ಕೆ ಉತ್ತಮ ರಸ್ತೆ, ಸೇತುವೆ ಸಂಪರ್ಕ ಬೇಡವೆ!


ನಿತಿನ್


ಸುಹಾಸ್


ಶ್ರೇಯಸ್


ಲಿಖಿತ


ಶ್ರೀಲಕ್ಷ್ಮಿ

ಕೊಳ್ಳೇಗಾಲ, ಮಾ.1–ಕಾರಿಗೆ ಟಿಪ್ಪರ್ ಡಿಕ್ಕಿ ಹೊಡೆದ ಪರಿಣಾಮ ಐವರು ವಿದ್ಯಾರ್ಥಿಗಳು ಸ್ಥಳದಲ್ಲೇ ಸಾವನ್ನಪ್ಪಿದ ದುರ್ಘಟನೆ ಕೊಳ್ಳೇಗಾಲ ತಾಲೂಕು ಚಿಕ್ಕಿಂದು ವಾಡಿ ಸಮೀಪದ ವಡ್ಡರಕಟ್ಟೆ ಎಂಬಲ್ಲಿ ಶನಿವಾರ ಬೆಳಗ್ಗೆ ಸಂಭವಿಸಿದೆ.

ಮೂಲತಃ ಕೊಳ್ಳೇಗಾಲದ ಕೆಂಪನಪಾಳ್ಯದವರಾಗಿದ್ದು, ವಿದ್ಯಾಭ್ಯಾಸಕ್ಕಾಗಿ ಮೈಸೂರಿನ ಆಲನಹಳ್ಳಿಯಲ್ಲಿ ವಾಸವಿರುವ ಶ್ರೀಲಕ್ಷ್ಮಿ (21), ಪಿರಿಯಾಪಟ್ಟಣ ತಾಲೂಕು ಶಾನುಭೋಗನಹಳ್ಳಿಯ ಲಿಖಿತ(21), ಮಂಡ್ಯ ತಾಲೂಕು ಲಕ್ಷ್ಮೀಗೌಡನದೊಡ್ಡಿಯ ನಿತಿನ್ (21), ಮಂಡ್ಯದ ಹೊಸಹಳ್ಳಿ ಶ್ರೀರಾಮ ನಗರದ ಸುಹಾಸ್(21) ಮತ್ತು ಮಂಡ್ಯದ ಹಲಗೆರೆ ಗ್ರಾಮದ ಶ್ರೇಯಸ್(21) ಅಪಘಾತದಲ್ಲಿ ಮೃತಪಟ್ಟವರಾಗಿದ್ದು, ಇವರಲ್ಲಿ ನಿತಿನ್ ಡಿಪ್ಲೊಮಾ ವ್ಯಾಸಂಗ ಮಾಡುತ್ತಿದ್ದು, ಉಳಿದ ನಾಲ್ವರು ಮೈಸೂರಿನ ಎಂಐಟಿ ಕಾಲೇಜಿನಲ್ಲಿ ■6ನೇ ಪುಟಕ್ಕೆ

▶ ಅಪಘಾತದಲ್ಲಿ ಮೃತಪಟ್ಟ ಐವರು ವಿದ್ಯಾರ್ಥಿಗಳು ಸ್ನೇಹಿತರಾಗಿದ್ದು, ಮಲೆಮಹದೇಶ್ವರ ಬೆಟ್ಟಕ್ಕೆ ತೆರಳುತ್ತಿದ್ದರು. ಕಾರನ್ನು ಸುಹಾಸ್ ಎಂಬ ವಿದ್ಯಾರ್ಥಿ ಚಾಲನೆ ಮಾಡುತ್ತಿದ್ದ. ಈ ಕಾರು ಮಂಡ್ಯ ನೋಂದಣಿ ಹೊಂದಿದ್ದು, ಮಾಲೀಕರು ಯಾರು ಎಂಬುದು ತಿಳಿಯಬೇಕಾಗಿದೆ. ಟಿಪ್ಪರ್ ಚಾಲಕ ಅತೀ ವೇಗವಾಗಿ ತಿರುವಿನಲ್ಲಿ ಬೇರೊಂದು ವಾಹನವನ್ನು ಓವರ್ ಟೇಕ್ ಮಾಡಿದ್ದೇ ಈ ಅಪಘಾತಕ್ಕೆ ಕಾರಣವಾಗಿದೆ. ಟಿಪ್ಪರ್ ಚಾಲಕ ಮಂಜುನಾಥ್‌ನನ್ನು ಬಂಧಿಸಲಾಗಿದೆ.



–ಕವಿತಾ, ಚಾಮರಾಜನಗರ ಜಿಲ್ಲಾ ಎಸ್ಪಿ

ಕಿರಿದಾದ ಸೇತುವೆ

ಅಪಘಾತ ನಡೆದ ಸ್ಥಳದಲ್ಲಿನ ಸೇತುವೆ ರಸ್ತೆ ಅತ್ಯಂತ ಕಿರಿದಾಗಿದೆ. ಒಂದು ವಾಹನವಷ್ಟೇ ಸಾವಕಾಶವಾಗಿ ಸಾಗಬಹುದು. ಆದರೆ, ಮತ್ತೊಂದು ವಾಹನ ಹಿಂದಿಕ್ಕಿದ ಟಿಪ್ಪರ್ ಚಾಲಕ ಮುನ್ನುಗ್ಗಿದಾಗ ಕಾರಿಗೆ ಪಾರಾಗುವ ಅನ್ಯ ಮಾರ್ಗವೇ ಇಲ್ಲದೆ ದುರಂತ ನಡೆದು ಹೋಗಿದೆ. ಮಲೆ ಮಹದೇಶ್ವರ ಬೆಟ್ಟಕ್ಕೆ ನಿತ್ಯವೂ ಸಾವಿರಾರು ಭಕ್ತರು ಭೇಟಿ ನೀಡುತ್ತಾರೆ. ಉತ್ಸವದ ವೇಳೆ ಲಕ್ಷಾಂತರ ಜನ ಹೋಗುತ್ತಾರೆ. ಅದು ವರ್ಷಕ್ಕೆ ಕೋಟಿ ದಾಟುವುದು ಉಂಟು. ಮೇಲಾಗಿ ಮಲೆ ಮಹದೇಶ್ವರ ಪ್ರಾಧಿಕಾರಕ್ಕೆ ಕೋಟ್ಯಾಂತರ ರೂಪಾಯಿ ಆದಾಯವೂ ಇದೆ. ಇಂತಹ ಪವಿತ್ರ ಕ್ಷೇತ್ರಕ್ಕೆ ಒಳ್ಳೆ ರೋಡು, ಸೇತುವೆ ಮೂಲಕ ಭಕ್ತರಿಗೆ ಅನುಕೂಲ ಮಾಡಿಕೊಡುವುದು ಜಿಲ್ಲಾಡಳಿತ, ರಾಜ್ಯ ಸರ್ಕಾರದ ಆದ್ಯ ಕರ್ತವ್ಯವೂ ಆಗಿದ್ದು, ಇದು ಆಗದೇ ಭಕ್ತರು ಬಲಿಯಾಗುತ್ತಿದಾರೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಡಿಕ್ಕಿಯಾದ ರಭಸಕ್ಕೆ ಟಿಪ್ಪರ್ ಹಾಗೂ ಕಾರು ರಸ್ತೆಬದಿಯ ಹಳ್ಳಕ್ಕೆ ಉರುಳಿ ಬಿದ್ದಿವೆ.

ಮೈಸೂರು ಪಾಲಿಕೆ ಸೇರಿದಂತೆ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ

ಬಿ–ಖಾತಾ ನೀಡುವ ಅಭಿಯಾನಕ್ಕೆ ಚಾಲನೆ



ಬಿ–ಖಾತಾ ಪತ್ರ ನೀಡುವ ಅಭಿಯಾನಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಚಾಲನೆ ನೀಡಿದರು.

ಮೈಸೂರು, ಮಾ.1(ಆರ್‌ಕೆ)–ಹಲವಾರು ವರ್ಷಗಳಿಂದ ಮೈಸೂರು ಮಹಾನಗರಪಾಲಿಕೆ ಸೇರಿದಂತೆ ಜಿಲ್ಲೆಯ ವಿವಿಧ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬರುವ ಅನಧಿಕೃತ ಬಡಾವಣೆಗಳಲ್ಲಿನ ನಿವೇಶನ ಹಾಗೂ ಮನೆಗಳ ಅರ್ಹ ಫಲಾನುಭವಿಗಳಿಗೆ ಬಿ–ಖಾತಾ ಪತ್ರ ನೀಡುವ ಅಭಿಯಾನಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಚಾಲನೆ ನೀಡಿದರು.

ಮೈಸೂರು ಮಹಾನಗರಪಾಲಿಕೆಯ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಅರ್ಹ ಫಲಾನುಭವಿಗಳಿಗೆ ಸಾಂಕೇತಿಕವಾಗಿ ಬಿ–ಖಾತಾ ಪತ್ರ ವಿತರಿಸಿದ ಸಚಿವರು, ಕರ್ನಾಟಕ ಸರ್ಕಾರವು ಸಾರ್ವಜನಿಕರ ಅನುಕೂಲಕ್ಕಾಗಿ ಅಗತ್ಯ ದಾಖಲೆಗಳಿಲ್ಲದೆ, ಸರ್ಕಾರಕ್ಕೆ ತೆರಿಗೆಯನ್ನೂ ಪಾವತಿಸದೆ ಇದ್ದ ನಿವೇಶನ ಹಾಗೂ ಮನೆಗಳಿಗೆ ಅಧಿಕೃತ ದಾಖಲೆಗಳನ್ನು ಕಲ್ಪಿಸುವ ಮೂಲಕ, ಆದಾಯ ಸಂಗ್ರಹ ■6ನೇ ಪುಟಕ್ಕೆ

ಬಿ–ಖಾತಾ ಪಡೆಯುವ ವಿಧಾನ

2025ರ ಫೆಬ್ರವರಿಯಿಂದ ಜಾರಿಗೆ ಬಂದಿರುವ ಆದೇಶದಂತೆ ಬಿ–ಖಾತಾ ಪಡೆಯಲು ಕೆಲವು ನಿಯಮಗಳನ್ನು ಅನುಸರಿಸಬೇಕಿದೆ. ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಇ–ಆಸ್ತಿ ತಂತ್ರಾಂಶ ಆಧರಿಸಿ ಬಿ–ಖಾತಾ ನೀಡುವ ಮೂಲಕ ಅನಧಿಕೃತ ಆಸ್ತಿಗಳನ್ನು ಅಧಿಕೃತಗೊಳಿಸಲು ಸರ್ಕಾರ ನಿರ್ಧರಿಸಿದೆ. ಈವರೆಗೆ ಇ–ಆಸ್ತಿ ತಂತ್ರಾಂಶದಲ್ಲಿ ಅಧಿಕೃತ ಆಸ್ತಿಗಳಿಗೆ ಮಾತ್ರ ಇ–ಖಾತಾ ಸೃಜಿಸುವ ಪರಿಪಾಠವಿತ್ತು. ಯೋಜನಾ ಪ್ರಾಧಿಕಾರದಿಂದ ಅನುಮೋದನೆಯಾಗದಿರುವ ವಸತಿ ■6ನೇ ಪುಟಕ್ಕೆ

ಅಂತಾರಾಷ್ಟ್ರೀಯ ಚಿತ್ರೋತ್ಸವಕ್ಕೆ ಚಾಲನೆ

ಮೈಸೂರಲ್ಲಿ ವಿಶ್ವದರ್ಜೆ ಫಿಲ್ಮ್‌ಸಿಟಿ ನಿರ್ಮಾಣ

ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ

ಬೆಂಗಳೂರು, ಮಾ.1– ವಿಶ್ವದರ್ಜೆಯ ಫಿಲ್ಮ್‌ಸಿಟಿಯನ್ನು ಮೈಸೂರಿನಲ್ಲಿ ನಿರ್ಮಿಸುತ್ತೇವೆ. ಇದಕ್ಕಾಗಿ ಈಗಾಗಲೇ 150 ಎಕರೆ ಜಾಗವನ್ನು ನೀಡಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು.

ವಿಧಾನಸೌಧದ ಗ್ರಾಂಡ್ ಸ್ಟೆಪ್ಸ್‌ನ ಸಂಭ್ರಮದ ಕಾರ್ಯಕ್ರಮದಲ್ಲಿ 16ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನ ಚಿತ್ರೋತ್ಸವವನ್ನು ಉದ್ಘಾಟಿಸಿ ಮಾತನಾಡಿದರು. ಅಂತಾರಾಷ್ಟ್ರೀಯ ಚಿತ್ರೋತ್ಸವ ವಿಶ್ವ ಸಮುದಾಯದ ಸಂಸ್ಕೃತಿಯ ಪ್ರತಿಬಿಂಬ. ಇದನ್ನು ಸದುಪಯೋಗಪಡಿಸಿಕೊಳ್ಳಿ ಎಂದು ಕರೆ ನೀಡಿದರು.

ಕರ್ನಾಟಕವೇ ಒಂದು ಜಗತ್ತು. ಇಲ್ಲಿ ಎಲ್ಲಾ ಅವಕಾಶಗಳನ್ನು ಸೃಷ್ಟಿಸಬಹುದು. ಇದಕ್ಕಾಗಿ ವಿಶ್ವದರ್ಜೆಯ ಅತ್ಯುನ್ನತ ಗುಣಮಟ್ಟದ ಫಿಲ್ಮ್ ಸಿಟಿಯನ್ನು ಮೈಸೂರಿನಲ್ಲಿ ನಿರ್ಮಿಸುತ್ತಿದ್ದೇವೆ. ತಂತ್ರಜ್ಞಾನದ ಜೊತೆಗೆ ಮಾನವೀಯ ಮೌಲ್ಯಗಳನ್ನು ಬೆಸೆಯುವ ಸಿನಿಮಾಗಳನ್ನು ವಿಶ್ವದರ್ಜೆ ಗುಣಮಟ್ಟದಲ್ಲಿ ಇಲ್ಲಿ ನಿರ್ಮಾಣ ಆಗಬೇಕು ಎಂದು ಆಶಿಸಿದರು. ನಮ್ಮಲ್ಲಿ ಅಸಹನೆ ಹೆಚ್ಚುತ್ತಿರುವುದರಿಂದ ಸಮಾಜದಲ್ಲಿ ಅಸಂತೋಷ ಹೆಚ್ಚುತ್ತಿದೆ. ಸಂಪತ್ತಿನ ಅಸಮಾನ ಹಂಚಿಕೆ ಈ ಅಸಂತೋಷಕ್ಕೆ ಕಾರಣ. ದೇಶದ 1% ಜನರ ಕೈಯಲ್ಲಿ ದೇಶದ 50% ಸಂಪತ್ತು ■6ನೇ ಪುಟಕ್ಕೆ


ಅಂತಾರಾಷ್ಟ್ರೀಯ ಚಲನ ಚಿತ್ರೋತ್ಸವವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು.

ಕುಡಿಯುವ ನೀರಿನ ಪೈಪ್‌ಗೆ ಕನ್ನ ಹಾಕಿದರೆ ಕಠಿಣ ಕ್ರಮ; ಶಿಕ್ಷಕರು ಪಾಠ ಮಾಡುವಾಗ ಮೊಬೈಲ್ ಮುಟ್ಟಬಾರದು!

●ಚಾಮುಂಡೇಶ್ವರಿ ಕ್ಷೇತ್ರದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳಿಗೆ ಜಿ.ಟಿ.ದೇವೇಗೌಡರ ತಾಕೀತು ●ಹಾಸ್ಟೆಲ್ ಊಟದ ಗುಣಮಟ್ಟ ಖಾತರಿಗೆ ನೀವೆ ಊಟ ಮಾಡಿ ನೋಡಿ! ●ಭೂಮಿ ಕಬಳಿಕೆ ಜಾಸ್ತಿ; ಸರ್ಕಾರಿ ಶಾಲಾ ಜಾಗ ರಕ್ಷಣೆಗೆ ಖಾತೆ ಮಾಡಿಸಿ

ಮೈಸೂರು, ಫೆ.1(ಬಿಎಲ್‌ಯು)–ಕುಡಿಯುವ ನೀರಿನ ಪೈಪ್‌ಗೆ ಕನ್ನ ಹಾಕಿದರೆ ಕಠಿಣ ಕ್ರಮ! ಒಂದು ತಿಂಗಳಲ್ಲಿ ಸರ್ಕಾರಿ ಶಾಲೆಗಳ ಖಾತಾ ಪ್ರಕ್ರಿಯೆ ಪೂರ್ಣಗೊಳಿಸಿ. ಶಾಲೆಗಳಲ್ಲಿ ಶಿಕ್ಷಕರು ಪಾಠದ ವೇಳೆ ಮೊಬೈಲ್ ಬಳಸಬಾರದು. ಅಧಿಕಾರಿಗಳು ಹಾಸ್ಟೆಲ್‌ನಲ್ಲಿ ಊಟ ಮಾಡಿ ಗುಣಮಟ್ಟ ಖಾತ್ರಿ ಪಡಿಸಿಕೊಳ್ಳಬೇಕು. ಸರ್ಕಾರಿ ಆಸ್ಪತ್ರೆ ಗಳಲ್ಲಿ ಉಚಿತ ವೈದ್ಯಕೀಯ ಸೌಲಭ್ಯದ ಬಗ್ಗೆ ರೋಗಿಗಳಿಗೆ ಮಾಹಿತಿ ನೀಡಿ. ಕೃಷಿ ಪಂಪ್‌ಸೆಟ್‌ಗಳ ಅಕ್ರಮ ಸಕ್ರಮಗೊಳಿಸಿ. ಶಿಕ್ಷಣದ ಮಹತ್ವ ತಿಳಿಸಿ ಮಕ್ಕಳನ್ನು ಶಾಲೆಗೆ ಕರೆ ತನ್ನಿ.

ಮೈಸೂರಿನ ಪ್ರಾದೇಶಿಕ ಆಯುಕ್ತರ ಕಚೇರಿಯ ಸಭಾಂಗಣದಲ್ಲಿ ಇಂದು ಚಾಮುಂಡೇಶ್ವರಿ ಶಾಸಕ ಜಿ.ಟಿ.ದೇವೇಗೌಡರು ಕ್ಷೇತ್ರದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳಿಗೆ ಖಡಕ್ ಪಾಠ ಮಾಡಿದ ಪರಿ ಇದು.

ನೀರಿಗೆ ಕನ್ನ ಹಾಕಬೇಡಿ: ಬೇಸಿಗೆ ಬರುತ್ತಿರುವ ಕಾರಣ ಕುಡಿಯುವ ನೀರಿಗೆ ಯಾವುದೇ ರೀತಿಯಲ್ಲೂ ತೊಂದರೆ ಆಗಬಾರದು. ಜನರಿಗೆ ಸಮರ್ಪಕ ಕುಡಿಯುವ ನೀರು ಸರಬರಾಜು ಮಾಡಬೇಕು ಎಂದು ಜಿ.ಟಿ.ದೇವೇಗೌಡರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕೆಆರ್‌ಎಸ್‌ನಿಂದ ಕುಡಿಯುವ ನೀರು ಸರಬರಾಜು ಮಾಡುತ್ತಿರುವ ಬಸ್ತಿಪುರದ ಬಳಿ ಪೈಪ್ ಒಡೆದು ಹಾಕಿ ಕೃಷಿಗೆ ನೀರು ಬಳಸಿಕೊಳ್ಳುತ್ತಿದ್ದಾರೆ. ಇದರಿಂದ ಸಮರ್ಪಕ ಕುಡಿಯುವ ನೀರು ಪೂರೈಸಲು ಅಡ್ಡಿಯಾಗಿದೆ ಎಂದು ಅಧಿಕಾರಿಗಳು ದೂರಿದರು.

ಈ ಸಂಬಂಧ ಸಭೆಯಲ್ಲೇ ಕರ್ನಾಟಕ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯ ಸೂಪರಿಂಟೆಂಡೆಂಟ್ ಇಂಜಿನಿಯರ್ ವೀರಪ್ಪ ಅವರಿಗೆ ದೂರವಾಣಿ ಕರೆ ಮಾಡಿದ ಜಿ.ಟಿ.ದೇವೇಗೌಡರು, ಕುಡಿಯುವ ನೀರನ್ನು ಅನಧಿಕೃತವಾಗಿ ಕೃಷಿಗೆ ಬಳಕೆ ಮಾಡಿಕೊಳ್ಳಲಾಗುತ್ತಿದೆ. ಈ ವಿಚಾರದಲ್ಲಿ ಯಾರು ಎಷ್ಟೆ ಪ್ರಭಾವಿಗಳಾಗಿದ್ದರೂ ಮುಲಾಜಿಲ್ಲದೆ ಕ್ರಮ ಕೈಗೊಳ್ಳಿ. ಪೊಲೀಸರಿಗೆ ದೂರು ನೀಡಿ, ಕ್ರಮ ವಹಿಸಿ ಎಂದು ಸೂಚಿಸಿದರು.

ಶಾಲೆಗೆ ಖಾತೆ ಮಾಡಿಸಿ: ಈಗ ಭೂಮಿಗೆ ಚಿನ್ನದ ಬೆಲೆ ಇದೆ. ಈ ಕಾರಣದಿಂದ ಸರ್ಕಾರಿ ಶಾಲೆಗಳ ಜಾಗ ಒತ್ತುವರಿ ಮಾಡಿಕೊಳ್ಳುವ ಹಾಗೂ ಅತಿಕ್ರಮಿಸಿಕೊಳ್ಳುವ ಪ್ರಯತ್ನ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಶಿಕ್ಷಣ ಇಲಾಖೆ, ಕಂದಾಯ ಇಲಾಖೆ ಹಾಗೂ ಸರ್ವೆ ಇಲಾಖೆ ಜಂಟಿಯಾಗಿ ಸರ್ವೆ ಮಾಡಿ ಸರ್ಕಾರಿ ಶಾಲೆಗಳ ಸ್ವತ್ತು ಉಳಿಸಬೇಕು. ಇನ್ನು ■6ನೇ ಪುಟಕ್ಕೆ


ಮೈಸೂರಿನ ಪ್ರಾದೇಶಿಕ ಆಯುಕ್ತರ ಕಚೇರಿಯ ಸಭಾಂಗಣದಲ್ಲಿ ಶನಿವಾರ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಕ್ಷೇತ್ರದ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ಸಿದ್ದರಾಮಯ್ಯ ಬಜೆಟ್‌ನಲ್ಲಿ 'ಗ್ರೇಟರ್ ಮೈಸೂರು' ಗ್ಯಾರಂಟಿ!

ಮೈಸೂರು, ಮಾ.1(ಬಿಎಲ್‌ಯು)–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಬಾರಿ ಮಂಡಿಸುವ ಬಜೆಟ್‌ನಲ್ಲಿ ಗ್ರೇಟರ್ ಮೈಸೂರು ಘೋಷಣೆ ಮಾಡುವ ವಿಶ್ವಾಸವಿದೆ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಇಂದಿಲ್ಲಿ ತಿಳಿಸಿದರು. ನಗರದ ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ಇಂದು ಚಾಮುಂಡೇಶ್ವರಿ ಕ್ಷೇತ್ರದ ಪ್ರಗತಿ ಪರಿಶೀಲನಾ ಸಭೆ ನಡೆಸುವ ಮುನ್ನ ಪತ್ರಕರ್ತರ ಜೊತೆ ಮಾತನಾಡಿದ ಅವರು, ನಗರ ಪಾಲಿಕೆ, ನಗರಸಭೆ ಹಾಗೂ ಪಟ್ಟಣ ಪಂಚಾಯಿತಿ ಸೇರಿಸಿ ಗ್ರೇಟರ್ ಮೈಸೂರು ಮಾಡಿದರೆ ನಗರದ ಸರ್ವತೋಮುಖ ಅಭಿವೃದ್ಧಿ ಸಾಧ್ಯವಾಗಲಿದೆ ಎಂದು ಅಭಿಪ್ರಾಯಪಟ್ಟರು. ಗ್ರೇಟರ್ ಮೈಸೂರು ಮಾಡುವ ಸಂಬಂಧ ಈಗಾಗಲೇ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದ್ದೇನೆ. ಹಾಗಾಗಿ ಈ ಬಾರಿ ಮಂಡಿಸುವ ■6ನೇ ಪುಟಕ್ಕೆ

ಸಿದ್ದರಾಮಯ್ಯರಂತೆ ಡಿ.ಕೆ.ಶಿವಕುಮಾರ್ ಕೂಡ ಸಿಎಂ ಆಗುತ್ತಾರೆ

ಸಚಿವನಾಗಿ, ವಿರೋಧ ಪಕ್ಷದ ನಾಯಕನಾಗಿ, ಉಪಮುಖ್ಯ ಮಂತ್ರಿಯಾಗಿ ಅಧಿಕಾರ ನಡೆಸಿದ ಸಿದ್ದರಾಮಯ್ಯ ಮುಖ್ಯಮಂತ್ರಿ ಆದಂತೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೂಡ ಮುಖ್ಯಮಂತ್ರಿ ಆಗುತ್ತಾರೆ ಎಂದು ಶಾಸಕ ಜಿ.ಟಿ.ದೇವೇಗೌಡರು ವಿಶ್ವಾಸ ವ್ಯಕ್ತಪಡಿಸಿದರು. ಡಿ.ಕೆ.ಶಿವಕುಮಾರ್ ಅವರು ಬಿಜೆಪಿಗೆ ಸೇರುತ್ತಾರೋ, ಇಲ್ಲವೊ ಎಂಬ ವಿಚಾರದ ಬಗ್ಗೆ ನಾನು ಪ್ರತಿಕ್ರಿಯೆ ನೀಡುವುದಿಲ್ಲ. ವಿಶ್ಲೇಷಣೆ ಕೂಡ ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಕರ್ನಾಟಕದಲ್ಲಿ 136 ಸ್ಥಾನ ಪಡೆದಿರುವ ಕಾಂಗ್ರೆಸ್ ಸರ್ಕಾರ ಗಟ್ಟಿಯಾಗಿದೆ. ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದಾರೆ, ■6ನೇ ಪುಟಕ್ಕೆ

ಬಜೆಟ್ ವೇಳೆ ಬೆಂಗಳೂರು ರೈಲ್ವೆ ನಿಲ್ದಾಣದಿಂದ ಬೃಹತ್ ವಿಧಾನಸೌಧ ಚಲೋ ಪಾದಯಾತ್ರೆ

ಮೈಸೂರು, ಮಾ.1(ಜಿಎ)–ಕರ್ನಾಟಕ ರಾಜ್ಯ ರೈತ ಸಂಘಗಳ ಏಕೀಕರಣ ಸಮಿತಿ ವತಿಯಿಂದ ರೈತರ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ, ಬಜೆಟ್ ಸಂದರ್ಭದಲ್ಲಿ ಬೆಂಗಳೂರಿನ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದಿಂದ ವಿಧಾನ ಸೌಧದವರೆಗೆ ಬೃಹತ್ ವಿಧಾನಸೌಧ ಚಲೋ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನ ದಲ್ಲಿ ಸುದ್ದಿಗೋಷ್ಠಿಯಲ್ಲಿ ರೈತ ಮುಖಂಡ ಪಚ್ಚೆ ನಂಜುಂಡಸ್ವಾಮಿ ಈ ವಿಷಯ ತಿಳಿಸಿ, ರೈತರ ಸಂಪೂರ್ಣ ಸಾಲ ಮನ್ನಾ ಆಗ ಬೇಕು, ಸ್ವಾಮಿನಾಥನ್ ವರದಿ ಜಾರಿ ಗೊಳಿಸಬೇಕು, ಭೂ ಸುಧಾರಣಾ ಕಾಯ್ದೆ, ಎಪಿಎಂಸಿ ಕಾಯ್ದೆ, ವಿದ್ಯುತ್ ಖಾಸಗೀ ಕರಣ ಕಾಯ್ದೆ ಹಿಂಪಡೆಯಬೇಕು, ಕಬ್ಬಿಗೆ ಪ್ರತಿ ಟನ್‌ಗೆ 5 ಸಾವಿರ ರೂ. ಘೋಷಿಸ ಬೇಕು, ಬಗರ್‌ಹುಕುಂ ಅಕ್ರಮ ಸಾಗು ವಳಿದಾರರನ್ನು ಸಕ್ರಮಗೊಳಿಸಿ ಅವರಿಗೆ ಸಾಗುವಳಿ ಪ್ರಮಾಣಪತ್ರ ನೀಡಬೇಕು. ಕಳಸಾ ಬಂಡೂರಿ, ಮಹದಾಯಿ, ಕೃಷ್ಣಾ ಸೇರಿದಂತೆ ಎಲ್ಲಾ ನದಿಗಳ ಸಮಸ್ಯೆಗಳನ್ನು ಶೀಘ್ರ ಬಗೆಹರಿಸಬೇಕು, ಮೇಕೆದಾಟು ಅಣೆಕಟ್ಟೆ ನಿರ್ಮಾಣ ಆಗಬೇಕು, ಹಗಲು ಹೊತ್ತು 10 ಗಂಟೆ 3 ಫೇಸ್ ವಿದ್ಯುತ್ ರೈತ ರಿಗೆ ನೀಡಬೇಕು. ರಾತ್ರಿ ಹೊತ್ತು ನಿರಂತರ ವಿದ್ಯುತ್ ನೀಡಬೇಕು ಎಂದು ಒತ್ತಾಯಿಸಿ ಚಲೋ ಮಾಡಲಾಗುತ್ತಿದೆ ಎಂದರು. ಗೋಷ್ಠಿ ಯಲ್ಲಿ ವಿದ್ಯಾಸಾಗರ್, ಇಮ್ಮಾವು ರಘು, ಸತೀಶ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ವಿವಿ ಹಳೇ ವಿದ್ಯಾರ್ಥಿಗಳ ಸಂಘದ ಚುನಾವಣೆಗೆ ಕೋರ್ಟ್ ತಡೆಯಾಜ್ಞೆ

ಮೈಸೂರು,ಮಾ.1(ಪಿಎಂ)– ಮಾರ್ಚ್ 2ರಂದು ನಿಗದಿಯಾಗಿದ್ದ ಯೂನಿವರ್ಸಿಟಿ ಆಫ್ ಮೈಸೂರ್ ಅಲುಮ್ನಿ ಅಸೋಸಿಯೇಷನ್‌ನ (ಯುಎಂಎಎ/ಹಳೇ ವಿದ್ಯಾರ್ಥಿಗಳ ಸಂಘ) ಚುನಾವಣೆಗೆ ಮೈಸೂರಿನ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಾಯ ತಡೆಯಾಜ್ಞೆ ನೀಡಿದ್ದು, ಮುಂದಿನ ವಿಚಾ ರಣೆಯನ್ನು ಮಾ.24ಕ್ಕೆ ನಿಗದಿಗೊಳಿಸಿದೆ.

ನಿವೃತ್ತ ಐಜಿಪಿ ಕೆ.ಅರ್ಕೇಶ್ ಅವರು ಚುನಾವಣೆಗೆ ತಡೆ ಕೋರಿ ಯುಎಂಎಎ ಅಧ್ಯಕ್ಷ ಪ್ರೊ.ಎಸ್.ಎನ್.ಹೆಗ್ಡೆ, ಕಾರ್ಯ ದರ್ಶಿ ಪ್ರೊ.ಎಸ್.ಶ್ರೀಕಂಠಸ್ವಾಮಿ ವಿರುದ್ಧ ನ್ಯಾಯಾಲಯದ ಮೊರೆ ಹೋಗಿದ್ದರು. ಈ ಸಂಬಂಧ ಶನಿವಾರ ವಿಚಾರಣೆ ನಡೆಸಿದ ನ್ಯಾಯಾಲಯವು, ಮಾ.2 ರಂದು ನಿಗದಿಯಾಗಿದ್ದ ಯುಎಂಎಎ ಪದಾಧಿಕಾರಿಗಳ ಚುನಾವಣೆಗೆ ತಡೆಯಾಜ್ಞೆ ನೀಡಿ ಆದೇಶಿಸಿದೆ ಈ ಸಂಬಂಧ ಕೋರ್ಟ್ ತಡೆಯಾಜ್ಞೆ ಪ್ರತಿ ಲಗತಿಸಿ ಯುಎಂಎಎ ಕಾರ್ಯದರ್ಶಿಗಳಿಗೆ ಕೆ.ಅರ್ಕೇಶ್ ಪತ್ರ ಸಹ ಬರೆದಿದ್ದು, ನ್ಯಾಯಾಲಯದ ಆದೇ ಶದ ಪ್ರಕಾರ ಚುನಾವಣೆ ನಡೆಸದಂತೆ ಕೋರಿದ್ದಾರಲ್ಲದೆ, ಅದಾಗ್ಯೂ ಚುನಾವಣೆ ನಡೆಸಿದರೆ ನ್ಯಾಯಾಲಯದ ಆದೇಶದ ಉಲ್ಲಂಘನೆಯಾಗಲಿದೆ ಎಂದು ಸಹ ಪತ್ರದಲ್ಲಿ ಎಚ್ಚರಿಸಿದ್ದಾರೆ.

ಛತ್ತೀಸ್‌ಗಢದಲ್ಲಿ ಗುಂಡಿನ ಚಕಮಕಿ; 2 ನಕ್ಸಲರು ಬಲಿ

ಸುಕ್ಮಾ: ಛತ್ತೀಸ್‌ಗಢದ ಸುಕ್ಮಾ ಜಿಲ್ಲೆ ಯಲ್ಲಿ ಶನಿವಾರ ಭದ್ರತಾ ಪಡೆಯೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಇಬ್ಬರು ನಕ್ಸಲರು ಸಾವನ್ನಪ್ಪಿದ್ದಾರೆ ಎಂದು ಪೊಲೀ ಸರು ತಿಳಿಸಿದ್ದಾರೆ. ಕಿಸ್ತಾರಾಮ್ ಪೊಲೀಸ್ ಠಾಣಾ ವ್ಯಾಪ್ತಿಯ ಅರಣ್ಯದಲ್ಲಿ ಇಂದು ಬೆಳಗ್ಗೆ ಗುಂಡಿನ ಚಕಮಕಿ ನಡೆದಿದ್ದು, ಭದ್ರತಾ ಸಿಬ್ಬಂದಿಯ ಜಂಟಿ ತಂಡವು ನಕ್ಸಲೈಟ್ ವಿರೋಧಿ ಕಾರ್ಯಾಚರಣೆ ನಡೆಸುತ್ತಿತ್ತು ಎಂದು ಸುಕ್ಮಾ ಪೊಲೀಸ್ ವರಿಷ್ಠಾಧಿಕಾರಿ ಕಿರಣ್ ಚವಾಣ್ ಹೇಳಿದ್ದಾರೆ.

ಈ ಪ್ರದೇಶದಲ್ಲಿ ಮಾವೋವಾದಿಗಳ ಉಪಸ್ಥಿತಿಯ ಬಗ್ಗೆ ಖಚಿತ ಮಾಹಿತಿಯ ಆಧಾರದ ಮೇಲೆ ಶುಕ್ರವಾರ ಪ್ರಾರಂಭಿ ಸಲಾದ ಕಾರ್ಯಾಚರಣೆಯಲ್ಲಿ ಜಿಲ್ಲಾ ಮೀಸಲು ಗಾರ್ಡ್(ಡಿಆರ್‌ಜಿ) ಮತ್ತು ಕೋಬ್ರಾ ಸಿಬ್ಬಂದಿ ಭಾಗಿಯಾಗಿದ್ದಾರೆ ಎಂದರು. ಎನ್‌ಕೌಂಟರ್ ಸ್ಥಳದಿಂದ ಇಲ್ಲಿವರೆಗೆ ಇಬ್ಬರು ನಕ್ಸಲರ ಶವಗಳನ್ನು ವಶಪಡಿಸಿಕೊಳ್ಳಲಾಗಿದೆ ಮತ್ತು ಆ ಪ್ರದೇಶ ದಲ್ಲಿ ಇನ್ನೂ ಶೋಧ ಕಾರ್ಯಾಚರಣೆ ನಡೆಯುತ್ತಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಮೈಸೂರು ಮೈತ್ರಿ ಆಸ್ಪತ್ರೆಯ ಡಾ. ಪ್ರಸನ್ನ ಶಂಕರ್ ಇನ್ನಿಲ್ಲ



ಮೈಸೂರು, ಮಾ. 1– ಮೈಸೂರಿನ ಚಾಮುಂಡಿಪುರಂನ ನಾರಾ ಯಣಶಾಸ್ತ್ರಿ ರಸ್ತೆಯಲ್ಲಿರುವ ಮೈತ್ರಿ ಆಸ್ಪತ್ರೆ ಮಾಲೀಕರಾದ ಡಾ. ಎಸ್.ಪ್ರಸನ್ನ ಶಂಕರ್ (74) ಶನಿವಾರ ನಿಧನರಾದರು.

ಶ್ರೀಯುತರು ಪತ್ನಿ ಇಂದು ಮತಿ, ಇಬ್ಬರು ಪುತ್ರಿಯರು – ಡಾ.ಮೈತ್ರಿ (ಲಂಡನ್‌ನಲ್ಲಿ ನೆಲೆಸಿದ್ದಾರೆ) ಮತ್ತು ಅಮೂಲ್ಯ, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಇವರು ಮೈಸೂ ರಿನ ಅಗ್ರಹಾರದ ಕಡ್ಲೆಪುರಿ ನಂಜುಂಡಪ್ಪ ಅಂಡ್ ಸನ್ಸ್ ಕುಟುಂಬಕ್ಕೆ ಸೇರಿದವರಾಗಿ ದ್ದಾರೆ. ಅಂತ್ಯಕ್ರಿಯೆ ವಿದ್ಯಾರಣ್ಯಪುರಂನ ವೀರಶೈವ ಲಿಂಗಾಯತ ರುದ್ರಭೂಮಿಯಲ್ಲಿ ನಾಳೆ (ಮಾ.2) ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡಾ.ಪ್ರಸನ್ನ ಶಂಕರ್, ಹಲವಾರು ಸಂಘ ಸಂಸ್ಥೆಗಳೊಂದಿಗೆ ಒಡನಾಟ ಹೊಂದಿದ್ದು, ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್ (ಜೆಡಬ್ಲ್ಯುಜಿಸಿ)ನ ಮಾಜಿ ಖಜಾಂಚಿಯಾಗಿದ್ದರು. ಮೈಸೂರು ಅಸೋಸಿಯೇಷನ್ ಆಫ್ ಹಾಸ್ಪಿಟಲ್ಸ್, ನರ್ಸಿಂಗ್ ಹೋಮ್ಸ್, ಕ್ಲಿನಿಕ್ಸ್ ಅಂಡ್ ಡಯಾಗ್ನೋಸ್ಟಿಕ್ಸ್ ಸೆಂಟರ್ಸ್ (ಮಹಾನ್) ಸಂಸ್ಥಾಪಕ ಟ್ರಸ್ಟಿ, ಫ್ಯಾಮಿಲಿ ಫಿಸಿಷಿಯನ್ಸ್ ಅಸೋಸಿಯೇಷನ್‌ನ ಸಂಸ್ಥಾಪಕ ಕಾರ್ಯದರ್ಶಿ, ಇಂಡಿಯನ್ ಮೆಡಿಕಲ್ ಅಸೋಸಿಯೇಷನ್, ಮೈಸೂರು ಚಾಪ್ಟರ್ (ಐಎಂಎ) ಮಾಜಿ ಅಧ್ಯಕ್ಷರು, ಐಎಂಎ, ಕರ್ನಾಟಕ ಚಾಪ್ಟರ್‌ನ ಮಾಜಿ ಉಪಾಧ್ಯಕ್ಷರು ಮತ್ತು ಮೈಸೂರು ಮೆಡಿಕಲ್ ಕಾಲೇಜಿನ ಅಲೂಮ್ನಿ ಅಸೋಸಿ ಯೇಷನ್ (ಎಂಎಎ) ಸಲಹಾ ಸಮಿತಿ ಸದಸ್ಯರು ಮತ್ತು ಬಸವ ಮಿತ್ರ ಕೂಟದ ಸಂಸ್ಥಾಪಕರಾಗಿಯೂ ಸೇವೆ ಸಲ್ಲಿಸಿದ್ದರು.

ಹೆಸರಾಂತ ಗಮಕ ಕಲಾವಿದೆ ಪಿ.ವಿಲಾಸಕುಮಾರಿ ಶರ್ಮಾ



ಮೈಸೂರಿನ ಖ್ಯಾತ ಗಮಕಿ ಮತ್ತು ಸಂಗೀತ ವಿದುಷಿ ಶ್ರೀಮತಿ ಪಿ. ವಿಲಾಸಕುಮಾರಿ ಶರ್ಮಾ ಫೆ.23ರಂದು ನಿಧನರಾದರು. ಅವರಿಗೆ 93 ವರ್ಷ ವಯ ಸ್ಸಾಗಿತ್ತು. ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು, ಮರಿ ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗ ಮತ್ತು ಶಿಷ್ಯ ವೃಂದ ವನ್ನು ಅಗಲಿದ್ದಾರೆ. ಆಕಾಶವಾಣಿ ಹಿರಿಯ ಶ್ರೇಣಿಯ ಕಲಾವಿದೆ ಯಾಗಿದ್ದ ಅವರು ಕರ್ನಾಟಕ ಸಂಗೀತ, ನೃತ್ಯ ಅಕಾಡೆಮಿಯಿಂದ ಗಮಕ ಕಲಾಶ್ರೀ ಪ್ರಶಸ್ತಿಯನ್ನು ಪಡೆದಿದ್ದರು. ಅವರ ಸಂಗೀತ ಮತ್ತು ಗಮಕ ಕ್ಷೇತ್ರ ಸೇವೆಗಾಗಿ ಅನೇಕ ಸಂಘ ಸಂಸ್ಥೆಗಳು ಸನ್ಮಾನಿಸಿದ್ದವು. ಶ್ರೀಕ್ಷೇತ್ರ ಶ್ರವಣ ಬೆಳಗೊಳದ ಮಠದಿಂದ ಶ್ರೀ ಗೊಮ್ಮಟೇಶ್ವರ ವಿದ್ಯಾಪೀಠ ಸಾಂಸ್ಕೃತಿಕ ಪ್ರಶಸ್ತಿ ಪಡೆದಿದ್ದರು. ಸುತ್ತೂರು ಮಠ ಸೇರಿದಂತೆ ಅನೇಕ ಮಠಮಾನ್ಯಗಳಿಂದ ಗೌರವ ಪಡೆದಿದ್ದರು.



ಡಾ.ಸಿ.ಎನ್.ರವಿಕುಮಾರ್


ಮೈಸೂರಿನ ಎಸ್‌ಜೆಸಿಇ ಕಾಲೇಜಿನ ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥರು, ನಿವೃತ್ತ ಪ್ರಾಧ್ಯಾಪಕರು ಹಾಗೂ ಮೈಸೂರಿನ ಮೈಸೆಮ್ ಇಂಜಿನಿಯರಿಂಗ್ ಕಾಲೇಜಿನ ನಿವೃತ್ತ ಪ್ರಿನ್ಸಿಪಾಲರಾದ ಡಾ.ಸಿ.ಎನ್. ರವಿಕುಮಾರ್ (69) ಹೃದಯಾಘಾತದಿಂದ ನಿನ್ನೆ (ಶುಕ್ರವಾರ) ನಗರದ ಮಣಿಪಾಲ್ ಆಸ್ಪತ್ರೆಯಲ್ಲಿ ನಿಧನರಾದರು.

ಡಾ.ರವಿಕುಮಾರ್ ಅವರು ಮಾತೃ ಮಂಡಳಿ ವೃತ್ತದ ಸಮೀಪದ ನಿವಾಸಿಯಾಗಿದ್ದು, ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ (ಇಂಡಿಯಾ) ಫೆಲೋ ಆಗಿದ್ದರು. ಇವರು ಮಹಾಜನ ಶಿಕ್ಷಣ ಸಂಸ್ಥೆ ಸಲಹೆಗಾರರು, ವಾಸವಿ ವೃಂದ ಮೈಸೂರು ಪಶ್ಚಿಮದ ಟ್ರಸ್ಟಿಯಾಗಿದ್ದರು. ಶ್ರೀಯುತರು ಪತ್ನಿ ರಜಿನಿ, ಪುತ್ರಿ ಸಿಂಧುಜಾ, ಸಾಫ್ಟ್‌ವೇರ್ ಇಂಜಿನಿ ಯರ್, ಅಳಿಯ ವಿಜಯಕೃಷ್ಣ (ಡಲ್ಲಾಸ್), ಪುತ್ರ ನಾರಾಯಣ, ಸೊಸೆ ಅನುಷಾ ಸಾಂತಾ ಕ್ಲಾರಾದಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂನ ರುದ್ರಭೂಮಿಯಲ್ಲಿ ನಾಳೆ (ಮಾ.2) ಮಧ್ಯಾಹ್ನ 2 ಗಂಟೆಗೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಾಡಪಂಡ ಕಮಲು ಪಾರ್ವತಿ



ಮೈಸೂರಿನ ಜಯಲಕ್ಷ್ಮಿಪುರಂ ನಿವಾಸಿ ದಿವಂಗತ ಮಾಡಪಂಡ ಅಣ್ಣಯ್ಯ ಅವರ ಪತ್ನಿ ಮಾಡಪಂಡ ಕಮಲು ಪಾರ್ವತಿ (ಮನವಟ್ಟಿರ) ಶನಿವಾರ ನಿಧನರಾದರು. ಅವರಿಗೆ 86 ವರ್ಷ ವಯಸ್ಸಾಗಿತ್ತು. ಮೃತರು ನಾಲ್ವರು ಪುತ್ರಿಯರು– ಶೋಭಾ ಚೇನಂಡ, ಶ್ವೇತಾ ಜಯಪ್ರಕಾಶ್ ಮಲ್ಲಂಗಡ, ಸಪ್ನಾ ದಿನೇಶ್ ಚಂಗುಲಂಡ ಮತ್ತು ನಿಶಾ ದಿಲೀಪ್ ತಾತಂಡ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂನ ಚಿರಶಾಂತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಎನ್.ಆರ್.ಮೊಹಲ್ಲಾ ಪಿ.ಥಾಮಸ್

ಮೈಸೂರಿನ ಎನ್.ಆರ್.ಮೊಹಲ್ಲಾ ನಿವಾಸಿ ಪಿ.ಥಾಮಸ್ (54) ಶನಿವಾರ ಬೆಳಗ್ಗೆ ನಿಧನರಾದರು. ಶ್ರೀಯುತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗಾಂಧಿನಗರದ ಸಿಎಸ್‌ಐ ನೂತನ ಸಿಮೆಟ್ರಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇಂದಿನಿಂದ ರಂಜಾನ್ ಉಪವಾಸ

ಮೈಸೂರು ಜಿಲ್ಲಾ ಮೂನ್ ಕಮಿಟಿ ಘೋಷಣೆ



ಮೈಸೂರಿನ ಜಿಲ್ಲಾ ವಕ್ಫ್ ಸಲಹಾ ಸಮಿತಿ ಕಚೇರಿಯಲ್ಲಿ ಶುಕ್ರವಾರ ಸಂಜೆ ಜಿಲ್ಲಾ ಮೂನ್ ಕಮಿಟಿ ಸಭೆ ನಡೆಯಿತು.

ಮೈಸೂರು,ಮಾ.1(ಪಿಎಂ)– ಮುಸಲ್ಮಾನ ಬಾಂಧವರ ಪವಿತ್ರ ಹಬ್ಬ ರಂಜಾನ್ ಮಾಸದ ಉಪವಾಸ ನಾಳೆಯಿಂದ (ಮಾ.2ರ ಭಾನುವಾರ) ಆರಂಭವಾಗಲಿದೆ. ಮೈಸೂರಿನ ನ್ಯೂ ಸಯ್ಯಾಜಿ ರಾವ್ ರಸ್ತೆಯಲ್ಲಿರುವ ಮೈಸೂರು ಜಿಲ್ಲಾ ವಕ್ಫ್ ಸಲಹಾ ಸಮಿತಿ ಕಚೇರಿಯಲ್ಲಿ ಶುಕ್ರವಾರ ಸಂಜೆ ನಡೆದ ಜಿಲ್ಲಾ ಮೂನ್ ಕಮಿಟಿ (ಚಂದ್ರನ ದರ್ಶನ ಸಮಿತಿ) ಸಭೆ ಬಳಿಕ ರಂಜಾನ್ ಮಾಸದ ಉಪ ವಾಸವು ನಾಳೆಯಿಂದ ಆರಂಭವಾಗಲಿದೆ ಎಂದು ಘೋಷಣೆ ಮಾಡಲಾಯಿತು. ಮೈಸೂರಿನ ಸರ್ ಖಾಝಿ ಹಜರತ್ ಮೌಲಾನಾ ಮಹಮ್ಮದ್ ಉಸ್ಮಾನ್ ಷರೀಫ್ ಸಾಹೇಬ್ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಈ ವೇಳೆ ಮೈಸೂರಿನ ಜಿಲ್ಲೆ ಮಾತ್ರವಲ್ಲದೇ ರಾಜ್ಯದ ವಿವಿಧೆಡೆ ಚಂದ್ರನ ದರ್ಶನಕ್ಕೆ ಸಂಬಂಧಿ ಸಿದಂತೆ ಮಾಹಿತಿ ಸಂಗ್ರಹಿಸಲಾಯಿತು. ಆದರೆ ಎಲ್ಲಿಯೂ ಚಂದ್ರ ಕಾಣಿಸಿಲ್ಲವೆಂಬ ಮಾಹಿತಿ ಲಭ್ಯ ವಾಯಿತು. ಅದಾಗ್ಯೂ ಮಾ.2ರ ಭಾನುವಾರದಿಂದ ಪವಿತ್ರ ರಂಜಾನ್ ಮಾಸವನ್ನು ಉಪವಾಸದೊಂದಿಗೆ ಪ್ರಾರಂಭಿಸಲು ನಿರ್ಧಾರ ಕೈಗೊಳ್ಳಲಾಯಿತು. ಹಜರತ್ ಮೌಲಾನಾ ಝುಕಾ ಉಲ್ಲಾ ಸಾಹೇಬ್ ಸಿದ್ದಿಕಿ, ಹಜರತ್ ಮೌಲಾನಾ ಮುಫ್ತಿ ಸೈಯದ್ ತಾಜುದ್ದೀನ್ ಸಾಹೇಬ್, ಮೌಲಾನಾ ಶಾ ವಲ್ಲಿ ಉಲ್ಲಾ ಸಾಹೇಬ್, ನಗರಪಾಲಿಕೆ ಮಾಜಿ ಸದಸ್ಯ ಸುಹೇಲ್ ಬೇಗ್, ಮುಖಂಡರಾದ ಮೊಹಮ್ಮದ್ ಅಬ್ದುಸ್ ಸಲಾಂ, ಜಮೀಲ್ ಅಹ್ಮದ್ ಅಶ್ರಫಿ, ಮಿರ್ಜಾ ಜಮ್ಶೀದ್ ಬೇಗ್ ಅಶ್ರಫಿ, ಮುದಾಸಿರ್ ಅಹಮದ್, ವಕ್ಫ್ ಅಧಿಕಾರಿ ಮಹಮ್ಮದ್ ಮುಷ್ತಾಕ್ ಅಹಮದ್ ಮತ್ತಿತರರಿದ್ದರು.

ಶರಣರ ಚಿತ್ರಕಲಾ ಪ್ರದರ್ಶನ, ಶರಣ ಸಾಹಿತ್ಯ ಕುರಿತಾದ ಪುಸ್ತಕಗಳ ಬಿಡುಗಡೆ

ಮೈಸೂರು, ಮಾ. 1– ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು ಜಿಲ್ಲಾ ಹಾಗೂ ನಗರ ಘಟಕವು ಮಾ.23ರ ಭಾನುವಾರ ಮೈಸೂ ರಿನ ಕರ್ನಾಟಕ ಕಲಾಮಂದಿರದಲ್ಲಿ 'ಶರಣ ಸಾಹಿತ್ಯ ಸಮ್ಮೇಳನ' ಏರ್ಪಡಿಸಲಾಗಿದೆ. ಇದರ ಅಂಗವಾಗಿ ಕಲಾ ಗ್ಯಾಲರಿಯಲ್ಲಿ ಶರಣರ ಹಾಗೂ ಶರಣ ಸಾಹಿತ್ಯಕ್ಕೆ ಸಂಬಂಧಿಸಿದ ಚಿತ್ರಕಲಾ ಪ್ರದರ್ಶನ ಏರ್ಪಡಿಸಿದೆ. ಅಂತಹ ಚಿತ್ರಗಳನ್ನು ಕಲಾವಿದರು ಮಾ. 22 ಸಂಜೆ 4 ಗಂಟೆಯೊಳಗೆ ಕಲಾಮಂದಿರಕ್ಕೆ ತಲುಪಿ ಸಲು ಕೋರಲಾಗಿದೆ. ಚಿತ್ರಕಲಾ ಪ್ರದರ್ಶನ ಬೆಳಗ್ಗೆ 10ರಿಂದ ರಾತ್ರಿ 8ರವರೆಗೆ ಇರುತ್ತದೆ. ಇದೇ ವೇಳೆ ಶರಣ ಸಾಹಿತ್ಯ ಹಾಗೂ ಶರಣರನ್ನು ಕುರಿತು ಬರೆದಿರುವ ಪುಸ್ತಕಗಳನ್ನು ಬಿಡುಗಡೆಗೊಳಿಸಲು ವ್ಯವಸ್ಥೆ ಮಾಡಲಾಗುವುದು.

ಆಸಕ್ತ ಲೇಖಕರು ಮಾ. 10ರೊಳಗೆ ತಮ್ಮ ಕೃತಿಗಳ ವಿವರಗಳನ್ನು ನಗರ ಘಟಕದ ಅಧ್ಯಕ್ಷರಿಗೆ ತಲುಪಿಸಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗೆ ಮೊ. 9535500538 ಸಂಪರ್ಕಿಸಬಹುದು.

ಹುಟ್ಟುಹಬ್ಬದ ಶುಭಾಶಯ...




ಮಾಜಿ ಕಾರ್ಪೊರೇಟರ್ ಪೈಲ್ವಾನ್ ಶ್ರೀನಿವಾಸ್ ಅವರ ಹುಟ್ಟುಹಬ್ಬಕ್ಕೆ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್‌ನ ಅಧ್ಯಕ್ಷ ಜೆ.ಯೋಗೇಶ್, ಮೈಸೂರು–ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ನಿರ್ದೇಶಕ ಒಂಟಿಕೊಪ್ಪಲ್ ಗುರುರಾಜ್ ಶುಭ ಕೋರಿದರು.

'ಕನಸೊಂದು ಶುರುವಾಗಿದೆ' ಚಲನಚಿತ್ರ ಮಾ.7ಕ್ಕೆ ಬಿಡುಗಡೆ

ಮೈಸೂರು, ಮಾ.1(ಜಿಎ)–'ಕನಸೊಂದು ಶುರು ವಾಗಿದೆ' ಚಲನಚಿತ್ರ ಮಾ.7ರಂದು ಬಿಡುಗಡೆಯಾಗಲಿದೆ ಎಂದು ಚಿತ್ರದ ನಾಯಕಿ ಸಾತ್ವಿಕ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಅವರು, ಈಗಾಗಲೇ ಬಿಡುಗಡೆ ಆಗಿರುವ ಚಿತ್ರದ ಹಾಡುಗಳಿಗೆ ಉತ್ತಮ ಸ್ಪಂದನೆ ದೊರೆತಿದೆ. ಸಮಾಜದಲ್ಲಿ ಬದಲಾವಣೆ ತರಬಯಸುವ ನಾಯಕಿ, ಅದೇ ರೀತಿಯ ನಾಯಕನನ್ನು ಆಧರಿಸಿದ ಈ ಸಿನಿಮಾ ಸಮಾಜಕ್ಕೆ ಉತ್ತಮ ಸಂದೇಶ ನೀಡುತ್ತದೆ. ಇಡೀ ಕುಟುಂಬ ದೊಂದಿಗೆ ವೀಕ್ಷಿಸಬಹುದಾದ ಚಿತ್ರ ಇದಾಗಿದ್ದು, ಬೆಂಗಳೂರು, ಕುಂದಾಪುರ, ತುಮಕೂರು, ಕುಣಿಗಲ್, ಬೆಂಗಳೂರು ಗ್ರಾಮಾಂತರ ಭಾಗಗಳಲ್ಲಿ ಚಿತ್ರೀಕರಣ ನಡೆದಿದೆ ಎಂದರು. ಗೋಷ್ಠಿಯಲ್ಲಿ ನಟ ಸಂತೋಷ್, ನಿರ್ದೇಶಕ ಮಂಜೇಶ್ ಭಾಗವತ್, ನಿರ್ಮಾಪಕ ಲಕ್ಷ್ಮಿಕಾಂತ್ ಉಪಸ್ಥಿತರಿದ್ದರು.

ಪಾರಾಯಣ ಮಂಜರಿ ಪುಸ್ತಕ ಲೋಕಾರ್ಪಣೆ



ಮೈಸೂರಿನ ಶ್ರೀ ಕೃಷ್ಣಧಾಮದಲ್ಲಿ ಪಾರಾಯಣ ಮಂಜರಿ ಪುಸ್ತಕ ಬಿಡುಗಡೆ ಮಾಡಲಾಯಿತು.

ಮೈಸೂರು, ಮಾ.1– ಇತ್ತೀಚೆಗೆ ಮೈಸೂರು ಶ್ರೀ ಕೃಷ್ಣಧಾಮದಲ್ಲಿ ಕೃಷ್ಣ ಏಕಾದಶಿ ಪಾರಾಯಣದ ತಂತ್ರ ಸಾರಾಗಮ ಸಂಸ್ಥೆಯ ವತಿಯಿಂದ ಪಾರಾಯಣ ಮಂಜರಿ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.

ಪಾರಾಯಣದ ಮೂರನೇ ವರ್ಷದ ಈ ಸುಸಂದರ್ಭದಲ್ಲಿ ಅಧ್ಯಕ್ಷ ಕೆ.ವಸಂತ ಕುಮಾರ ಮಾತನಾಡಿ, ತಂತ್ರ ಸಾರಾಗಮ ಸಂಘ 65 ವರ್ಷದಿಂದ ನಡೆದು ಬಂದ ಹಾದಿಯನ್ನು ವಿವರಿಸಿ, ದಿವಂಗತ ಕೆ. ವಿಠಲೋಪಾಧ್ಯಾಯ ಶಿರೋಮಣಿಯವ ರಿಂದ ಮೂರು ಸಂಗ್ರಾಹ್ಯ ಗ್ರಂಥಗಳ ನಂತರ ಈಗ ಪಾರಾಯಣ ಮಂಜರಿ ಪುಸ್ತಕದ ಬಗ್ಗೆ ಹರ್ಷ ವ್ಯಕ್ತಪಡಿಸಿದರು.

ಪ್ರಸಿದ್ಧ ವಿದ್ವಾಂಸರಾದ ಅರಳು ಮಲ್ಲಿಗೆ ಪಾರ್ಥಸಾರಥಿ ಅವರ ವಿದ್ವತ್ಪೂರ್ಣ ಲೇಖನ ವುಳ್ಳ ಈ ಪುಸ್ತಕವನ್ನು ವಿದ್ವಾನ್ ವೈಲಾ ಯರು ಬಿಡುಗಡೆ ಮಾಡಿದರು. ವಿದ್ವಾನ್ ಅನಂತ ಪದ್ಮನಾಭ ವೈಲಾಯರಿಗೆ ಸಂಸ್ಥೆ ಯಿಂದ ಸನ್ಮಾನ ಮಾಡಲಾಯಿತು. ಎಲ್ಲರಿಗೂ ಕುಂಭಮೇಳದ ತೀರ್ಥ ನೀಡಲಾಯಿತು. ಉಪಾಧ್ಯಕ್ಷರಾದ ಆರೂರು ವಾಸುದೇವ ರಾವ್ ವಂದನಾರ್ಪಣೆ ಮಾಡಿದರು.

ನಾಳೆಯಿಂದ ಆರೋಗ್ಯಾಯುಷ್ಯ ಆರೋಗ್ಯವರ್ಧಕ ಶಿಬಿರ

ಮೈಸೂರು,ಮಾ.1–ಮೈಸೂರಿನ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಮಾ.3ರಿಂದ 29ರವರೆಗೆ ಆರೋಗ್ಯಾಯುಷ್ಯ ಆರೋಗ್ಯವರ್ಧಕ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಬೊಜ್ಜು, ಸಕ್ಕರೆ ಕಾಯಿಲೆ, ಬಿಪಿ, ಕೀಲುನೋವು, ಅಲರ್ಜಿ, ಚರ್ಮದ ರೋಗಗಳು, ಒತ್ತಡ, ಆತಂಕ ಇನ್ನಿತರೆ ಕಾಯಿಲೆಗಳಿಗೆ ತಜ್ಞ ವೈದ್ಯರಿಂದ ತಪಾಸಣೆ, ಸಲಹೆ ಮತ್ತು ಚಿಕಿತ್ಸೆ ನೀಡಲಾಗುವುದು. ಶಿಬಿರವು ಬೆಳಗ್ಗೆ 9 ರಿಂದ ಸಂಜೆ 4.30 ರವರೆಗೆ ನಡೆಯಲಿದೆ. ಮಾಹಿತಿಗೆ ಮೊ. 9844549152, 9741513392 ಸಂಪರ್ಕಿಸಬಹುದು.

ಅಭಿನಂದನೆ



ಮೈಸೂರಿನ ಶ್ರೀ ಕೇಶವ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಎಂ.ಲೋಕೇಶ್ ಅವರನ್ನು ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಟೆನ್ನಿಸ್ ಗೋಪಿ, ಒಲಂಪಿಯಾ ಮಹೇಶ್ ಅಭಿನಂದಿಸಿದರು. ಪತ್ತಿನ ಸಹಕಾರ ಸಂಘದ ನಿರ್ದೇಶಕರಾದ ಒಂಟಿಕೊಪ್ಪಲ್ ಆರ್.ಜಗದೀಶ್, ಕೃಷ್ಣ ಕುಮಾರ್ ನಾಯಕ, ಯುವ ಮುಖಂಡ ಗಧಾಧರ ಇದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

02.03.2025 ಭಾನುವಾರ, ಮಳೆ ನಕ್ಷತ್ರ: ಶತಭಿಷ, 19.02.2025 ರಿಂದ 03.03.2025
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ,
ತಿಥಿ: ತದಿಗೆ, ನಕ್ಷತ್ರ: ಉಭಾ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ದಿ ಅಸೋಸಿಯೇಷನ್ ಆಫ್ ಓಟೋಲಾಂಗೋಲಾಜಿಸ್ಟ್ಸ್ ಆಫ್ ಇಂಡಿಯಾ, ಮೈಸೂರು ಶಾಖೆ, ಭಾರತೀಯ ವಾಕ್ ಶ್ರವಣ ಹಾಗೂ ಭಾಷಾ ಸಂಘ, ಜೆಎಸ್‌ಎಸ್ ಆಸ್ಪತ್ರೆ, ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಸಂಸ್ಥೆ, ಮಣಿಪಾಲ್ ಆಸ್ಪತ್ರೆ, ಬಿಜಿಎಸ್ ಅಪೋಲೋ ಆಸ್ಪತ್ರೆ, ಜೆಎಸ್‌ಎಸ್ ವಾಕ್ ಶ್ರವಣ ಸಂಸ್ಥೆ, ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ :** ವಿಶ್ವ ಶ್ರವಣ ದಿನದ ಪ್ರಯುಕ್ತ ವಾಕಥಾನ್, ಚಾಲನೆ : ಶಾಸಕ ಟಿ.ಎಸ್. ಶ್ರೀವತ್ಸ, ಸ್ಥಳ: ಮೈಸೂರು ಅರಮನೆ ಬಲರಾಮ ದ್ವಾರ, ಬೆಳಗ್ಗೆ 7ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ಯೋಗ ಮಾಡಿ ಆರೋಗ್ಯವಾಗಿರಿ, ದೇಹ, ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಇಸುಬು ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ಶ್ರೀ ಕೃಷ್ಣ ಗಾನಸಭಾ :** ತ್ಯಾಗರಾಜ ಮತ್ತು ಪುರಂದರದಾಸರ ಆರಾಧನಾ ಮಹೋತ್ಸವ, ಗೋಷ್ಠಿ ಗಾಯನ, ನಂತರ ಸಂಗೀತ ಕಛೇರಿ, ವಿದುಷಿ ರಾಧಿಕಾ ಬಾಲಕೃಷ್ಣ ಅವರಿಂದ ಗಾಯನ, ವಿದುಷಿ ಎಸ್.ಯಶಸ್ವಿ–ವಯೋಲಿನ್, ವಿದ್ವಾನ್ ನಂದನ್ ಕಶ್ಯಪ್–ಮೃದಂಗ, ವಿದ್ವಾನ್ ಎಂ.ಆರ್. ಮಂಜುನಾಥ–ಘಟಂ, ಸ್ಥಳ: ಆಳ್ವಾರ್ ಕಲಾಭವನ, ಬೆಳಗ್ಗೆ 9.30ಕ್ಕೆ.

■ **ಪ್ರೇರಣ ಫೌಂಡೇಷನ್:** 25ನೇ ವಾರ್ಷಿಕೋತ್ಸವ, ಉದ್ಘಾಟನೆ: ಪ್ರೊ.ಬೋರಲಿಂಗಯ್ಯ, ಪ್ರೊ.ಸರಸ್ವತಿ ಬೋರಲಿಂಗಯ್ಯ, ಅಧ್ಯಕ್ಷತೆ: ಪ್ರೊ.ಎಂ.ಕೃಷ್ಣೇಗೌಡ, ಶಿಕ್ಷಣ ತಜ್ಞ ಡಾ.ಗುರುರಾಜ ಕರಜಗಿ, ವಿಶೇಷ ಅತಿಥಿಗಳು: ಸಂಗೀತ ನಿರ್ದೇಶಕ ವಿ.ಮನೋಹರ್, ಸಾಹಿತಿ ಕೆ.ಕಲ್ಯಾಣ್, ವ್ಯಕ್ತಿತ್ವ ವಿಕಸನ ತರಬೇತುದಾರ ಚೇತನ್ ರಾಮ್, ಸಾಹಿತಿ ಡಾ.ವಿ.ನಾಗೇಂದ್ರ ಪ್ರಸಾದ್, ಸಂಗೀತ ನಿರ್ದೇಶಕ ಶ್ರೀಧರ್ ವಿ.ಸಂಭ್ರಮ್, ಸ್ಥಳ: ಮೈಸೂರು ಮೆಡಿಕಲ್ ಕಾಲೇಜು ಅಲ್ಯೂಮ್ನಿ ಅಸೋಸಿಯೇಷನ್ ಸಭಾಂಗಣ, ಜೆ.ಕೆ.ಮೈದಾನ, ಬೆಳಗ್ಗೆ 9.30 ರಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಚಾರು ಸಾಂಸ್ಕೃತಿಕ ಪ್ರತಿಷ್ಠಾನ:** ಪೇಪರ್ ಬ್ಯಾಗ್ ತಯಾರಿಕಾ ತರಬೇತಿ ಕಾರ್ಯಾಗಾರ, ಉಪಸ್ಥಿತರು: ಸವಿತಾ, ಪ್ರಾಂಶುಪಾಲೆ ವಾಣಿಶ್ರೀ, ಸ್ಥಳ: ಚಾರು ಸಾಂಸ್ಕೃತಿಕ ಪ್ರತಿಷ್ಠಾನ, ಆರ್.ಟಿ.ನಗರ ಬಳಿ, ಬೆಳಗ್ಗೆ 10ರಿಂದ.

■ **ಪ್ರಕಾಶ್ ಫರ್ಫಾರ್ಮಿಂಗ್ ಆರ್ಟ್ಸ್ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಪಡಜ್ ಗೋಡ್ಬಿಂಡಿ ಅವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಕೊಳಲು ವಾದನ, ಉಪನ್ಯಾಸ ಮತ್ತು ಪ್ರಾತ್ಯಕ್ಷಿಕೆ : ಬೆಳಗ್ಗೆ 10ಕ್ಕೆ. ಸ್ಥಳ: 33, ಸೂರ್ಯ ಲೇಔಟ್, ನಾಯ್ಡು ಸ್ಟೋರ್ಸ್ ಹಿಂಭಾಗ, ಶ್ರೀರಾಂಪುರ 2ನೇ ಹಂತ.

■ **ಕಲಾಸುರುಚಿ:** ದಿ. ಎಂ.ಎಸ್.ಕೆ.ಪ್ರಭು ಅವರ ಹೆಸರಾಂತ ನಾಟಕ ಬಕ ಕೃತಿ ರಚನೆಗೆ ಈಗ ಐವತ್ತರ ಸಂಭ್ರಮ, ಅದರ ಹಿಂದಿ ಅನುವಾದಿತ ಕೃತಿ ಬಕಾಸುರ್ ಬಿಡುಗಡೆ ಸಮಾರಂಭ, ಕೃತಿ ಬಿಡುಗಡೆ: ಆಕಾಶವಾಣಿಯ ಪ್ರಭುಸ್ವಾಮಿ ಮಳಿಮಠ, ನಾಟಕ ವಾಚನ: ಬಿ.ಎಸ್.ವಿನಯ್, ಚಾಮರಾಜನಗರ, ಅನುವಾದಕರ ಅನಿಸಿಕೆ: ಡಾ.ಮೈಥಿಲಿ ಪಿ.ರಾವ್, ಸ್ಥಳ: ಸುರುಚಿ ರಂಗಮನೆ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.

■ **ಶ್ರೀ ಕ್ಷೇತ್ರ ದಂಡಿನ ಮಾರಮ್ಮ ದೇವಸ್ಥಾನ:** ಶ್ರೀ ಮನೆ ಮಂಚಮ್ಮ ಶ್ರೀ ದಂಡಿನ ಮಾರಮ್ಮ, ಬಿಸಿಲು ಮಾರಮ್ಮ ಜಾತ್ರಾ ಮಹೋತ್ಸವ, ಮಧ್ಯಾಹ್ನ 12ಕ್ಕೆ ಅನ್ನಸಂತರ್ಪಣೆ, ಸ್ಥಳ: ದೇವಸ್ಥಾನ, ಮೈಸೂರು–ಬೆಂಗಳೂರು ರಸ್ತೆ.

■ **ಇನ್ಶೂರೆನ್ಸ್ ಕಾರ್ಪೋರೇಷನ್ ಪೆನ್ಷನರ್ಸ್ ಅಸೋಸಿಯೇಷನ್, ಮೈಸೂರು ಶಾಖೆ :** ಸ್ವಾಗತ ಸಮಿತಿ ರಚನೆ ಮತ್ತು ಲೋಗೋ ಬಿಡುಗಡೆ, ಮುಖ್ಯ ಅತಿಥಿಗಳು : ಕಾ. ಕುನ್ನಿ ಕೃಷ್ಣನ್, ಅಕ್ಕಮಹಾದೇವಿ ಮಹಿಳಾ ವಿವಿ ವಿಶ್ರಾಂತ ಕುಲಪತಿ ಶ್ರೀಮತಿ ಸಬಿಹಾ ಭೂಮಿಗೌಡ, ಸ್ಥಳ: ಗಾನಭಾರತೀ ಸಂಗೀತ ಸಭಾ, ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 4ಕ್ಕೆ.

■ **ರೋಟರಿ ಕ್ಲಬ್ ಆಫ್ ಮೈಸೂರು ಸ್ಟಾರ್ಸ್:** ವಿಶೇಷ ಮಕ್ಕಳ ಫ್ಯಾಷನ್ ಶೋ, ಉದ್ಘಾಟನೆ : ಜಿಲ್ಲಾ ಗವರ್ನರ್ ರೋ.ವಿಕ್ರಂ ದತ್ತ, ಮುಖ್ಯ ಅತಿಥಿಗಳು: ರೊ.ಪ್ರಕಾಶ್ ಕಾರಂತ್, ಮೈಸೂರು ವಿವಿ ಕುಲಪತಿ ಪ್ರೊ. ಕೆ.ಎಸ್.ರಂಗಪ್ಪ, ಯಶಸ್ವಿ ಸೋಮಶೇಖರ್, ವೈ.ಗೋವರ್ಧನ್, ಡಾ.ಕೆ.ಎನ್. ಸುಷ್ಮಾ, ಸ್ಥಳ: ಜಗನ್ಮೋಹನ ಅರಮನೆ, ಸಂಜೆ 4.30ಕ್ಕೆ.

■ **ಋಷಿ ಸಂಸ್ಕೃತಿ ವಿದ್ಯಾಕೇಂದ್ರ ಟ್ರಸ್ಟ್ :** ಸಿದ್ಧ ಸಮಾಧಿ ಯೋಗ ಶಿಬಿರದ ಬಗ್ಗೆ ಉಚಿತ ಪರಿಚಯ ಕಾರ್ಯಕ್ರಮ, ಸ್ಥಳ: ಋಷಿ ಸಂಸ್ಕೃತಿ ವಿದ್ಯಾಕೇಂದ್ರ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

■ **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ, ಮೈಸೂರು:** ತ್ರಿಮೂರ್ತಿ ಶಿವ ಜಯಂತಿ ಮಹೋತ್ಸವದ ಪ್ರಯುಕ್ತ ಜ್ಞಾನ ವಿಜ್ಞಾನ ದಿವ್ಯ ದರ್ಶನ ಮೇಳ ಸಮಾರೋಪ ಸಮಾರಂಭ, ಸಾನ್ನಿಧ್ಯ: ಈಶ್ವರೀಯ ವಿವಿ ಮುಖ್ಯ ಸಂಚಾಲಕ ರಾಜಯೋಗಿನಿ ಬ್ರಹ್ಮಾಕುಮಾರಿ ಲಕ್ಷ್ಮೀಜಿ, ಆಶೀರ್ವಚನ: ಬೇಲಿ ಮಠದ ಶ್ರೀ ಶಿವರುದ್ರ ಸ್ವಾಮೀಜಿ, ಅರಮೇರಿ ಕಳಂಚೇರಿ ಮಠದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಸಾಲೂರು ಮಠದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಅತಿಥಿಗಳು: ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಮುಡಾ ಆಯುಕ್ತ ಎ.ಎನ್.ರಘುನಂದನ್, ನಿವೃತ್ತ ಡಿಜಿ ಶಂಕರ್ ಬಿದರಿ, ಎಡಿಸಿ ಪಿ. ಶಿವರಾಜು, ನ್ಯಾಯಾಧೀಶರಾದ ರೇಖಾ ಎಸ್.ಸಾಯನ್ನವರ್, ಸಂಜೆ 6.15ರಿಂದ ಸಂಧ್ಯಾ ಅವರಿಂದ ರಾಜಯೋಗ ಧ್ಯಾನ ಕುರಿತು ಚಿಂತನ ಕಾರ್ಯಕ್ರಮ, ಸಂಜೆ 7.45ಕ್ಕೆ ಕಲಾ ರಾಧ್ಯಮ್ ತಂಡದಿಂದ ಭರತನಾಟ್ಯ, ಸ್ಥಳ: ಭಾರತೀಯ ವಿದ್ಯಾಭವನದ ಮುಂಭಾಗದ ನಿವೇಶನ, ಐಶ್ವರ್ಯ ಪೆಟ್ರೋಲ್ ಬಂಕ್ ಎದುರು, ಸಂಜೆ 6.30ಕ್ಕೆ

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಶ್ರೀ ರಾಘವೇಂದ್ರ ಸ್ವಾಮಿಗಳ ಪಟ್ಟಾಭಿಷೇಕ ಹಾಗೂ ವರ್ಧಂತಿ ಮಹೋತ್ಸವ, ಶ್ರೀ ವೇದವ್ಯಾಸ ಅಷ್ಟಾಕ್ಷರ ಮಂತ್ರ ಮಹಾಯಾಗ, ಬೆಳಗ್ಗೆ 6.30ರಿಂದ ಶ್ರೀ ವೇದವ್ಯಾಸ ಅಷ್ಟಾಕ್ಷರ ಮಂತ್ರ ಮಹಾಯಾಗ ಹಾಗೂ ನವಗ್ರಹ ಪುರಸ್ಸರ ಧನ್ವಂತರೀ ಹೋಮ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ, ಜಯಲಕ್ಷ್ಮಿಪುರಂ.


■ **ಶ್ರೀ ರಾಮಕೃಷ್ಣ ಆಶ್ರಮ :** ಭಗವಾನ್ ಶ್ರೀ ರಾಮಕೃಷ್ಣ ಪರಮಹಂಸರ 190ನೆಯ ಜನ್ಮ ದಿನೋತ್ಸವ, ಆಶ್ರಮದ ವಾರ್ಷಿಕೋತ್ಸವ, ಸಂಜೆ 5.30 ರಿಂದ ಉಪನ್ಯಾಸಕರಾದ ಕು.ಅಕ್ಷಯಾ ಗೋಖಲೆ ಅವರಿಂದ ಇಂದಿನ ಸಮಾಜಕ್ಕೆ ಶ್ರೀರಾಮಕೃಷ್ಣರ ಪ್ರಸ್ತುತತೆ ಕುರಿತು ಕನ್ನಡದಲ್ಲಿ ಪ್ರವಚನ; ಸಂಜೆ 6.45ರಿಂದ ಕರಾವಳಿ ಯಕ್ಷಗಾನ ಮಂಡಳಿ ಅವರಿಂದ ಕೃಷ್ಣಲೀಲೆ ಕಂಸ ವಧೆ ಯಕ್ಷಗಾನ, ಸ್ಥಳ: ಶ್ರೀ ರಾಮಕೃಷ್ಣ ಆಶ್ರಮ, ಯಾದವಗಿರಿ.

■ **ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಬೆಂಗಳೂರು, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ :** ವಾರ್ಷಿಕ ವಿಶೇಷ ಶಿಬಿರ, ಬೆಳಗ್ಗೆ 6ಕ್ಕೆ ಧ್ವಜಾರೋಹಣ ಕಾರ್ಯಕ್ರಮ : ದೇವಲಾಪುರ ಗ್ರಾಪಂ ಮಾಜಿ ಸದಸ್ಯ ಎ.ಮಹೇಶ್ ಅವರಿಂದ, ಬೆಳಗ್ಗೆ 7ರಿಂದ ಯೋಗ ಶಿಬಿರ, ಬೆಳಗ್ಗೆ 9 ರಿಂದ ಬೀದಿ ನಾಟಕ ಕಲಿಕೆ, ಸಂಜೆ 5 ರಿಂದ ಉಪನ್ಯಾಸ ಕಾರ್ಯಕ್ರಮ, ಸಂಪನ್ಮೂಲ ವ್ಯಕ್ತಿಗಳು : ಯೋಗೇಶ್, ದೇವಲಾಪುರ ಗ್ರಾಪಂ ಮಾಜಿ ಸದಸ್ಯ ನಟೇಶ್, ತಾಪಂ ಮಾಜಿ ಸದಸ್ಯೆ ಶ್ರೀಮತಿ ಜಯಮ್ಮ, ಮಾಜಿ ಸದಸ್ಯೆ ಶ್ರೀಮತಿ ಸರೋಜಮ್ಮ ಲಿಂಗರಾಜು, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ದೇವಲಾಪುರ ಗ್ರಾಮ.

■ **ನಂಜನಗೂಡು ಶ್ರೀ ರಾಘವೇಂದ್ರಸ್ವಾಮಿಗಳವರ ಮಠ :** ಗುರುವೈಭವೋತ್ಸವ–2025, ಶ್ರೀ ರಾಘವೇಂದ್ರ ಸ್ವಾಮಿಗಳವರ 404ನೇ ಪಟ್ಟಾಭಿಷೇಕ, ಬೆಳಗ್ಗೆ 7 ರಿಂದ ಶ್ರೀರಾಮತಾರಕಮಂತ್ರ ಹೋಮ, ಸ್ಥಳ: ನಂಜನಗೂಡು ಶ್ರೀ ರಾಘವೇಂದ್ರಸ್ವಾಮಿಗಳವರ ಮಠ, ಸುಬ್ಬರಾಯನಕೆರೆ.

■ **ರಂಗಾಯಣ :** ರಂಗಾಯಣದ ರೆಪರ್ಟರಿ ಹಿರಿಯ ಕಲಾವಿದರಿಂದ ಕಾಣೆ ಆದವರು ನಾಟಕ ಪ್ರದರ್ಶನ, ನಿರ್ದೇಶನ : ಸೌರವ್ ಪೋದ್ದಾರ್, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ




ಬೆಳಗ್ಗೆ: 6.10 ಚಿಂತನ–ಲಕ್ಷ್ಮಿ ಬಾಗಲಕೋಟಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಅಂಬಯ್ಯನುಲಿ, ಪಿ.ಎಸ್. ಮುರಳೀಧರ್, ವ್ಯಾಖ್ಯಾನ–ಡಾ. ಬೋರೇಗೌಡ ಚಿಕ್ಕಮರಳಿ, 6.50 ರೈತರಿಗೆ ಸಲಹೆ, 7.15 ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ವಿಕಾಸ ಅಕಾಡೆಮಿ, ಕಲಬುರ್ಗಿ, 8.30 ಕರುನಾಡ ಕಲ್ಪವೃಕ್ಷ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ತೆಂಗು ಅಭಿವೃದ್ಧಿ ಮಂಡಳಿ, ಬೆಂಗಳೂರು, 9.00 ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ–ವಿಶ್ವ ಶ್ರವಣ ದಿನದ ಸಂದೇಶ ಮತ್ತು ಮಹತ್ವ ಕುರಿತು ತಿಳಿಸಿಕೊಡಲಿದ್ದಾರೆ ಮೈಸೂರಿನ ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯ ಆಡಿಯಾಲಜಿ ವಿಭಾಗದ ಪ್ರೊಫೆಸರ್ ಡಾ. ಅಜಿತ್‌ಕುಮಾರ್ ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ–ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ ನೇರ ಫೋನ್ ಇನ್ ಕಾರ್ಯಕ್ರಮ, 10.30 KRISH -TRISH and Balty boy ನಾವು ಭಾರತೀಯರು–ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ, 10.45 ಮಕ್ಕಳ ಮಂಟಪ–ಹೊಳೆಮತ್ತಿ ನೇಚರ್ ಫೌಂಡೇಶನ್ ಶಿಬಿರದ ಮಕ್ಕಳೊಂದಿಗೆ ಮಾತುಕತೆ. ಪ್ರಸ್ತುತಿ : ಎಂ.ಎಸ್. ಭಾರತಿ, 11.15 ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ–ಮಹಿಳಾ ದಿನಾಚರಣೆ ಅಂಗವಾಗಿ ಚರ್ಚೆ, ವಿಷಯ: ಲಿಂಗ ಸಮಾನತೆ ಕಡೆಗೆ ಚುರುಕಾಗಲಿ ಹೆಜ್ಜೆ, ಭಾಗವಹಿಸುತ್ತಾರೆ–ಲೇಖಕಿ, ವಕೀಲೆ ಅಂಜಲಿ ರಾಮಣ್ಣ, ಸಾಮಾಜಿಕ ಕಾರ್ಯಕರ್ತೆ–ಡಾ.ಸುವರ್ಣ ನಾಗರಾಜ್, ಪ್ರಸ್ತುತಿ: ಚಂದ್ರಮ್ಮ ಹಾಗೂ ಬಿ.ಕೆ.ಸುಮತಿ, 12.35 ದೇವರನಾಮ–ಎಂ.ಟಿ.ಶೃತಿರಂಜನಿ, 12.45 ಜನಪದ ಸಂಗೀತ–ಟಿ. ನರಸೀಪುರ ತಾಲೂಕು ಬನ್ನೂರು ಹೋಬಳಿ ಯಾಚೇನಹಳ್ಳಿಯ ಚಿಕ್ಕಮಂಚಮ್ಮ ಮತ್ತು ಸಂಗಡಿಗರಿಂದ ಮಾದೇಶ್ವರನ ಹಾಡು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ ಮೀನು ಮತ್ತು ಜಲಚರ ಆಹಾರ ಉತ್ಪಾದನೆ ಹೆಚ್ಚಿಸುವ ನೀಲಿ ಕ್ರಾಂತಿ ಕುರಿತು ಮಾಹಿತಿ, 1.20 ಭಾವಗೀತೆಗಳು –ಎಂ.ಎಸ್.ಲಕ್ಷ್ಮೀಶ, 2.40 ಭಾರತ ಹಾಗೂ ನ್ಯೂಜಿಲ್ಯಾಂಡ್ ತಂಡಗಳ ನಡುವೆ ದುಬೈ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯಲಿರುವ ಐಸಿಸಿ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಪಂದ್ಯದ ನೇರ ವೀಕ್ಷಕ ವಿವರಣೆ, 10.00–ರವಿವಾರದ ಅಖಿಲ ಭಾರತ ಸಂಗೀತ ಸಭಾ, ಆರ್.ಶ್ರೀಧರ್–ವೈಯೊಲಿನ್ ವಾದನ

ರಾಜ್ಯಗಳಿಗೆ ತೆರಿಗೆ ಪಾಲು ಇಳಿಕೆ ಪ್ರಸ್ತಾಪ ವಿಚಾರ; ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ

ಅಭಿವೃದ್ಧಿ ವಿಚಾರದಲ್ಲಿ ಕರ್ನಾಟಕವನ್ನು ಕಡೆಗಣಿಸಲ್ಲ

ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಬಲವಾದ ಪ್ರತಿಪಾದನೆ



ಮೈಸೂರಿನ ಸರ್ಕಾರಿ ಅತಿಥಿಗೃಹದ ಆವರಣದಲ್ಲಿ ಶನಿವಾರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಮಾಧ್ಯಮದವರೊಂದಿಗೆ ಮಾತನಾಡಿದರು.

ಮೈಸೂರು,ಮಾ.1(ಪಿಎಂ)– ಕೇಂದ್ರದಿಂದ ರಾಜ್ಯಗಳಿಗೆ ಹಂಚಿಕೆ ಮಾಡುವ ತೆರಿಗೆ ಪಾಲು ಇಳಿಕೆ ಪ್ರಸ್ತಾಪ ಸಂಬಂಧ ಪ್ರತಿಕ್ರಿಯಿಸಿದ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ, ಯಾವುದೇ ಕಾರಣಕ್ಕೂ ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಕರ್ನಾಟಕದ ಅಭಿವೃದ್ಧಿ ವಿಚಾರದಲ್ಲಿ ಶೇ.1ರಷ್ಟೂ ಕಡೆಗಣಿಸುವುದಿಲ್ಲ ಎಂದು ಹೇಳಿದರು.

ಖಾಸಗಿ ಕಾರ್ಯನಿಮಿತ್ತ ಶನಿವಾರ ಮೈಸೂರಿಗೆ ಭೇಟಿ ನೀಡಿದ್ದ ಅವರು, ಸರ್ಕಾರಿ ಅತಿಥಿಗೃಹದ ಆವರಣದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದರು.

ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮಾತನಾಡಲು ಏನೂ ಇಲ್ಲ. ಅಂಕಿ-ಅಂಶಗಳನ್ನು ನೋಡಿಕೊಂಡು ಪ್ರಾಮಾಣಿಕವಾಗಿ ಮಾತನಾಡಬೇಕು. ಸಂಪನ್ಮೂಲಗಳನ್ನು ಯಾವ ರೀತಿ ಕ್ರೋಢೀಕರಿಸಬೇಕು, ಅದನ್ನು ಯಾವ ರೀತಿ ವಿನಿಯೋಗ ಮಾಡಬೇಕೆಂದು ಚರ್ಚೆ ನಡೆಯುತ್ತದೆ. ಈ ವೇಳೆ ಯಾವುದಕ್ಕೆ ಆದ್ಯತೆ ನೀಡಬೇಕೋ ಅದಕ್ಕೆ ನೀಡಲಾಗುತ್ತದೆ ಎಂದು ತಿಳಿಸಿದರು.

ಆದ್ಯತೆ ಮೇರೆಗೆ ಕೊಡಬೇಕಿರುವ ಅನುದಾನಗಳನ್ನು ಕೇಂದ್ರ ಸರ್ಕಾರ ಪ್ರಾಮಾಣಿಕವಾಗಿ ಹಂಚಿಕೆ ಮಾಡುತ್ತಿದೆ. ಕುಡಿಯುವ ನೀರು, ರಸ್ತೆ, ರೈಲ್ವೆ ಸೇರಿದಂತೆ ಮೂಲಭೂತ ಸೌಲಭ್ಯಗಳಿಗೆ ಕೇಂದ್ರ ಆದ್ಯತೆ ನೀಡುತ್ತಿದೆ. ಇದನ್ನು ಹೊರತುಪಡಿಸಿ ಅನುದಾನವನ್ನು ಕೂಡ ವ್ಯವಸ್ಥಿತವಾಗಿ ಹಂಚಿಕೆ ಮಾಡುತ್ತಿದೆ ಎಂದರು.

50 ವರ್ಷಗಳ ಯುಪಿಎ ಆಡಳಿತಾವಧಿಯಲ್ಲಿ ಏನೂ ಆಗಿರಲಿಲ್ಲ. ಅಷ್ಟು ಕೆಲಸವನ್ನು ಮೋದಿಯವರು ಮಾಡಿದ್ದಾರೆ. ಅದಕ್ಕೆ ಪೂರಕವಾಗಿ ಅನುದಾನ ಕೂಡ ನೀಡಿದ್ದಾರೆ. ನನಗೆ ತಿಳಿದ ಮಟ್ಟಿಗೆ ಮೋದಿಯವರ ಆಡಳಿತಾವಧಿಯ 10 ವರ್ಷಗಳಲ್ಲಿ ಆಗಿರುವ ಕೆಲಸಗಳು 50 ವರ್ಷಗಳ ಹಿಂದೆಯೇ ಆಗಿದ್ದರೆ ಈ ರಾಷ್ಟ್ರ ಇಂದಿಗೆ ರಾಮ ರಾಜ್ಯವಾಗುತ್ತಿತ್ತು. ಅವರು (ಯುಪಿಎ ಸರ್ಕಾರದ ಅವಧಿ) 10 ವರ್ಷಗಳಲ್ಲಿ ಕೊಡುತ್ತಿದ್ದನ್ನು ನಾವು ಕೇವಲ ಒಂದು ವರ್ಷದಲ್ಲಿ ಕೊಡುತ್ತಿದ್ದೇವೆ. ಹಾಗಾಗಿ ಅಂಕಿ ಅಂಶ ಬಿಟ್ಟು ಮಾತನಾಡುವುದು ಒಳ್ಳೆಯದಲ್ಲ ಎಂದು ತಿರುಗೇಟು ನೀಡಿದರು.

ರಾಜ್ಯ ಸರ್ಕಾರದ ಸಹಕಾರ ಅಗತ್ಯ: ರೈಲ್ವೆಗೆ ಸಂಬಂಧಿಸಿದಂತೆ ನಾವು ಕೈಗೆತ್ತಿಕೊಂಡಿರುವ ಎಲ್ಲಾ ಯೋಜನೆಗಳನ್ನು ನಿಗದಿತ ಸಮಯದೊಳಗೆ ಪೂರ್ಣಗೊಳಿಸಲಿದ್ದೇವೆ. ಪ್ರಧಾನಿ ನರೇಂದ್ರ ಮೋದಿಯವರು ಕಳೆದ ವರ್ಷ ನೀಡಿದ್ದ ಅನುದಾನಕ್ಕಿಂತಲೂ ಈ ಬಾರಿ ಹೆಚ್ಚು ನೀಡಿದ್ದಾರೆ. ಕರ್ನಾಟಕ ಸೇರಿದಂತೆ ದೇಶದ ಎಲ್ಲಾ ರಾಜ್ಯಗಳ ಅಭಿವೃದ್ಧಿಗೆ ಕೇಂದ್ರ ಬದ್ಧವಾಗಿದೆ. ರಾಜ್ಯ ಸರ್ಕಾರ ಅಗತ್ಯ ಸಹಕಾರ ನೀಡಿ ಅಗತ್ಯವಿರುವ ಭೂಮಿ ಕಲ್ಪಿಸಿದರೆ, ಎಲ್ಲೆಲ್ಲಿಗೆ ಲೈನ್‌ಗಳು ಬೇಕೋ ಆ ಎಲ್ಲವನ್ನೂ ಮಾಡಲು ನಾವು ಸಿದ್ಧರಿದ್ದೇವೆ ಎಂದು ತಿಳಿಸಿದರು.

2013–14ರಲ್ಲಿ ಯುಪಿಎ ಸರ್ಕಾರ ಇದ್ದಾಗ, ರಾಜ್ಯವೊಂದರ ರೈಲ್ವೆಗೆ ಬಜೆಟ್‌ನಲ್ಲಿ 830 ಕೋಟಿ ಕೊಡುತ್ತಿದ್ದರು. ನಮ್ಮ ಸರ್ಕಾರದಲ್ಲಿ 7,564 ಕೋಟಿ ಅನುದಾನ ನೀಡಲಾಗಿದೆ. ಕಳೆದ ಬಾರಿ 7,561 ಕೋಟಿ ಕೊಡಲಾಗಿತ್ತು ಈ ಬಾರಿ 3 ಕೋಟಿ ಹೆಚ್ಚಳ ಮಾಡಲಾಗಿದೆ ಎಂದರು.

ಇಲ್ಲಿಂದ ಮಂತ್ರಾಲಯಕ್ಕೆ ಪ್ರಯಾಣ ಮಾಡಲಿದ್ದೇನೆ ಎಂದ ಅವರು, ಇಶಾ ಫೌಂಡೇಷನ್‌ನ ಶಿವರಾತ್ರಿ ಕಾರ್ಯಕ್ರಮದ ವೇದಿಕೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಜೊತೆಯಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಇದ್ದ ಸಂಬಂಧ ನಡೆಯುತ್ತಿರುವ ಚರ್ಚೆಗೆ ಪ್ರತಿಕ್ರಿಯಿಸಿ, ಡಿ.ಕೆ.ಶಿವಕುಮಾರ್ ಅವರಿಗೆ ಒಳ್ಳೆಯದಾಗಲಿ ಎಂದಷ್ಟೇ ಹೇಳಿ ನಿರ್ಗಮಿಸಿದರು. ಈ ವೇಳೆ ಮಾಜಿ ಸಂಸದ ಪ್ರತಾಪ್ ಸಿಂಹ, ಶಾಸಕ ಟಿ.ಎಸ್.ಶ್ರೀವತ್ಸ ಮತ್ತಿತರರು ಹಾಜರಿದ್ದರು.

ಸ್ಕೂಟರ್, ಆಟೋದಲ್ಲಿ ವ್ಹೀಲಿಂಗ್; ಪೊಲೀಸರಿಂದ ಕಾನೂನು ಪಾಠ

ಸಾಮಾಜಿಕ ಜಾಲತಾಣದ ಮಾಹಿತಿ ಆಧರಿಸಿ ವಾಹನಗಳು ವಶಕ್ಕೆ



ಮೈಸೂರು, ಮಾ.1(ಎಸ್‌ಬಿಡಿ)– ದ್ವಿಚಕ್ರ ವಾಹನ ಹಾಗೂ ಆಟೋ ವ್ಹೀಲಿಂಗ್ ಮೂಲಕ ಸಾರ್ವಜನಿಕರಿಗೆ ಅಪಾಯ ತಂದೊಡ್ಡುವವರನ್ನು ಜಿಲ್ಲಾ ಪೊಲೀಸರು ಸಾಮಾಜಿಕ ಜಾಲತಾಣದ ಮೂಲಕ ಪತ್ತೆಹಚ್ಚಿ ಬಿಸಿ ಮುಟ್ಟಿಸುತ್ತಿದ್ದಾರೆ.

ಸ್ಕೂಟರ್‌ನಲ್ಲಿ ವ್ಹೀಲಿಂಗ್ ಮಾಡಿದ್ದ ಯುವಕನನ್ನು ಇಲವಾಲ ಠಾಣೆ ಪೊಲೀಸರು ಹಾಗೂ ಆಟೋದಲ್ಲಿ ವ್ಹೀಲಿಂಗ್ ಮಾಡುವುದರ ಜೊತೆಗೆ ಡ್ಯಾನ್ಸ್ ಮಾಡಿದ್ದ ಇಬ್ಬರನ್ನು ಬಿಳಿಕೆರೆ ಠಾಣೆ ಪೊಲೀಸರು ವಶಕ್ಕೆ ಪಡೆದು, ಅವರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಹೆದ್ದಾರಿಯಲ್ಲಿ ವ್ಹೀಲಿಂಗ್: ಮೈಸೂರಿನ ಏಕಲವ್ಯನಗರದ ಯುವಕ ಪ್ರಜ್ವಲ್ (22), ತನ್ನ ಹೋಂಡಾ ಡಿಯೋ ಸ್ಕೂಟರ್‌ನಲ್ಲಿ ಮೈಸೂರು–ಹುಣಸೂರು ಹೆದ್ದಾರಿಯಲ್ಲಿ ಈರನಕೊಪ್ಪಲು ಗೇಟ್ ಕಡೆಯಿಂದ ಪೆಟ್ರೋಲ್ ಬಂಕ್ ಕಡೆಗೆ ವ್ಹೀಲಿಂಗ್ ಮಾಡಿದ್ದ. ಬಳಿಕ ವ್ಹೀಲಿಂಗ್ ಮಾಡಿದ್ದ ವಿಡಿಯೋ ಹಾಗೂ ಫೋಟೋಗಳನ್ನು ತನ್ನ ಇನ್ಸ್ಟಾಗ್ರಾಮ್ ಖಾತೆಯಲ್ಲಿ ಹಂಚಿಕೊಂಡಿದ್ದ.

ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ತರುವಂತಹ ವ್ಯಕ್ತಿಗಳು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡುವುದರ ಬಗ್ಗೆ ನಿಗಾ ವಹಿಸಿದ್ದ ಇಲವಾಲ ಠಾಣೆ ಸಿಬ್ಬಂದಿ ಅಭಿಷೇಕ್, ಪ್ರಜ್ವಲ್‌ನ ಇನ್ಸ್ಟಾಗ್ರಾಮ್ ಖಾತೆಯಲ್ಲಿ ಹಂಚಿಕೊಂಡಿದ್ದ ವ್ಹೀಲಿಂಗ್ ವಿಡಿಯೋ ಗಮನಿಸಿದ್ದರು. ಈ ಬಗ್ಗೆ ಸಬ್‌ಇನ್ಸ್‌ಪೆಕ್ಟರ್ ಬಿ.ಆರ್.ಮಹೇಶ್ ಅವರಿಗೆ ತಿಳಿಸಿ, ಅವರ ನಿರ್ದೇಶನದಂತೆ ವ್ಹೀಲಿಂಗ್ ಮಾಡಿದ್ದ ಪ್ರಜ್ವಲ್‌ನನ್ನು ಪತ್ತೆ ಹಚ್ಚಿ, ಆತನ ಸ್ಕೂಟರ್ ವಶಪಡಿಸಿಕೊಂಡು ಪ್ರಕರಣ ದಾಖಲಿಸಲಾಗಿದೆ.

ಆಟೋದಲ್ಲಿ ಡ್ಯಾನ್ಸ್: ತ್ರಿಚಕ್ರ ಆಟೋದಲ್ಲಿ ವ್ಹೀಲಿಂಗ್ ಜೊತೆಗೆ ಡ್ಯಾನ್ಸ್ ಮಾಡಿದ್ದನ್ನು ಇನ್ಸ್ಟಾಗ್ರಾಮ್‌ನಲ್ಲಿ ಹಂಚಿಕೊಂಡಿದ್ದ ಇಬ್ಬರನ್ನು ಬಿಳಿಕೆರೆ ಠಾಣೆ ಪೊಲೀಸರು ಪತ್ತೆ ಹಚ್ಚಿದ್ದಾರೆ. ವ್ಹೀಲಿಂಗ್ ಮಾಡಿದ್ದ ಆಟೋ ವಶಪಡಿಸಿಕೊಂಡು, ಬಿಳಿಕೆರೆಯ ನಾಗರಾಜ ಅಲಿಯಾಸ್ ನಾಗ(26) ಹಾಗೂ ಹಳೆಬೀಡು ಗ್ರಾಮದ ಹರೀಶ್ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಗುಪ್ತ ಮಾಹಿತಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಬಿ.ಜಿ.ಅಶೋಕ್, ಸಾಮಾಜಿಕ ಜಾಲತಾಣಗಳನ್ನು ಪರಿಶೀಲಿಸುವ ವೇಳೆ, ಗೊಮ್ಮಟಗಿರಿ ಬಳಿ ಆಟೋ ವ್ಹೀಲಿಂಗ್ ಮಾಡುವುದು ಹಾಗೂ ಮತ್ತೊಬ್ಬ ವ್ಯಕ್ತಿ ಹಿಂಬದಿ ಸೀಟ್‌ನಲ್ಲಿ ನಿಂತು ಡ್ಯಾನ್ಸ್ ಮಾಡುವ ವಿಡಿಯೋ ಕಂಡಿದೆ. ಕೂಡಲೇ ಮೇಲಧಿಕಾರಿಗಳಿಗೆ ಮಾಹಿತಿ ನೀಡಿ, ಅವರ ಸೂಚನೆಯಂತೆ ಹಂಚಿಕೆಯಾಗಿದ್ದ ಇನ್ಸ್ಟಾಗ್ರಾಮ್ ಖಾತೆ ಜಾಡು ಹಿಡಿದಾಗ ಅದು ಬಿಳಿಕೆರೆಯ ಆಟೋ ಚಾಲಕ ನಾಗರಾಜ ಅವರ ಖಾತೆ ಎನ್ನುವುದು ತಿಳಿದಿದೆ. ಕೂಡಲೇ ಸಿಬ್ಬಂದಿಗಳಾದ ಬಿ.ಜಿ.ಅಶೋಕ್ ಹಾಗೂ ಮಂಜು ಬಿಳಿಕೆರೆಯ ಹಳೆಬೀಡು ಆಟೋ ನಿಲ್ದಾಣದ ಬಳಿ ತೆರಳಿ, ಆಟೋ ಚಾಲಕ ನಾಗರಾಜುವಿನ ವಿಚಾರಣೆ ನಡೆಸಿದ್ದಾರೆ. ಸ್ನೇಹಿತ ಹರೀಶ್ ಆಟೋದಲ್ಲಿ ವ್ಹೀಲಿಂಗ್ ಮಾಡುವಾಗ ನಾಗರಾಜು ಹಿಂಬದಿ ಸೀಟ್‌ನಲ್ಲಿ ನಿಂತು ಡ್ಯಾನ್ಸ್ ಮಾಡಿದ್ದಾಗಿ ತಿಳಿದುಬಂದಿದೆ. ಬಳಿಕ ಆಟೋವನ್ನು ವಶಪಡಿಸಿಕೊಂಡು ಇಬ್ಬರ ವಿರುದ್ಧ ಪ್ರಕರಣ ದಾಖಲಿಸಿ, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಶೋಕಿಗಾಗಿ ಜೀವಕ್ಕೆ ಕುತ್ತು: ವ್ಹೀಲಿಂಗ್ ಮಾಡುವ ವಿಡಿಯೋಗೆ ಹಾಡು ಸೇರಿಸಿ, ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುವುದು ಹೆಚ್ಚಾಗಿದೆ. ಆದರೆ ಈ ಶೋಕಿಯಿಂದ ತಮ್ಮ ಜೀವಕ್ಕೆ ಮಾತ್ರವಲ್ಲ ಸಾರ್ವಜನಿಕರ ಜೀವಕ್ಕೂ ಸಂಚಕಾರ ಎನ್ನುವ ಅರಿವಿಲ್ಲದಿರುವುದು ವಿಷಾದನೀಯ. ಈ ರೀತಿಯ ಅಪಾಯಕಾರಿ ಚಾಲನೆ ಮಾಡುವವರ ವಿರುದ್ಧ ಪೊಲೀಸರು ನಿಗಾ ಇಟ್ಟಿದ್ದಾರೆ. ವ್ಹೀಲಿಂಗ್ ಮಾಡಿದವರ ಜೊತೆಗೆ ಅದನ್ನು ವಿಡಿಯೋ ಮಾಡುವ ಮೂಲಕ ಪ್ರೋತ್ಸಾಹಿಸುವವರ ವಿರುದ್ಧವೂ ಕ್ರಮ ಜರುಗಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಶ್ರೀ ನಿಜಶರಣ ಅಂಬಿಗರ ಚೌಡಯ್ಯ ಜಯಂತಿ; 'ಅಂಬಿಗ ರತ್ನ' ಪ್ರಶಸ್ತಿ ಪ್ರದಾನ

ನಿಷ್ಠುರವಾದಿ ದಾರ್ಶನಿಕ ಅಂಬಿಗರ ಚೌಡಯ್ಯ: ಮಾಜಿ ಸಚಿವ ಪ್ರಮೋದ್ ಮಧ್ವರಾಜ್


ಮೈಸೂರಿನ ಸುಣ್ಣದಕೇರಿಯಲ್ಲಿರುವ ಗಂಗಾಮತಸ್ಥರ ಸಮುದಾಯ ಭವನದಲ್ಲಿ ಶ್ರೀ ನಿಜಶರಣ ಅಂಬಿಗರ ಚೌಡಯ್ಯ ಜಯಂತಿ ಹಾಗೂ 'ಅಂಬಿಗ ರತ್ನ' ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಿತು.

ಮೈಸೂರು, ಮಾ.1(ಎಂಕೆ)– ಮೈಸೂರಿನ ಸುಣ್ಣದಕೇರಿಯಲ್ಲಿರುವ ಗಂಗಾಮತಸ್ಥರ ಸಮುದಾಯ ಭವನದಲ್ಲಿ ಸುವರ್ಣ ಬೆಳಕು ಫೌಂಡೇಷನ್ ಹಾಗೂ ಗಂಗಾಮತಸ್ಥರ (ಬೆಸ್ತರ) ಸಂಘದ ವತಿಯಿಂದ ಶ್ರೀ ನಿಜಶರಣ ಅಂಬಿಗರ ಚೌಡಯ್ಯ ಜಯಂತಿ ಹಾಗೂ ಮೊದಲ ವರ್ಷದ 'ಅಂಬಿಗ ರತ್ನ' ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಿತು.

ಶ್ರೀ ನಿಜಶರಣ ಅಂಬಿಗರ ಚೌಡಯ್ಯ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದ ಮಾಜಿ ಸಚಿವ ಪ್ರಮೋದ್ ಮಧ್ವರಾಜ್ ಮಾತನಾಡಿ, 12ನೇ ಶತಮಾನದ ಸಂದರ್ಭದಲ್ಲಿ ಶೋಷಿತ ಸಮಾಜದ ಪರವಾಗಿ ಅಂಬಿಗರ ಚೌಡಯ್ಯನವರು ಕಲ್ಯಾಣ ಕ್ರಾಂತಿಯ ಭಾಗವಾಗಿದ್ದರು. ಜಗತ್ತಿನ ಪ್ರಥಮ ಪಾರ್ಲಿಮೆಂಟ್ ಎಂದೇ ಕರೆಯಲ್ಪಡುವ ಅನುಭವ ಮಂಟಪದಲ್ಲಿ ಶೋಷಿತ ಮತ್ತು ಶೋಷಣೆಗೆ ಒಳಗಾದವರಿಂದ ಸಮಾನತೆಯ ಚರ್ಚೆಗಳು ನಡೆಯುತ್ತಿದ್ದವು. ನೇರ ನುಡಿಯೊಂದಿಗೆ ನಿಷ್ಠುರವಾದಿ ದಾರ್ಶನಿಕರಾದ ಅಂಬಿಗರ ಚೌಡಯ್ಯನವರಿಗೆ ನಿಜಶರಣ ಎಂಬ ಬಿರುದನ್ನು ಬಸವಣ್ಣನವರು ನೀಡಿದ್ದರು ಎಂದು ತಿಳಿಸಿದರು.

ಶರಣರು ವಿಶ್ವಮಾನವರು. ನಾವು ಅವರನ್ನು ನಮ್ಮ ಜಾತಿ–ನಿಮ್ಮ ಜಾತಿಯವರೆಂದು ಚಿಕ್ಕವರನ್ನಾಗಿ ಮಾಡಿದ್ದೇವೆ. ಬಸವಣ್ಣನವರ ಕಾಲವೇ ಅವಿಸ್ಮರಣೀಯ ಕಾಲ. ಎಲ್ಲಾ ಜನಾಂಗದ ಜನರಿಗೂ ಶರಣ ದೀಕ್ಷೆಯನ್ನು ಕೊಟ್ಟು ಸಮಾನತೆ ಕ್ರಾಂತಿ ಮಾಡಿದವರು. ಅಂಬಿಗರ ಚೌಡಯ್ಯ ಅವರು, ದೋಣಿಯಲ್ಲಿ ಜನರನ್ನು ನದಿದಾಟಿಸುತ್ತಾ ಸಾಮಾಜಿಕ ಕ್ರಾಂತಿಯ ಹೊಸ ಹೊಸ ವಿಚಾರಗಳನ್ನು ಜನರ ಮನಸ್ಸಿನಲ್ಲಿ ಮೂಡಿಸಿದವರು ಎಂದು ಸ್ಮರಿಸಿದರು.

ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್ ಮಾತನಾಡಿ, 12ನೇ ಶತಮಾನ ಬಸವಣ್ಣನವರ ಸಾಮಾಜಿಕ ಕ್ರಾಂತಿಯ ಕಾಲ. ಎಲ್ಲರನ್ನೂ ಸಮಾನವಾಗಿ ಕಂಡಂತಹ ಮಹಾಚೇತನ ಬಸವಣ್ಣನವರು. ಆಗಾಗಿಯೇ ಎಲ್ಲಾ ವರ್ಗ ಜಾತಿಯವರನ್ನು ಒಂದುಗೂಡಿಸಿ ಸಮಾನತೆಯ ಸಂದೇಶವನ್ನು ಸಾರಿದ್ದರು. ಆ ಸಾಮಾಜಿಕ ಸಮಾನತೆಯ ಕ್ರಾಂತಿಯ ಬೆಳಕಿನಲ್ಲಿ ಬೆಳಗಿದವರು ಅಂಬಿಗರ ಚೌಡಯ್ಯ. ಮನದೊಳಗೆ ಸಮಾನತೆ ತರದೆ ಹೊರಗಿನಿಂದ ಬದಲಾವಣೆ ಸಾಧ್ಯವಿಲ್ಲ. ಬದಲಾವಣೆ ಮೊದಲು ಮನದೊಳಗೆ ಆಗಬೇಕು ಎಂದರು.

ವೇದಭೂಮಿ ಯಳಂದೂರಿನ ಋಷಿ ಸಂಸ್ಥಾನಂನ ಋಷಿ ಅವಿರ್ಭವ ಗುರು ಪೂರ್ಣಾದ್ವತಿ, ಹಿರಿಯ ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ಸಮಾಜ ಸೇವಕಿ ಅಪೂರ್ವ ಶಿವಣ್ಣ, ಕರ್ನಾಟಕ ರಾಜ್ಯ ಗಂಗಾಮತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಸಂಘಟನಾ ಕಾರ್ಯದರ್ಶಿ ವಿಜಯ್‌ಕುಮಾರ್ ಗಂಗಾಪುತ್ರ, ಯೋಗ ಶಿಕ್ಷಕ ತಿರುಮಲೇ ಪ್ರಕಾಶ್, ಮುಖಂಡರಾದ ದಾಸಪ್ಪ, ನಾಗೇಂದ್ರ, ಸುವರ್ಣ ಬೆಳಕು ಫೌಂಡೇಷನ್ ಅಧ್ಯಕ್ಷ ಎಸ್.ಮಹೇಶ್, ಪ್ರದೀಪ್, ವಿನಯ್, ಪ್ರಶಾಂತ್ ಮತ್ತಿತರರಿದ್ದರು.


'ಅಂಬಿಗ ರತ್ನ' ಪ್ರಶಸ್ತಿ ಪ್ರದಾನ...

ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವವರನ್ನು ಗುರ್ತಿಸಿ, 'ಅಂಬಿಗ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಮೈಸೂರು ಯೋಗ ಒಕ್ಕೂಟ ಅಧ್ಯಕ್ಷ ಕೆ.ಜಿ.ದೇವರಾಜು, ಹಿಮಾಲಯ ಪ್ರತಿಷ್ಠಾನ ಸಂಸ್ಥಾಪಕ ಎನ್.ಅನಂತ್, ಸಾಹಿತಿ ಮತ್ತು ಶಿಕ್ಷಕ ಡಾ.ಕಿರಣ್ ಸಿಡ್ಲೇಹಳ್ಳಿ, ಅಂತಾರಾಷ್ಟ್ರೀಯ ಖೋ ಖೋ ಕ್ರೀಡಾಪಟು ಕುಮಾರಿ ಚೈತ್ರ, 'ಮೈಸೂರು ಮಿತ್ರ' ಪತ್ರಿಕೆ ವರದಿಗಾರ ಮೋಹನ್ ಕಾಯಕ ಹಾಗೂ ಸಮಾಜ ಸೇವಕ ಹೇಮಂತ್‌ಕುಮಾರ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಾಂಸ್ಕೃತಿಕ ನಾಯಕರನ್ನು ಸಾಂಕೇತಿಕವಾಗಿ ಇಟ್ಟುಕೊಂಡು ಹಿಂದುಳಿದ ಸಮಾಜಗಳು ಒಗ್ಗೂಡಬೇಕು. ಆಗ ಮಾತ್ರ ಹಿಂದುಳಿದ ಸಮಾಜಗಳು ತಮ್ಮ ಹಕ್ಕುಗಳನ್ನು ಪಡೆಯಲು, ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಸಮಾಜವನ್ನು ಒಗ್ಗೂಡಿಸಿಕೊಳ್ಳಲು ಇಂತಹ ಮಹನೀಯರನ್ನು ಸದಾ ನೆನೆಯಬೇಕು. ಆಗ ಮಾತ್ರವೇ ಮಹನೀಯರ ಜಯಂತಿಗಳಿಗೆ ನಿಜವಾದ ಅರ್ಥ ಬರಲಿದೆ.

– ಎಂ.ಕೆ.ಸೋಮಶೇಖರ್, ಮಾಜಿ ಶಾಸಕ

ಸಿ.ಮಂಜುನಾಥ್‌ಗೆ ಜಾನಪದ ಅಕಾಡೆಮಿ ಪ್ರಶಸ್ತಿ




ಮೈಸೂರು, ಮಾ.1(ಆರ್‌ಕೆ)–ಮೈಸೂರಿನ ಪುಲಕೇಶಿ ರಸ್ತೆ ನಿವಾಸಿಯಾದ ಚರ್ಮವಾದ್ಯ, ನಗಾರಿ ಕಲಾವಿದ ಸಿ.ಮಂಜುನಾಥ್ ಅವರಿಗೆ 2024–25ನೇ ಸಾಲಿನ ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

ಮಂಡ್ಯ ಜಿಲ್ಲೆ, ಮದ್ದೂರು ತಾಲೂಕಿನ ಹುರಗಲವಾಡಿಯ ಜಾನಪದ ಗಾಯಕ ರಾಮಯ್ಯ, ಹಾಸನದ ಕೋಲಾಟ ಕಲಾವಿದ ಬಿ.ಟಿ.ಮಾನವ, ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲೂಕು, ಕೆಬ್ಬೇಪುರ ಗ್ರಾಮದ ತಂಬೂರಿ ಕಲಾವಿದ ಆರ್.ಸಿದ್ದರಾಜು ಹಾಗೂ ಕೊಡಗು ಜಿಲ್ಲೆ, ವಿರಾಜಪೇಟೆ ತಾಲೂಕಿನ ಕರಡಿಗೋಡು ಗ್ರಾಮದ ಬುಡಕಟ್ಟು ಕೋಲಾಟ, ನೃತ್ಯ ಕಲಾವಿದೆ ಎಸ್.ಆರ್.ಸರೋಜ ಸೇರಿದಂತೆ ರಾಜ್ಯದ ಹಲವು ಜಾನಪದ ಕಲಾವಿದರಿಗೆ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

ಯುವತಿಯರಿಗೆ ಕಟ್ಟುಪಾಡು ವಿಧಿಸುವ ಬದಲು ಸೂಕ್ತ ಭದ್ರತೆ ಕಲ್ಪಿಸುವುದೊಳಿತು

ಅದಮ್ಯ ಚೇತನ ಫೌಂಡೇಷನ್ ಅಧ್ಯಕ್ಷೆ ತೇಜಸ್ವಿನಿ ಅನಂತಕುಮಾರ್ ಸಲಹೆ



'ಸೇವಾ ಸಂಕ್ರಮಣ' ಕಾರ್ಯಕ್ರಮದಲ್ಲಿ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕುರಿತ ಹ್ಯಾಂಡ್‌ಬುಕ್ ಬಿಡುಗಡೆ ಮಾಡಲಾಯಿತು.

ಮೈಸೂರು, ಮಾ.1(ಎಂಕೆ)– ಸುರಕ್ಷತೆಯ ನೆಪದಲ್ಲಿ ಯುವತಿಯರಿಗೆ ಕಟ್ಟುಪಾಡು ರೂಪಿಸುವ ಬದಲು, ತಂತ್ರಜ್ಞಾನಗಳನ್ನು ಬಳಸಿ ಹೆಚ್ಚಿನ ಭದ್ರತೆ ನೀಡಬೇಕು ಎಂದು ಅದಮ್ಯ ಚೇತನ ಫೌಂಡೇಷನ್ ಅಧ್ಯಕ್ಷೆ ತೇಜಸ್ವಿನಿ ಅನಂತಕುಮಾರ್ ಸಲಹೆ ನೀಡಿದರು.

ಮೈಸೂರು ಮಾನಸಗಂಗೋತ್ರಿಯಲ್ಲಿರುವ ಮೈಸೂರು ವಿವಿ ವಿಜ್ಞಾನ ಭವನದಲ್ಲಿ ಜಿಎಸ್‌ಎಸ್ ಯೋಗ ಹಾಗೂ ಗ್ರಾಮ್ ಸಂಸ್ಥೆ ವತಿಯಿಂದ ಶನಿವಾರ ಆಯೋಜಿಸಿದ್ದ 'ಸೇವಾ ಸಂಕ್ರಮಣ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭಾರತದ ಸಂಸ್ಕೃತಿಯನ್ನು ಅನುಸರಿಸುತ್ತಿದ್ದೇವೆ ಎನ್ನುವ ಯುವತಿಯರನ್ನು ಅವರ ಅರಿವಿಗೆ ಬಾರದಂತೆ ಪಾಶ್ಚಾತ್ಯ ಸಂಸ್ಕೃತಿ ಆವರಿಸುತ್ತಿದೆ. ಮಹಿಳೆಯರು ಪುರುಷರಿಗಿಂತ ಎರಡು ಪಟ್ಟು ಬಲಾಢ್ಯರೆಂಬುದಕ್ಕೆ ಅನೇಕ ಉದಾಹರಣೆಗಳಿದ್ದರೂ ಪುರುಷರನ್ನು ಮೆಟ್ಟಿ ತಾನು ಮೇಲೆ ಹೋಗಬೇಕು ಎಂಬ ಭಾವನೆ ಸರಿಯಲ್ಲ. ಹಾಗೆಯೇ ಪುರುಷರು ಮಹಿಳೆಯರ ಸ್ಥಾನದಲ್ಲಿ ನಿಂತು ಯೋಚಿಸಬೇಕು. ಅದೇ ರೀತಿ ಮಹಿಳೆಯರು ತಮ್ಮ ಕರ್ತವ್ಯಗಳನ್ನು ಮರೆಯಬಾರದು ಎಂದು ಎಚ್ಚರಿಸಿದರು.

ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಮಾತನಾಡಿ, ಶೈಕ್ಷಣಿಕ ಸಂಸ್ಥೆಗಳು ಹಾಗೂ ಕೈಗಾರಿಕೆಗಳ ನಡುವೆ ಅಂತರ ಕಡಿಮೆಯಾಗಿಲ್ಲ. ಶಿಕ್ಷಣ ಜ್ಞಾನಕ್ಕಿಂತ ಅನ್ನಕ್ಕಾಗಿ ಬಳಕೆಯಾಗುತ್ತಿದೆ. ಉನ್ನತ ಶಿಕ್ಷಣದೊಂದಿಗೆ ಜ್ಞಾನ ವಿಸ್ತರಿಸಿಕೊಂಡ ವಿದ್ಯಾರ್ಥಿಯ ಜೀವನ ಬದಲಾಗಲಿದೆ. ಶಿಕ್ಷಣದೊಂದಿಗೆ ಜ್ಞಾನ ಹಾಗೂ ಕೌಶಲ ಸಮ್ಮಿಳಿತವಾಗಬೇಕು. ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ತರಗತಿಗಳನ್ನು ಹೆಚ್ಚಿಸಿ, ಸವಾಲುಗಳನ್ನು ಸಕಾರಾತ್ಮಕವಾಗಿ ಎದುರಿಸುವ ಭಾವನೆ ಬೆಳೆಸಬೇಕಿದೆ ಎಂದರು.

ಅವಕಾಶ ಸೃಷ್ಟಿಸುವ ಕೆಲಸವಾಗಬೇಕು: ಎನ್‌ಆರ್ ಗ್ರೂಪ್ಸ್ ನಿರ್ದೇಶಕ ಪವನ್ ರಂಗ ಮಾತನಾಡಿ, ನಗರದಲ್ಲಿ ಕಲಿತ ವಿದ್ಯಾರ್ಥಿಗಳಲ್ಲಿ ಶೇ.15ರಿಂದ ಶೇ.20ರಷ್ಟು ವಿದ್ಯಾರ್ಥಿಗಳಷ್ಟೇ ಇಲ್ಲಿ ಉಳಿಯಲಿದ್ದು, ಉಳಿದವರು ಅವಕಾಶಕ್ಕಾಗಿ ಬೇರೆಡೆ ತೆರಳುತ್ತಾರೆ. ಹೀಗಾಗಿ ಅವಕಾಶಗಳನ್ನು ಸೃಷ್ಟಿಸುವ ಕೆಲಸ ಆಗಬೇಕಿದೆ. ವಿಶ್ವವಿದ್ಯಾಲಯಗಳು ಕಂಪನಿಗಳನ್ನು ಸಂಪರ್ಕಿಸಿ, ಅವರ ಅಗತ್ಯದ ಬಗ್ಗೆ ತಿಳಿದುಕೊಂಡು ವಿದ್ಯಾರ್ಥಿಗಳನ್ನು ಕಳಿಸಿಕೊಟ್ಟಾಗ ಕೈಗಾರಿಕೆ ಹಾಗೂ ವಿಶ್ವವಿದ್ಯಾಲಯಗಳ ನಡುವಿನ ಅಂತರ ಮುರಿಯುತ್ತದೆ. ಇದು ತುರ್ತಾಗಿ ನಡೆಯಬೇಕಾದ ಕಾರ್ಯ ಎಂದು ಅಭಿಪ್ರಾಯಪಟ್ಟರು.

ವರ್ಷಕ್ಕೆ 20 ಸರ್ಕಾರಿ ಶಾಲೆಗಳು ಮುಚ್ಚುತ್ತಿವೆ: ಗ್ರಾಮ್ ಸಂಸ್ಥೆಯ ನಿರ್ದೇಶಕ ಬಸವರಾಜ್ ಆರ್.ಶ್ರೇಷ್ಠಾ ಮಾತನಾಡಿ, ಮೈಸೂರಿನಲ್ಲಿ ಅವಕಾಶಗಳ ಜೊತೆಗೆ ಹಲವು ಸಮಸ್ಯೆಗಳಿದ್ದು, ಬಗೆ ಹರಿಸುವ ಕುರಿತು ಚಿಂತನೆ ಮಾಡಲೇ ಬೇಕಾಗಿದೆ. ಹತ್ತು ವರ್ಷಗಳ ಹಿಂದೆ ನಡೆದ ಸರ್ವೆಯೊಂದರಲ್ಲಿ ನಗರದಲ್ಲಿ ಒಬ್ಬ ಮಹಿಳೆ ಒಂದಕ್ಕಿಂತ ಹೆಚ್ಚಿನ ಕಡೆ ಸಾಲ ಪಡೆಯುತ್ತಿದ್ದಳು. ಬಾಲ್ಯವಿವಾಹವು ಗ್ರಾಮಾಂತರ ಭಾಗಕ್ಕಿಂತ ಹೆಚ್ಚಾಗಿ ನಗರ ಪ್ರದೇಶದಲ್ಲಿ ನಡೆಯುತ್ತಿದೆ. ಜಿಲ್ಲೆಯಲ್ಲಿ ಪ್ರತಿ ವರ್ಷ 20 ಸರ್ಕಾರಿ ಶಾಲೆಗಳು ಮುಚ್ಚುತ್ತಿದ್ದು, ಇಂತಹ ವಿಚಾರಗಳ ಬಗ್ಗೆ ಗಂಭೀರ ಚರ್ಚೆಗಳನ್ನು ನಡೆಸುವ ಉದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ಜಿಎಸ್‌ಎಸ್ ಯೋಗಾ ಸಂಸ್ಥೆಯ ಸಂಸ್ಥಾಪಕ ಶ್ರೀಹರಿ ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಗುಂಡ : ಯಾರು ಈ ಹೋಟೆಲ್ ಮ್ಯಾನೇಜರ್ ಕಾಫಿಯಲ್ಲಿ ನೊಣ ಬಿದ್ದು ಸತ್ತಿದೆ!
ಮ್ಯಾನೇಜರ್ : ಸರ್...ನಾನು ನನ್ನ ಕೆಲಸ ಬಿಟ್ಟು ನೊಣಕ್ಕೆ ಈಜುವುದನ್ನೂ ಕಲಿಸಲಾ!

ಮೈಸೂರು ಮಿತ್ರ

ಭಾನುವಾರ, 2 ಮಾರ್ಚ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ನಿನ್ನ ಮನಸ್ಸಿಗೆ ನೋವು ಮಾಡುವ ವ್ಯಕ್ತಿಗಳಿಗೆ ನಿನ್ನ ಬೆಲೆ ತಿಳಿಯಬೇಕೆಂದರೆ ಮೊದಲು ನೀನು ಅವರನ್ನು ನಿರ್ಲಕ್ಷಿಸುವುದನ್ನು ಕಲಿ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಿನ್ನಲ್ಲಿ ನೀ ಹುಡುಕು, ಅರಿಷಡ್ವರ್ಗಗಳ ಹೊರ ಹಾಕು.

ನಿಮ್ಮ ಪತ್ರಗಳು

■ ಮೈಸೂರಿನ ಜನತೆಗೆ ನೀರಿನ ದರ ದುಪ್ಪಟ್ಟು ಏರಿಕೆ ಶಾಕ್ !

ಮಾನ್ಯರೇ,

ನಾಡಿನ ಜನತೆ ಇನ್ನೂ ಮೆಟ್ರೋ, ಸಾರಿಗೆ, ಆಟೋ ದರ ಏರಿಕೆಯಿಂದ ಕಂಗೆಟ್ಟು, ಮುಂದೆ ಆಗಬಹುದಾದ ವಿದ್ಯುತ್, ಹಾಲಿನ ದರ ಏರಿಕೆಗಳ ಬಗ್ಗೆ ಚಿಂತಿಸುತ್ತಿರುವಾಗಲೇ, ಮೈಸೂರು ಮಹಾನಗರ ಪಾಲಿಕೆ ಒಂದು ಹೆಜ್ಜೆ ಮುಂದೆ ಹೋಗಿ ಸದ್ದು ಗದ್ದಲವಿಲ್ಲದೆ ನೀರಿನ ಬಳಕೆಯ ದರವನ್ನು ಹೆಚ್ಚಿಸಿದೆ. ಹೋಗಲಿ ಇಪ್ಪತ್ತೋ, ಐವತ್ತೋ ಎಂದು ಸುಮ್ಮನಾಗೋಣವೆಂದರೆ, ಅಕ್ಷರಶಃ ದುಪ್ಪಟ್ಟು, ಅಂದರೆ ಈ ಹಿಂದೆ ಇದ್ದ ಕನಿಷ್ಟ ದರವಾದ ನೀರಿನ ಶುಲ್ಕ ರೂ.164 ಗಳನ್ನು ರೂ 250ಕ್ಕೂ, ಒಳಚರಂಡಿ ಶುಲ್ಕ ರೂ 38 ರಿಂದ ರೂ.75ಕ್ಕೂ ಮತ್ತು ಸೇವಾ ಶುಲ್ಕ ರೂ. 1 ಅನ್ನು ರೂ. 2ಕ್ಕೆ ಪರಿಷ್ಕರಿಸಿ ಇದೀಗ ಒಟ್ಟಾರೆ ಕನಿಷ್ಠ ರೂ. 327ಕ್ಕೆ ಏರಿಸಿ ಶೇಕಡಾ ನೂರಕ್ಕೂ ಮೀರಿ ಹೆಚ್ಚಿಸಿದೆ. ಹುಲಿ ಒಮ್ಮೆ ಮನುಷ್ಯನ ರಕ್ತದ ರುಚಿ ನೋಡಿದರೆ ಬಿಡುವುದಿಲ್ಲವಂತೆ. ಹಾಗೆ ದರ ಏರಿಕೆಯನ್ನೇ ಹವ್ಯಾಸ ಮಾಡಿಕೊಂಡಿರುವ ಪಾಲಿಕೆ ಬರುವ ತಿಂಗಳಿನಲ್ಲಿ ಆಸ್ತಿ ತೆರಿಗೆಯನ್ನು ಎಷ್ಟು ಹೆಚ್ಚಿಸುವುದೋ ಎನ್ನುವ ಚಿಂತೆ ಇದೀಗ ಮೈಸೂರಿಗರದ್ದಾಗಿದೆ.

ಜನಪರ ಸರ್ಕಾರ, ಬಡವರ ಸರ್ಕಾರ ಎಂದು ಬಡಾಯಿ ಕೊಚ್ಚಿಕೊಳ್ಳುವ ಮುಖ್ಯಮಂತ್ರಿಗಳು ಮೈಸೂರಿನವರೇ ಆಗಿದ್ದು, ಮೈಸೂರಿಗರಿಗೆ ದರ ಏರಿಕೆ ಪ್ರಹಾರ ನಡೆಸಿರುವುದು ನಿಜಕ್ಕೂ ದುರದೃಷ್ಟಕರ. ಇಲ್ಲಿ ಶ್ರೀ ರಾಘವೇಂದ್ರಸ್ವಾಮಿಗಳ ಹಾಡು ? ಧಾರುಣಿಯೊಳು ಬಲು ಭಾರ ಜೀವನ? ಪ್ರಸ್ತುತದಲ್ಲಿ ಸರಿಯಲ್ಲವೇ?!

–ವಿಜಯ್ ಹೆಮ್ಮಿಗೆ, ಮೈಸೂರು

■ ಭಾವೈಕ್ಯದ ಸಂಕೇತವಾದ ಮಹಾ ಕುಂಭಮೇಳ!

ಮಾನ್ಯರೆ,


ನಮಗೆಲ್ಲಾ ತಿಳಿದ ಹಾಗೆ ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆದ ಮಹಾ ಕುಂಭಮೇಳ ನಿಜಕ್ಕೂ ಚರಿತ್ರೆಯನ್ನು ಸೃಷ್ಟಿಸಿದೆ ಎಂದರೆ ತಪ್ಪಾಗಲಾರದು ಅಲ್ಲವೇ? 144 ವರ್ಷದ ನಂತರ ನಡೆದ ಈ ಕುಂಭಮೇಳ ಎಲ್ಲಾ ಜನತೆಯನ್ನು ನಿಬ್ಬೆರಗಾಗಿಸಿದೆ. ಉತ್ತರ ಪ್ರದೇಶದಲ್ಲಿ ಜನತೆಯನ್ನು ಆಧ್ಯಾತ್ಮಿಕತೆಯ ಸಾಗರದಲ್ಲಿ ಮಿಂದುವಂತೆ ಮಾಡಿದೆ. ಜಗತ್ತಿನ ಮೂಲೆ ಮೂಲೆಗಳಿಂದಲೂ ಸಾಗರೋಪಾದಿಯಾಗಿ ಜನರು ಬಂದು ಈ ಕುಂಭಮೇಳದಲ್ಲಿ ಭಾಗವಹಿಸಿದ್ದರು.

ಇಲ್ಲಿ ಬಂದ ಜನತೆಗೆ ಹಸಿವಿನ ಚಿಂತೆಯಿಲ್ಲ. ತಂಗುದಾಣದ ಚಿಂತೆಯಿಲ್ಲ. ನಿರ್ಭಯವಾಗಿ ಭಕ್ತಿಯ ಪರವಶವಾಗಿ ಗಂಗೆಯಲ್ಲಿ ಮಿಂದು ಆಧ್ಯಾತ್ಮಿಕತೆ ಮೆರೆದಿದ್ದಾರೆ. ಇದರೊಟ್ಟಿಗೆ ಜಗತ್ತಿಗೆ ನಾವೆಲ್ಲಾ ಒಂದೇ ಎಂಬ ಸಂದೇಶವನ್ನು ಸಾರಿದ್ದಾರೆ ಎನ್ನಬಹುದಲ್ಲವೇ? ಭಕ್ತಿಯ ಜೊತೆಗೆ ಹೊಂದಾಣಿಕೆಯಿಂದ ಜಗತ್ತಿನಾದ್ಯಂತ ಜನರು ಬಂದು ಯಾವುದೇ ತಾರತಮ್ಯವಿಲ್ಲದೇ ಒಟ್ಟಿಗೆ ಸೇರಿ ಭಾವೈಕ್ಯತೆಯ ಬಂಧವನ್ನು ಬೆಸೆದಿದ್ದಾರೆ. ಕೋಟಿ ಕೋಟಿ ಜನಸಾಗರ ಒಟ್ಟಿಗೆ ಒಂದೆಡೆ ಸೇರಿ ನಾವೆಲ್ಲಾ ಒಂದೇ ಎಂಬ ಭಾವನೆಯನ್ನು ಜಗತ್ತಿಗೆ ಸಾರಿ ಹೇಳಿರುವುದು ಕುಂಭಮೇಳದ ಇನ್ನೊಂದು ವಿಶೇಷ ಹಾಗೂ ಚರಿತ್ರೆಯ ಪುಟಗಳಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡಬಹುದಲ್ಲವೇ? ಈ ಸುಂದರ ದೃಶ್ಯವನ್ನು ಪ್ರತಿದಿನ ದಿನಪತ್ರಿಕೆಗಳಲ್ಲಿ ಹಾಗೂ ದೂರದರ್ಶನಗಳಲ್ಲಿ ವೀಕ್ಷಿಸಿದಾಗ ಕಣ್ತುಂಬಿ ಬರುತ್ತದೆ ಮತ್ತು ನಾನು ಇದರ ಭಾಗವಾಗಲಿಲ್ಲವಲ್ಲ ಎಂಬ ನೋವು ಕಾಡುತ್ತದೆ. ಇಂತಹ ಸುಂದರ ಮನಮೋಹಕ ದೃಶ್ಯವನ್ನು ನೇರವಾಗಿ ನೋಡಿ ಅಲ್ಲಿ ಭಾಗಿಯಾದವರು ನಿಜಕ್ಕೂ ಅದೃಷ್ಟಶಾಲಿಗಳೇ ಸರಿ?!

ಹೀಗೆ ಕುಂಭಮೇಳ ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ಭಾವೈಕ್ಯದ ಸಂಕೇತವಾಗಿ ಕಂಡುಬಂದಿದೆ ಎನ್ನುವುದು ನನ್ನ ಆಶಯವಷ್ಟೇ?.! ಏನೇ ಆಗಲಿ ಅಲ್ಲಿ ಎಲ್ಲೇ ಹೋದರೂ ನಾವೆಲ್ಲಾ ಒಟ್ಟಿಗೆ ಸೇರಿದಾಗ ಒಂದೇ ಎಂಬ ಭಾವನೆಯಿಂದ ಬಾಳೋಣ!

–ಅನಿಲ್ ರಾಜು, ಸಹ ಶಿಕ್ಷಕರು, ಮೈಸೂರು

■ ಒತ್ತಡ ರಹಿತ ಪರೀಕ್ಷೆಗೆ ಶಕ್ತಿ ತುಂಬುವ ಕೆಲಸವಾಗಲಿ



ಮಾನ್ಯರೇ,

ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ವಾರ್ಷಿಕ ಪರೀಕ್ಷೆಗಳು ಶುರುವಾಗುತ್ತಿವೆ. ಇಂತಹ ಹೊತ್ತಿನಲ್ಲಿ, ವಿದ್ಯಾರ್ಥಿಗಳು ಪರೀಕ್ಷಾ ಸಮಯಕ್ಕೆ ಸರಿಯಾಗಿ ಅಥವಾ ಮುಂಚಿತವಾಗಿ ಶಾಲಾ–ಕಾಲೇಜುಗಳಿಗೆ ಹೋಗಲೇಬೇಕಾಗುತ್ತದೆ. ಶಾಲಾ–ಕಾಲೇಜಿನ ವಾಹನ ಸೌಲಭ್ಯ ಮತ್ತು ಸ್ವಂತ ವಾಹನಗಳನ್ನು ಹೊಂದಿರುವ ಪೋಷಕರ ಮಕ್ಕಳುಗಳು ಸರಿಯಾದ ಸಮಯಕ್ಕೆ ತೆರಳಬಹುದು. ಆದರೆ, ವಾಹನ ಸೌಲಭ್ಯವಂಚಿತ ಬಡ–ಮಧ್ಯಮ ಪೋಷಕರ ಮಕ್ಕಳು ಸರ್ಕಾರಿ ಬಸ್ಸುಗಳಲ್ಲೇ ಹೋಗಬೇಕಾದ ಅನಿವಾರ್ಯತೆ ಇರುತ್ತದೆ. ಆದುದರಿಂದ, ಶಕ್ತಿ ಯೋಜನೆಯ ಲಾಭವನ್ನು ಸಂಪೂರ್ಣವಾಗಿ ಪಡೆಯುತ್ತಿರುವವರು, ಒಂದೆರಡು ತಿಂಗಳು ಕಾಲ ಬಸ್ಸುಗಳಲ್ಲಿ ಅನಗತ್ಯವಾಗಿ ಓಡಾಡುವುದನ್ನು ನಿಲ್ಲಿಸಿ, ಶಾಲಾ–ಕಾಲೇಜುಗಳಿಗೆ ವಿದ್ಯಾರ್ಥಿಗಳು ಸರಿಯಾದ ಸಮಯಕ್ಕೆ ತಲುಪಿ, ಒತ್ತಡರಹಿತವಾಗಿ ಪರೀಕ್ಷೆಗಳನ್ನು ಎದುರಿಸುವ ಶಕ್ತಿ ತುಂಬುವ ಕೆಲಸವನ್ನು ಮಾಡಬೇಕೆಂದು ಎಲ್ಲಾ ಅಕ್ಕ–ತಂಗಿಯರು, ತಾಯಂದಿರಲ್ಲಿ ಮನವಿ ಮಾಡುತ್ತೇನೆ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ದೇವಾ... ಈಗ ಯಾರಿಹರು ನನಗೆ ಆದರ್ಶ!

ಇದೀಗ ಶಿವರಾತ್ರಿ ಮುಗಿದಿದೆ. ಮನವೆಲ್ಲ ಶಿವನ ನಾಮ, ಧ್ಯಾನಗಳ ಗುಂಗಿನಲ್ಲೇ ಇದೆ ಎಂದರೆ ತಪ್ಪೇನಿಲ್ಲ. ಶಿವರಾತ್ರಿಯು ಬೇಸಿಗೆಯ ವಕ್ತಾರ ಎನ್ನುತ್ತಾರೆ. ಆದರೆ ಈ ಬಾರಿ ಬೇಸಿಗೆಯು ಅದಕ್ಕೂ ಮುನ್ನವೇ ಕಾಲಿಟ್ಟಾಗಿದೆ. ಹೊರಗೆ ಒಂದು ರೀತಿಯ ಸೆಖೆ. ಅದನ್ನು ಗಾಳಿಯ ಮೂಲಕ, ಹವಾ ನಿಯಂತ್ರಣದ ಮೂಲಕ, ತಂಪು ಪಾನೀಯಗಳ ಮೂಲಕ ಹೇಗಾದರೂ ಸಹಿಸಿಕೊಳ್ಳಬಹುದು. ಆದರೆ, ಒಳಗಿನ ಈ ಧಗೆ! ಅದನ್ನು ನಿವಾರಿಸಿಕೊಳ್ಳುವ ಬಗೆ ಹೇಗೆ. ಇದೇನು, ಒಳಗಿನ ಧಗೆ ಎಂದಿರಾ ಒಂದೇ, ಎರಡೇ ಹೇಳಲು ಮನದಲ್ಲೇ ಚಿಂತಿಸಿ, ಮಥಿಸಿ ಹೈರಾಣಾಗಿದೆ. ಒಂದು ಕಡೆ ಮಕ್ಕಳೇ ನಮ್ಮ ದೇಶದ ಭವಿಷ್ಯ ಎಂದೆಲ್ಲ ಬೊಗಳೆ ಬಿಡುವ ರಾಜಕಾರಣಿಗಳ ಅತ್ಯಂತ ಹೀನ, ಸ್ವಾರ್ಥದ ಮಂಗಾಟಗಳನ್ನು ನೋಡಿ ನೋಡಿ ಹೇಸಿರುವ ಮನ. ಮತ್ತೊಂದೆಡೆ ಮಕ್ಕಳ, ಯುವಕರ, ಮುಗ್ಧರ ದಾರಿ ತಪ್ಪಿಸುವಂತಹ ಸಿನೆಮಾಗಳ ಆಕರ್ಷಕ, ಕೃತಕ, ಅರ್ಥಹೀನ ಸಾಲು ಸಾಲು ಪರಂಪರೆ, ಯಾವ ಕ್ಷಣದಲ್ಲಿ ಏನಾದೀತೋ, ಮಕ್ಕಳ, ಅದರಲ್ಲೂ ಹೆಣ್ಣು ಮಕ್ಕಳ ರಕ್ಷಣೆಯು ಎಂತೋ ಎಂದು ಪರಿತಪಿಸುವ ತಾಯಂದಿರ ಚಿಂತೆ, ಬಡತನದ ಬೇಗುದಿ, ಸಾಲದ ಹೊರೆಯನ್ನು ತಡೆಯಲಾರದೆ ಆತ್ಮಹತ್ಯೆಗೆ ಶರಣಾಗುವ ಅಮಾಯಕ ಜೀವಿಗಳು. ಮುಗ್ಧರನ್ನು ನಿರ್ದಯವಾಗಿ ಬಲಿ ತೆಗೆದುಕೊಳ್ಳುವ ಕರಾಳ ವಿಕೃತ ಮನಸಿನ ಕ್ರೂರ (ಮಾನವ ರೂಪದ) ರಾಕ್ಷಸರು. ಹೀಗೆ ಒಂದೇ ಎರಡೇ.

ಬೆಳಗ್ಗೆ ಎದ್ದು ದಿನಪತ್ರಿಕೆ ತೆಗೆದರೆ ಸಾಕು. ಒಂದಾದರೂ ದೇಶಕ್ಕೆ ಒಳಿತಾಗುವ, ಧೀರತೆಯನ್ನು ಸಾರುವ, ಕಲಿವ ಮನಸುಗಳಿಗೆ ಹುಮ್ಮಸ್ಸು ನೀಡುವ, ಕಿರಿಯರಿಗೆ ಸ್ಫೂರ್ತಿ ನೀಡುವ ಒಂದಾದರೂ ಸುದ್ದಿ? ಬಾಲಕಿಯ ಮೇಲೆ ಅತ್ಯಾಚಾರ, ಲಂಚ ತಿನ್ನುವಾಗ ಸಿಕ್ಕಿಬಿದ್ದ ಅಧಿಕಾರಿ, ಜೇಲಿನಿಂದ ಪರಾರಿಯಾದ ಅಪರಾಧಿ, ಸ್ವಂತ ತಂದೆಯನ್ನೇ ಕೊಂದ ಮಗ.... ಇದೆಲ್ಲವನ್ನೂ ಮೀರಿದ ಆಡಳಿತ ಮತ್ತು ವಿರೋಧ ಪಕ್ಷಗಳ ಪರಸ್ಪರ ಕೆಸರೆರಚಾಟ ಇಂಥವುಗಳದ್ದೇ ಕಾರುಬಾರು. ಅದೇ ಅವರ ಕಾಯಕವೇನೋ ಎಂದೆನಿಸಿಬಿಟ್ಟಿದೆ. ಇದಕ್ಕಾಗಿಯೇ ಅವರುಗಳನ್ನು ಜನರು ತಮ್ಮ ಪ್ರತಿನಿಧಿಗಳನ್ನಾಗಿ ಆಯ್ಕೆ ಮಾಡಿ ಕಳುಹಿಸಿರುವುದು. ಜಾತಿ, ಧರ್ಮ, ಪಂಥ ಇವೆಲ್ಲವೂ ಪರಸ್ಪರರಲ್ಲಿ ದ್ವೇಷ ಹೆಚ್ಚು ಮಾಡಲಿಕ್ಕಾಗಿ ಇರುವಂತಹುದೇ. ಇವಿಷ್ಟೇ ಸಾಲದೆಂಬಂತೆ ಸಂವಹನಕ್ಕಾಗಿ ಮಾತ್ರ ಇರಬೇಕಾದಂತಹ ಭಾಷೆಯೂ ಈ ಪಟ್ಟಿಗೆ ಸೇರಿಕೊಂಡಿದೆ. ನಮ್ಮ ರಾಜಕಾರಣಿಗಳಲ್ಲಿ ಮಾನಸಿಕ ಶುಚಿತ್ವವಾಗಲೀ, ದೇಶಭಕ್ತಿಯಾಗಲೀ, ಜನಸೇವಾ ಮನೋಭಾವ ಕಿಂಚಿತ್ತಾಗಲೀ ಇದ್ದಿದ್ದರೆ ಬಹುಶಃ ಪರಿಸ್ಥಿತಿ ಇಷ್ಟು ಹದಗೆಡುತ್ತಿರಲಿಲ್ಲವೇನೋ. ನನಗೆ ಅನೇಕ

> “ ಸಮಾಜದಲ್ಲಿ ಪ್ರತಿಯೊಬ್ಬರೂ ತಮ್ಮನ್ನು ತಾವೇ ತಿದ್ದಿಕೊಳ್ಳುತ್ತಾ ಹೋದರೆ, ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಅದಕ್ಕಿಂತ ಸರಳ ಉಪಾಯ ಯಾವುದಿದೆ. ನಮ್ಮ ನಮ್ಮ ಮನಸ್ಸನ್ನು ಆರೋಗ್ಯವಾಗಿ, ಅಂದರೆ ಒಳ್ಳೆಯ ಆಲೋಚನೆಗಳು ಇರುವಂತೆ ನೋಡಿಕೊಂಡರೆ, ತಾನಾಗಿಯೇ ಎಲ್ಲವೂ, ಎಲ್ಲರೂ ಸನ್ಮಾರ್ಗದಲ್ಲಿ ನಡೆದಂತೆ ಅಲ್ಲವೇ?

ಬಾರಿ ಅನ್ನಿಸಿದುಂಟು. ಡಿ.ವಿ.ಗುಂಡಪ್ಪನವರು ಬರೆದ 'ಮೈಸೂರಿನ ದಿವಾನರು' ಪುಸ್ತಕವನ್ನು ನಮ್ಮ ಎಲ್ಲಾ ರಾಜಕೀಯ ಧುರೀಣರಿಗೆ ಕಡ್ಡಾಯವಾಗಿ ಓದಿಸಬೇಕಾಗಿತ್ತು. ಅಥವಾ ಅದನ್ನು ಓದಿದವರು ಮಾತ್ರ ಪ್ರಮಾಣ ಸ್ವೀಕರಿಸಲು ಅರ್ಹರು ಎಂಬ ಕಡ್ಡಾಯ ಸೂತ್ರವನ್ನು ಅನುಸರಿಸಿದ್ದರೆ ಚೆನ್ನಾಗಿರುತ್ತಿತ್ತು ಎಂದು. ಆಗಲಾದರೂ ರಾಜಕಾರಣಕ್ಕೆ ಏತಕ್ಕಾಗಿ ಬರಬೇಕು ಎಂಬುದು ರಾಜಕೀಯ ಮಾಡಲಿಕ್ಕೇ ಬಂದಂತಹವರಿಗೆ ಕಿಂಚಿತ್ತಾದರೂ ಅರ್ಥವಾಗುತ್ತಿತ್ತೋ ಏನೋ...!

ನಮ್ಮ ಬಾಲ್ಯದಲ್ಲಿ ಪಠ್ಯ ಪುಸ್ತಕಗಳಲ್ಲಿ ಭಾರತದಲ್ಲಿ ತಮ್ಮ ಶೌರ್ಯದಿಂದ, ದಾನ ಗುಣದಿಂದ, ಕ್ಷಮಾ ಗುಣದಿಂದ, ಸತ್ಯಸಂಧತೆಯಿಂದ ಮೆರೆದ ರಾಜರ, ದೇಶಭಕ್ತರ, ವೀರರ, ಪೌರಾಣಿಕ ವ್ಯಕ್ತಿಗಳ ಕಥೆಗಳು ಇದ್ದು, ಓದುವವರಿಗೆ ಬರೀ ರೋಮಾಂಚನವಷ್ಟೇ ಅಲ್ಲ, ನಾವೂ ಹಾಗಾಗಬೇಕು ಎಂಬ ಸ್ಫೂರ್ತಿಯನ್ನು ತುಂಬುತ್ತಿದ್ದುವು. ಈಗ, ಅವುಗಳೂ ಕಣ್ಮರೆಯಾಗಿವೆ. ಮಕ್ಕಳ ಮನೋವಿಕಾಸಕ್ಕೆ ಒಂದು ರೋಲ್ ಮಾಡೆಲ್ ಅಥವಾ ಆದರ್ಶ ವ್ಯಕ್ತಿ ಇರಬೇಕು ಎನ್ನುತ್ತಾರೆ ಮನೋವಿಜ್ಞಾನಿಗಳು. ಒಂದು ಕ್ಷಣ ಕಣ್ಣು ಮುಚ್ಚಿ ಯೋಚಿಸಿ. ಅಂತಹವರು ಎಷ್ಟು ಮಂದಿ ಸಿಗಬಹುದು. ರಾಷ್ಟ್ರ ನಾಯಕರ, ರಾಜ್ಯ ನಾಯಕರ ಚಿತ್ರಗಳನ್ನು ಒಮ್ಮೆ ಅವಲೋಕಿಸಿ. ದುರ್ಬೀನು ಹಾಕಿಕೊಂಡು ಹುಡುಕಿದಾಗ ಅಲ್ಲೊಬ್ಬರು, ಇಲ್ಲೊಬ್ಬರು ಸಿಗಬಹುದು. ಆದರೆ, ತಮ್ಮದೇ ಹಿಂಬಾಲಕರೆಂದು ಕರೆಸಿಕೊಳ್ಳುವ ರೌಡಿಗಳ ಗುಂಪನ್ನು ಇಟ್ಟುಕೊಂಡ, ನಮ್ಮ ಸನಾತನ ಸಂಸ್ಕೃತಿಯ ಅವಹೇಳನವನ್ನೇ ತಮ್ಮ ಕಸುಬಾಗಿಸಿಕೊಂಡವರು, ಓಟಿಗಾಗಿ ತಮ್ಮ ಸ್ವಂತ ವ್ಯಕ್ತಿತ್ವವನ್ನೇ ಮಾರಾಟ ಮಾಡಿಕೊಳ್ಳಲು ತಯಾರಿರುವವರ ಸಂಖ್ಯೆಯೇ ಹೆಚ್ಚಾಗಿ ಕಾಣಿಸುತ್ತದೆ ಅಲ್ಲವೇ. ನಮ್ಮ ಮಕ್ಕಳಿಗೆ ಇಂತಹವರು ಆದರ್ಶವಾಗಿಬಿಟ್ಟರೆ, ಭವ್ಯ ಭಾರತದ ಸ್ಥಿತಿ ಏನಾಗಬಹುದೆಂದು ಊಹಿಸಿ. ನಮ್ಮ ನಾಡಿನಲ್ಲಿ ರಾಮ, ಹರಿಶ್ಚಂದ್ರರಂತಹವರು ಇದ್ದರು ಎಂಬುದೇ ಒಂದು ವಿಡಂಬನೆ ಆಗಿಬಿಡುವ ಅಪಾಯಕರ ಸನ್ನಿವೇಶದಲ್ಲಿ ನಾವು ಇದ್ದೇವೆ. ಹಣ, ರೌಡಿತನ, ಮದ್ಯ, ಮೋಸ, ಯಾವುದಕ್ಕೂ ಹೇಸದ ಮನಃಸ್ಥಿತಿ ಇವುಗಳು ಇಂದಿನ ಅವಶ್ಯಕತೆಗಳು ಅಥವಾ ಅರ್ಹತೆಗಳು. ನೆನಪು ಮಾಡಿಕೊಳ್ಳಿ, ದೆಹಲಿಯಲ್ಲಿ ಚಲಿಸುತ್ತಿದ್ದ ಬಸ್ಸಿನಲ್ಲಿ ನಡೆದ ನಿರ್ಭಯಾಳ ಮೇಲಿನ ಅತ್ಯಾಚಾರ, ಕೊಲ್ಕತ್ತಾದಲ್ಲಿ ಇತ್ತೀಚೆಗೆ ವೈದ್ಯ ವಿದ್ಯಾರ್ಥಿ ಮೇಲೆ ನಡೆದ ಅತ್ಯಂತ ಹೀನ ಸಾಮೂಹಿಕ ಅತ್ಯಾಚಾರ, ಅಂಥವುಗಳನ್ನು ಮುಚ್ಚಿಡಲು, ರಕ್ಷಿಸಲು ಮುಂದಾದ ರಾಜಕೀಯ ಶಕ್ತಿಗಳು, ಸಿನಿಮಾದಂತೆಯೇ ನಿಜ ಜೀವನದಲ್ಲೂ ಹೀರೋಯಿಸಂ ತೋರಿಸಲು ಕಾನೂನನ್ನು ಕೈಗೆತ್ತಿಕೊಂಡ ಸಿನಿಮಾ ನಟರು. ಇಂಥವರನ್ನು ಬೆಂಬಲಿಸುವ ಅದೆಷ್ಟು ಮಂದಿ! ನಮ್ಮ ಮಾನಸಿಕ ಸ್ಥಿತಿ ಅಥವಾ ಆರೋಗ್ಯ ಎನ್ನಿ, ನೈತಿಕತೆ ಎನ್ನಿ, ಅದು ದಿವಾಳಿ ಎದ್ದಿದೆ ಎಂದು ಅನ್ನಿಸುವುದಿಲ್ಲವೇ

ಇಂತಹ ರೋಗಗ್ರಸ್ಥ ಮನಸುಗಳನ್ನು ಸರಿಪಡಿಸುವ ಬದಲು, ಅವುಗಳನ್ನು ಬೆಂಬಲಿಸುವ, ವೈಭವೀಕರಿಸುವ, ಅವನ್ನು ಸ್ವಾರ್ಥಕ್ಕಾಗಿ ಬಳಸಿಕೊಳ್ಳುವ ಕೆಟ್ಟ ಚಾಳಿಯನ್ನು ನಮ್ಮ ನಾಯಕರು, ರಾಜಕಾರಣಿಗಳು, ಶ್ರೀಮಂತರು ಬಿಡಬೇಕಿದೆ. ಅದನ್ನು ಬಿಟ್ಟಾಗ ಮಾತ್ರ ಸಮಾಜದ ಆರೋಗ್ಯವನ್ನು ಸುಧಾರಿಸಲು ಸಾಧ್ಯವಾಗಬಹುದು. ನಾನೊಬ್ಬಳು ಹೇಳಿದ ಮಾತ್ರಕ್ಕೆ ಪವಾಡ ಜರುಗುವುದಿಲ್ಲ ಎಂಬ ವಾಸ್ತವಿಕತೆಯ ಅರಿವು ನನಗಿದೆ. ಹತಾಶಗೊಂಡ ಮನಕ್ಕೆ ಸಾಂತ್ವನ ಬೇಕಾದಾಗಲೆಲ್ಲ ನನ್ನ ನೆನಪಿಗೆ ಬರುವುದು ಜಗಜ್ಯೋತಿ ಬಸವಣ್ಣನವರ ಒಂದು ವಚನ. ಲೋಕದ ಡೊಂಕ ನೀವೇಕೆ ತಿದ್ದುವಿರಯ್ಯ ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ. ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ, ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ ಕೂಡಲ ಸಂಗಮದೇವಾ... ನಿಜ. ಸಮಾಜದಲ್ಲಿ ಪ್ರತಿಯೊಬ್ಬರೂ ತಮ್ಮನ್ನು ತಾವೇ ತಿದ್ದಿಕೊಳ್ಳುತ್ತಾ ಹೋದರೆ, ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಅದಕ್ಕಿಂತ ಸರಳ ಉಪಾಯ ಯಾವುದಿದೆ? ನಮ್ಮ ನಮ್ಮ ಮನಸ್ಸನ್ನು ಆರೋಗ್ಯವಾಗಿ, ಅಂದರೆ ಒಳ್ಳೆಯ ಆಲೋಚನೆಗಳು ಇರುವಂತೆ ನೋಡಿಕೊಂಡರೆ, ತಾನಾಗಿಯೇ ಎಲ್ಲವೂ, ಎಲ್ಲರೂ ಸನ್ಮಾರ್ಗದಲ್ಲಿ ನಡೆದಂತೆ ಅಲ್ಲವೇ ಸಹಿಷ್ಣುತೆ, ಪರೋಪಕಾರ, ಕರುಣೆ ಪ್ರಾಣಿದಯೆ ಇಂಥವುಗಳನ್ನು ನಮ್ಮ ಮುಂದಿನ ಪೀಳಿಗೆಯಲ್ಲಿ ಯಾದರೂ ಕಾಣುವಂತಾಗಲಿ ಎಂದು ಹಾರೈಸೋಣ, ಅದರ ದಿಸೆಯಲ್ಲಿ ಒಂದು ಹೆಜ್ಜೆಯನ್ನಾದರೂ ಇಡೋಣ.

ಯೋಗ ಸಾಧಕರಿಗೆ ಯೋಗರತ್ನ, ಯೋಗಾಚಾರ್ಯ ಪ್ರಶಸ್ತಿ ಪ್ರದಾನ



ಮೈಸೂರಿನ ಪರಮಹಂಸ ಯೋಗ ಮಹಾವಿದ್ಯಾಲಯದಲ್ಲಿ ಸಾಧಕರಿಗೆ ಯೋಗರತ್ನ ಹಾಗೂ ಯೋಗಾಚಾರ್ಯ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು,ಮಾ.1(ಎಸ್‌ಪಿಎನ್)– ಮೈಸೂರಿನ ರಾಮಕೃಷ್ಣನಗರದ ಪರಮಹಂಸ ಯೋಗ ಮಹಾವಿದ್ಯಾಲಯದಲ್ಲಿ ಶನಿವಾರ ಶ್ರೀ ರಾಮಕೃಷ್ಣ ಪರಮಹಂಸರ 190ನೇ ಜಯಂತಿ ಅಂಗವಾಗಿ ಇಬ್ಬರಿಗೆ ಯೋಗ ರತ್ನ ಹಾಗೂ ಆರು ಮಂದಿಗೆ ಯೋಗಾಚಾರ್ಯ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಯೋಗಪಟುಗಳಾದ ರಾಣಿ ಸ್ವಾಮಿಗೌಡ, ಎಸ್. ಕಾವ್ಯಾರಿಗೆ 'ಯೋಗ ರತ್ನ', ಬಿ.ಜಿ. ವಿಜಯಕುಮಾರ್, ಎಸ್.ಕಾವ್ಯಾ, ಆನಂದ್ ಬಾಳು ಶಿರೋಳ್, ಎನ್.ಆರ್. ರೂಪಶ್ರೀ, ಎಂ.ಡಿ.ಸ್ವಪ್ನಾ, ವಿ.ಹರಿಪ್ರಸಾದ್ ಅವರಿಗೆ ಯೋಗಾಚಾರ್ಯ ಪ್ರಶಸ್ತಿಯನ್ನು ಹಿರಿಯ ಪತ್ರಕರ್ತರಾದ ಅಂಶಿ ಪ್ರಸನ್ನಕುಮಾರ್ ಪ್ರದಾನ ಮಾಡಿ ಮಾತನಾಡಿದ ಅವರು, ಯೋಗ ಮೈಸೂರಿನಲ್ಲಿ ಹುಟ್ಟಿ ಜಗತ್ತಿನಾದ್ಯಂತ ಪ್ರಸಿದ್ಧಿ ಪಡೆಯಿತು. ಇದಕ್ಕೆ ಅನೇಕರ ಶ್ರಮವಿದೆ ಎಂದರು.

ಪ್ರಶಸ್ತಿ ಪುರಸ್ಕೃತರ ಪರವಾಗಿ ರಾಣಿ ಸ್ವಾಮಿಗೌಡ ಮಾತನಾಡಿ, ಯೋಗದಿಂದ ಪಾರ್ಶವಾಯು ಕಾಯಿಲೆಯನ್ನು ಗುಣಪಡಿಸುವ ಕುರಿತು ಹಲವಾರು ನಿದರ್ಶನಗಳಿವೆ ಎಂದರೆ, ಗರ್ಭಿಣಿಯರು ಕೂಡ ಯೋಗ ಕಲಿಯಬಹುದು. ಇದರಿಂದ ಸಾಕಷ್ಟು ಅನುಕೂಲತೆಗಳಿವೆ ಎಂದು ಆರ್. ಕಾವ್ಯಾ ಅಭಿಪ್ರಾಯಪಟ್ಟರು.

ಪರಮಹಂಸ ಯೋಗ ಮಹಾವಿದ್ಯಾಲಯದ ಅಧ್ಯಕ್ಷ ಶಿವಪ್ರಕಾಶ್ ಮಾತನಾಡಿ, ಇದುವರೆಗೆ 13 ತಂಡಗಳಿಗೆ ಅಂತಾರಾಷ್ಟ್ರೀಯ ಯೋಗ ಶಿಕ್ಷಕ(ಐವೈಟಿ) ತರಬೇತಿ ನೀಡಲಾಗಿದೆ. ಇಲ್ಲಿ ತರಬೇತಿ ಪಡೆದವರು ದೇಶ–ವಿದೇಶಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅಷ್ಟಾಂಗ ಯೋಗ, ಪವರ್ ಯೋಗ, ಗರ್ಭಿಣಿಯರಿಗೆ ಯೋಗ, ಪ್ರಾಣಾಯಾಮ, ಧ್ಯಾನ, ವಿನ್ಯಾಸ ಯೋಗ, ಯೋಗ ಥೆರಪಿ, ಫ್ಯಾಷಿಯಲ್ ಯೋಗ, ಹಠ ಯೋಗ, ಮುದ್ರಾ ಯೋಗ, ಆಯುರ್ವೇದ, ಒತ್ತಡ ಮತ್ತು ತೂಕ ನಿರ್ವಹಣೆ ಅಂತರ್ ದೃಷ್ಟಿ ವಿದ್ಯೆ ಕಲಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಈ ವೇಳೆ ಪರಮಹಂಸ ಯೋಗ ಮಹಾವಿದ್ಯಾಲಯದ ಸಂಯೋಜಕಿ ಆರ್. ಭಾವನಾ, ನೇಚರ್ ಹೀಲಿಂಗ್ ಮತ್ತು ಕಲರ್ ಥೆರಪಿ ಚಿಕಿತ್ಸಕಿ ಗಾಯಿತ್ರಿ ಅರುಣ್, ಮೈಸೂರು ಯೋಗ ಒಕ್ಕೂಟದ ಉಪಾಧ್ಯಕ್ಷ ಎನ್. ಪಶುಪತಿ, ರಾಮಚಂದ್ರನಾಯಕ್ ಉಪಸ್ಥಿತರಿದ್ದರು. ಎಸ್, ಕಾವ್ಯಾ ನಿರೂಪಿಸಿದರು. ಆನಂದ್ ಶಿರೋಳ್ ಸ್ವಾಗತಿಸಿದರು. ಸ್ವಪ್ನಾ ಪ್ರಾರ್ಥಿಸಿದರು. ಪುಟಾಣಿ ಪ್ರಾಧ್ಯಾ ಅಂತರ್‌ದೃಷ್ಟಿ ವಿದ್ಯೆ ಪ್ರದರ್ಶಿಸಿದರು.

ಮನಸ್ಸು ಬದಲಿಸಿದರೆ ಭವಿಷ್ಯ ಬದಲಾಗುತ್ತದೆ



ಸಂತ ಜೋಸೆಫರ ಮಹಿಳಾ ಕಾಲೇಜಿನಲ್ಲಿ ಜೋ–ಕಾನ್‌ಕ್ಲೇವ್‌ನಲ್ಲಿ ಎಂಡಿಇಎಸ್ ತರಬೇತಿ ಮತ್ತು ಅಭಿವೃದ್ಧಿ ವಿಭಾಗದ ಸಿಇಒ ಸೆಬಿ ಮಾವೇಲಿ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಪ್ರಾಂಶುಪಾಲೆ ಡಾ.ಪೃಥ್ವಿ ಎಸ್.ಶಿರಹಟ್ಟಿ ಭಾಗವಹಿಸಿದ್ದರು.

ಮೈಸೂರು, ಮಾ.1–ಮನಸ್ಸು ಬದಲಿಸಿದರೆ ಭವಿಷ್ಯ ಬದಲಾಗುತ್ತದೆ ಎಂದು ಎಂಡಿಇಎಸ್ ತರಬೇತಿ ಮತ್ತು ಅಭಿವೃದ್ಧಿ ವಿಭಾಗದ ಮುಖ್ಯಕಾರ್ಯನಿರ್ವಾಹಣಾಧಿಕಾರಿ ಸೆಬೆ ಮಾವೇಲಿ ಹೇಳಿದರು.

ರಮ್ಮನಹಳ್ಳಿಯಲ್ಲಿರುವ ಸಂತ ಜೋಸೆಫರ ಮಹಿಳಾ ಕಾಲೇಜಿನಲ್ಲಿ ಏರ್ಪಡಿಸಿದ್ದ ಜೋ– ಕಾನ್‌ಕ್ಲೇವ್ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪ್ರತಿಯೊಬ್ಬರೂ ಗುರಿ ಇಟ್ಟುಕೊಂಡು ಸಾಧನೆಗೆ ಕಠಿಣ ಶ್ರಮಪಡಬೇಕು ಎಂದು ಕರೆ ನೀಡಿದರು.

ಜೋ–ಕಾನ್‌ಕ್ಲೇವ್ ಉದ್ಘಾಟಿಸಿದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಇಲ್ಲಿ ಪಠ್ಯಕ್ಕೆ ಸಂಬಂಧಿಸಿದಂತೆ ಸ್ಪರ್ಧೆಗಳನ್ನು ಏರ್ಪಡಿಸಿರುವುದು ಉತ್ತಮವಾದುದು. ಇದರಿಂದ ವಿಷಯದಲ್ಲಿ ಹೆಚ್ಚಿನ ಪರಿಣತಿ ಪಡೆಯಲು ಸಾಧ್ಯವಾಗುತ್ತದೆ ಎಂದರು.

ಪ್ರಾಂಶುಪಾಲೆ ಡಾ.ಪೃಥ್ವಿ ಶಿರಹಟ್ಟಿ ಇದ್ದರು. ಮಾನ್ಯ ಮತ್ತು ತಂಡವದರು ಪ್ರಾರ್ಥಿಸಿದರು. ಕಂಪ್ಯೂಟರ್‌ಸೈನ್ಸ್ ವಿಭಾಗದ ಮುಖ್ಯಸ್ಥೆ ಅವಂತಿ ಸ್ವಾಗತಿಸಿದರು. ಜೋ–ಕಾನ್‌ಕ್ಲೇವ್ ಕಾಲೇಜು ಉತ್ಸವ ಕುರಿತ ವಾಣಿಜ್ಯ ವಿಭಾಗದ ಸಹಾಯಕ ಪ್ರಾಧ್ಯಾಪಕಿ ರಚನಾ ಪ್ರದೀಪ್ ವಿವರಿಸಿದರು. ವಾಣಿಜ್ಯ ವಿಭಾಗದ ಪುಷ್ಪಾ ವಂದಿಸಿದರು. ಮಹೇಶ್ ನಿರೂಪಿಸಿದರು.

ಅದ್ದೂರಿ ಹಂಪಿ ಉತ್ಸವಕ್ಕೆ ಚಾಲನೆ; ಮೊದಲನೇ ದಿನ 1.5 ಲಕ್ಷ ಮಂದಿ ಭಾಗಿ



ಹಂಪಿ ಉತ್ಸವಕ್ಕೆ ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್ ಚಾಲನೆ ನೀಡಿದರು. ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, ಚಿತ್ರ ನಟ ರಮೇಶ್, ನಟಿಯರಾದ ಪ್ರೇಮಾ, ಪೂಜಾ ಗಾಂಧಿ ಇತರರಿದ್ದಾರೆ.



ಹಂಪಿ: ವಿಜಯನಗರದ ಗತವೈಭವ ಸಾರುವ ಮೂರು ದಿನಗಳ ಹಂಪಿ ಉತ್ಸವಕ್ಕೆ ಕನ್ನಡ ಮತ್ತು ಸಾಂಸ್ಕೃತಿಕ ಸಚಿವ ಶಿವರಾಜ್ ತಂಗಡಗಿ ಅವರ ಸಮ್ಮುಖದಲ್ಲಿ ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್ ವಿಧ್ಯುಕ್ತ ಚಾಲನೆ ನೀಡಿದರು.

ಹಂಪಿ ಉತ್ಸವದ ಉದ್ಘಾಟನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬರಬೇಕಿತ್ತು. ಆದರೆ ಮಂಡಿನೋವಿಂದ ಬಳಲುತ್ತಿರುವ ಅವರು ಬಾರದ ಕಾರಣ ಜಮೀರ್ ಅವರೇ ಉತ್ಸವಕ್ಕೆ ಚಾಲನೆ ನೀಡಿದರು. ಉತ್ಸವದ ಉದ್ಘಾಟನಾ ದಿನದಂದು ಸುಮಾರು 1.5 ಲಕ್ಷ ಮಂದಿ ಭಾಗಿಯಾಗಿದ್ದರು.

ಉತ್ಸವದಲ್ಲಿ ಹೂವು ಮತ್ತು ಮೀನು ಪ್ರದರ್ಶನಗಳು ಪ್ರವಾಸಿಗರನ್ನು ಹೆಚ್ಚು ಆಕರ್ಷಿಸಿದವು. ಹಂಪಿ ಬೈ ಸ್ಕೈ ಹೆಲಿಕಾಪ್ಟರ್ ಸೇವೆಯು ಜನರ ಕಣ್ಮನ ಸೆಳೆಯಿತು. ಅಧಿಕಾರಿಗಳು ರೂ 3,999 ದರದೊಂದಿಗೆ ಹಂಪಿ ಸ್ಮಾರಕಗಳನ್ನು ಹೆಲಿಕಾಪ್ಟರ್‌ಗಳ ಮೂಲಕ ನೋಡಲು ಅವಕಾಶ ಮಾಡಿಕೊಟ್ಟರು.

ಇದಲ್ಲದೆ, ಎತ್ತುಗಳು ಹಾಗೂ ಶ್ವಾನಗಳ ಪ್ರದರ್ಶನ ಕೂಡ ಪ್ರವಾಸಿಗರ ಗಮನ ಸೆಳೆಯಿತು. ಉತ್ಸವಕ್ಕೆ ಜಿಲ್ಲಾಡಳಿತ ಮಂಡಳಿ ಉತ್ತಮ ವ್ಯವಸ್ಥೆಗಳನ್ನು ಮಾಡಿದ್ದು, ಇದರಿಂದ ತಾಪಮಾನ 38 ಡಿಗ್ರಿ ಇದ್ದರೂ ಉತ್ಸವದಲ್ಲಿ ಪಾಲ್ಗೊಳ್ಳುವ ಜನರ ಸಂಖ್ಯೆ ಮಾತ್ರ ಕಡಿಮೆಯಾಗಿರಲಿಲ್ಲ. ಜಿಲ್ಲಾಡಳಿತ ಮಂಡಳಿಯು 50ಕ್ಕೂ ಹೆಚ್ಚು ಸ್ಥಳಗಳಲ್ಲಿ ಉಚಿತ ಕುಡಿಯುವ ನೀರು, 10 ಸ್ಥಳಗಳಲ್ಲಿ ವೈದ್ಯಕೀಯ ಶಿಬಿರಗಳು ಹಾಗೂ ಬಿಸಿಲ ಝಳ ಕಡಿಮೆ ಮಾಡಲು ನೀರು ಸಿಂಪಡಿಸುವ ಯಂತ್ರಗಳನ್ನು ಅಳವಡಿಸಿದ್ದರು. ಇನ್ನು ಆಹಾರ ಮತ್ತು ಪುಸ್ತಕ ಮಳಿಗೆಗಳು ಮತ್ತು ಜಲಕ್ರೀಡೆ ಚಟುವಟಿಕೆಗಳೂ ಜನರ ಕಣ್ಮನ ಸೆಳೆಯಿತು. ಜನರ ಅನುಕೂಲಕ್ಕಾಗಿ ಕಂಪ್ಲಿ ಮತ್ತು ಹೊಸಪೇಟೆಯಿಂದ ಉಚಿತ ಬಸ್ ವ್ಯವಸ್ಥೆ ಮಾಡಲಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ ಭಾನುವಾರ 2 ಮಾರ್ಚ್ 2025

ಹಾಸನ ಮಿತ್ರ

ಚನ್ನರಾಯಪಟ್ಟಣ: 41.59 ಲಕ್ಷ ಉಳಿತಾಯ ಬಜೆಟ್ ಮಂಡನೆ



ಪುರಸಭೆಯಲ್ಲಿ ಅಧ್ಯಕ್ಷ ಸಿ.ಎನ್.ಮೋಹನ್ ಅವರು 2025–26ನೇ ಸಾಲಿನ 41.59 ಲಕ್ಷದ ಉಳಿತಾಯದ ಬಜೆಟ್ ಅನ್ನು ಶನಿವಾರ ಮಂಡಿಸಿದರು.

ಚನ್ನರಾಯಪಟ್ಟಣ: ಇಲ್ಲಿನ ಪುರಸಭೆಯಲ್ಲಿ ಅಧ್ಯಕ್ಷ ಸಿ.ಎನ್. ಮೋಹನ್ ಅವರು 2025–26ನೇ ಸಾಲಿಗೆ 41.59 ಲಕ್ಷದ ಉಳಿತಾಯದ ಬಜೆಟ್ ಮಂಡಿಸಿದರು.

2024–25ನೇ ಸಾಲಿನ ಪ್ರಾರಂಭದ ಶಿಲ್ಕು 52.59 ಲಕ್ಷ ಇತ್ತು. ಪ್ರಸಕ್ತ ಸಾಲಿನಲ್ಲಿ ಎಸ್‌ಎಫ್‌ಸಿ ವೇತನ ಅನುದಾನ 5.94 ಕೋಟಿ, ಎಸ್‌ಎಫ್‌ಸಿ ವಿದ್ಯುತ್ ಶುಲ್ಕ ಪಾವತಿಗಾಗಿ 5.80 ಕೋಟಿ, ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಬಿಡುಗಡೆಯಾಗುವ ಅನುದಾನ 2 ಕೋಟಿ, ಪೌರಕಾರ್ಮಿಕರ ಗೃಹ ಭಾಗ್ಯ ಯೋಜನೆಯ ಅನುದಾನ 1.50 ಕೋಟಿ, ಪುರಸಭೆಯ ಆಸ್ತಿ ತೆರಿಗೆ 6.70 ಕೋಟಿ, ಮಳಿಗೆಗಳ ಬಾಡಿಗೆ, ದಂಡದಿಂದ 1.51 ಕೋಟಿ, ಹೊಸ ವಾಣಿಜ್ಯ ಸಂಕೀರ್ಣ ನಿರ್ಮಿಸಲು ಕೆಯುಐಡಿಎಫ್‌ಸಿಯಿಂದ 5 ಕೋಟಿ ಸಾಲ, ಆರೋಗ್ಯ ತೆರಿಗೆ, ಭಿಕ್ಷುಕರ ಕರ, ಗ್ರಂಥಾಲಯದ ಕರ, ರಸ್ತೆ ಸಾರಿಗೆ ಸಂಸ್ಥೆಯ ಕರ 1.75 ಕೋಟಿ ಸೇರಿ ಈ ವರ್ಷದ ಅಂತ್ಯಕ್ಕೆ 57.39 ಕೋಟಿ ಆದಾಯ ನಿರೀಕ್ಷಿಸಲಾಗಿದೆ ಎಂದು ತಿಳಿಸಿದರು.

'ರಾಜಸ್ವ ಖಾತೆ ವೆಚ್ಚ 23.59 ಕೋಟಿ, ನಿರೀಕ್ಷಿತ ಬಂಡವಾಳ ಖಾತೆ ವೆಚ್ಚ 15.95 ಕೋಟಿ ಹಾಗೂ ನಿರೀಕ್ಷಿತ ಅಸಾಮಾನ್ಯ ಖಾತೆ ವೆಚ್ಚ 17.44 ಕೋಟಿ. ಒಟ್ಟು 56.98 ಕೋಟಿ ವೆಚ್ಚವಾಗಲಿದ್ದು, 41.59 ಲಕ್ಷ ಉಳಿತಾಯದ ಬಜೆಟ್ ಇದಾಗಿದೆ' ಎಂದು ಹೇಳಿದರು.

ಸಭೆಯ ಆರಂಭದಲ್ಲಿ ಕಾಂಗ್ರೆಸ್ ಸದಸ್ಯ ಸಿ.ಎಸ್.ಪ್ರಕಾಶ್ ಮಾತನಾಡಿ, 'ಈ ಹಿಂದಿನ ಅಧ್ಯಕ್ಷರು ಸಮರ್ಪಕವಾಗಿ ಆದಾಯದ ಕ್ರೋಢೀಕರಣಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ. ಪಟ್ಟಣದಲ್ಲಿ ಹಳೆಯ ವಾಣಿಜ್ಯ ಸಂಕೀರ್ಣ ತೆರವುಗೊಳಿಸಿ 8 ವರ್ಷವಾಯಿತು. ಅಲ್ಲಿ ಇದುವರೆಗೆ ಹೊಸದಾಗಿ ವಾಣಿಜ್ಯ ಸಂಕೀರ್ಣ ನಿರ್ಮಿಸಲು ಮುಂದಾಗಿಲ್ಲ. ಅದೇ ರೀತಿ ತರಕಾರಿ ಮಾರುಕಟ್ಟೆಯಲ್ಲಿ ಹೊಸ ಪ್ರಾಂಗಣ ನಿರ್ಮಿಸಲಾಗಿದೆ. ಉಳಿದ ಕಾಂಕ್ರೀಟ್ ಕೆಲಸದ ಕಾಮಗಾರಿಯನ್ನು ಪೂರ್ಣಗೊಳಿಸಿ ಇಷ್ಟರೊಳಗೆ ಉದ್ಘಾಟನೆ ಮಾಡಬೇಕಿತ್ತು ಎಂದರು.

ಶಾಸಕ ಸಿ.ಎನ್.ಬಾಲಕೃಷ್ಣ ಮಾತನಾಡಿ, 'ಆಯಾ ಕಾಲಘಟ್ಟದಲ್ಲಿ ಪುರಸಭಾ ಅಧ್ಯಕ್ಷರು ಒಳ್ಳೆಯ ಕೆಲಸ ಮಾಡಿದ್ದಾರೆ. ಪುರಸಭೆಗೆ ಸಂಪನ್ಮೂಲ ಕ್ರೋಢೀಕರಿಸಲಾಗಿದೆ. ತರಕಾರಿ ಮಾರುಕಟ್ಟೆ ಪ್ರಾಂಗಣದ ಉಳಿಕೆ ಕಾಮಗಾರಿ ಪೂರ್ಣಗೊಳಿಸಿ ಹರಾಜು ಮಾಡಲಾಗುವುದು. ಹೊಸದಾಗಿ ವಾಣಿಜ್ಯ ಸಂಕೀರ್ಣ ನಿರ್ಮಿಸಲು ಇನ್ನೊಂದು ತಿಂಗಳಲ್ಲಿ ಟೆಂಡರ್ ಕರೆದು ಕಾಮಗಾರಿ ಆರಂಭಿಸಲಾಗುವುದು ಎಂದರು.

ಪುರಸಭೆಯ ಆಸ್ತಿಗಳನ್ನು ಪಟ್ಟಿ ಮಾಡಬೇಕು. ಇ–ಖಾತೆಯನ್ನು ನಿರ್ವಹಣೆ ಮಾಡಿ, ಎಲ್ಲೆಲ್ಲಿ ಆಸ್ತಿ ಇದೆ ಎಂಬುದನ್ನು ಗುರುತಿಸಿ ತಂತಿಬೇಲಿ ಹಾಕಿಸಿ ಸಂರಕ್ಷಿಸಬೇಕಿದೆ ಎಂದು ಸದಸ್ಯ ಪ್ರಕಾಶ್ ಸಭೆಯ ಗಮನಕ್ಕೆ ತಂದರು.

ಪುರಸಭೆಯ ಉಪಾಧ್ಯಕ್ಷೆ ರಾಣಿ, ಸ್ಥಾಯಿಸಮಿತಿ ಅಧ್ಯಕ್ಷ ಸಿ.ಆರ್. ಸುರೇಶ್, ಮುಖ್ಯಾಧಿಕಾರಿ ಆರ್. ಯತೀಶ್‌ಕುಮಾರ್ ಭಾಗವಹಿಸಿದ್ದರು.

ಕನ್ನಡದ ಬಗ್ಗೆ ನಿರ್ಲಕ್ಷ್ಯ ಸಲ್ಲ: ಬಿ.ಆರ್.ಲಕ್ಷ್ಮಣರಾವ್



ಅರಕಲಗೂಡು: ಪ್ರಪಂಚವನ್ನು ಸ್ಪಷ್ಟವಾಗಿ ಗ್ರಹಿಸಲು ಮಾತೃಭಾಷೆಯಿಂದ ಮಾತ್ರ ಸಾಧ್ಯ. ಹಾಗಾಗಿ, ಕನ್ನಡದ ಬಗ್ಗೆ ನಿರ್ಲಕ್ಷ್ಯ ಸಲ್ಲ ಎಂದು ಕವಿ ಬಿ.ಆರ್.ಲಕ್ಷ್ಮಣರಾವ್ ತಿಳಿಸಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ನಡೆದ 2024–25ನೇ ಶೈಕ್ಷಣಿಕ ಸಾಲಿನ ಸಾಂಸ್ಕೃತಿಕ ವೇದಿಕೆ, ಕ್ರೀಡೆ, ಎನ್‌ಎಸ್‌ಎಸ್, ಸ್ಕೌಟ್ಸ್ ಮತ್ತು ಗೈಡ್ಸ್, ರೆಡ್‌ಕ್ರಾಸ್ ಚಟುವಟಿಕೆಗಳ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಆಂಗ್ಲರು ಇತರೆ ದೇಶಗಳನ್ನು ಕೊಳ್ಳೆ ಹೊಡೆದು ತಮ್ಮ ದೇಶವನ್ನು ಶ್ರೀಮಂತವಾಗಿಸಿಕೊಂಡಂತೆ ಅವರ ಭಾಷೆಯೂ ಇತರೆ ಭಾಷೆಗಳಿಂದ ಕಸಿದುಕೊಂಡ ಪರಿಣಾಮವಾಗಿ ಇಂದು ಆಂಗ್ಲ ಭಾಷೆ ವಿಶ್ವದ ಶ್ರೀಮಂತ ಭಾಷೆ ಎನಿಸಿ ಹೆಚ್ಚಿನ ಬಳಕೆಯಲ್ಲಿದೆ ಎಂದರು.

ಶಾಸಕ ಎ.ಮಂಜು ಮಾತನಾಡಿ, ದೇಶ ಹಾಗೂ ಬದುಕು ಬದಲಾಗಬೇಕಾದರೆ ವಿದ್ಯೆಯಿಂದ ಮಾತ್ರ ಸಾಧ್ಯ. ವಿದ್ಯೆ ಸಾಧಕನ ಸ್ವತ್ತು. ವಿದ್ಯಾರ್ಥಿ ಜೀವನದಲ್ಲಿ ಕಲಿತ ಶಿಕ್ಷಣ ನಿಮ್ಮ ಭವಿಷ್ಯದ ಬದುಕನ್ನು ರೂಪಿಸುತ್ತದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಎಂ.ಮಹೇಶ್, ಮುಂದಿನ ಶೈಕ್ಷಣಿಕ ಸಾಲಿನಿಂದ ಕಾಲೇಜಿನಲ್ಲಿ ವಿಜ್ಞಾನ ವಿಭಾಗ ತೆರೆಯಲು ಕ್ರಮ ಕೈಗೊಂಡಿದ್ದು, ಮೊದಲು ದಾಖಲಾಗುವ 20 ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶ ನೀಡಲು ದಾನಿಗಳ ನೆರವಿನಿಂದ ಕ್ರಮ ಕೈಗೊಳ್ಳಲಾಗಿದೆ ಎಂದರು.

ಹಾಸನದ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಎನ್.ಶಂಕರಪ್ಪ, ಪಪಂ ಅಧ್ಯಕ್ಷ ಪ್ರದೀಪ್‌ಕುಮಾರ್, ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಎ.ಆರ್. ಬಾಲಾಜಿ ಮಾತನಾಡಿದರು.

ಸದಸ್ಯರಾದ ರವಿಕುಮಾರ್, ನಿರ್ಮಲಕುಮಾರಿ, ಎ.ಆರ್.ಸುಬ್ಬರಾವ್, ಕನ್ನಡ ವಿಭಾಗದ ಮುಖ್ಯಸ್ಥೆ ಶಶಿಕಲಾ, ವಿವಿಧ ವೇದಿಕೆಗಳ ಸಂಚಾಲಕರಾದ ಜೆ.ಸಿದ್ದರಾಜು, ಎನ್.ಎಚ್. ಶರತ್, ಎಸ್.ಅಶ್ವಿನಿ, ಪ್ರಾಧ್ಯಾಪಕ ಮಂಜುನಾಥ್, ಪಡುವಲ ಹಿಪ್ಪೆ ಸರ್ಕಾರಿ ಕಾಲೇಜಿನ ಉಪನ್ಯಾಸಕ ಶಿವಕುಮಾರ್ ಉಪಸ್ಥಿತರಿದ್ದರು. ವಿದ್ಯಾರ್ಥಿಗಳಿಂದ ವಿವಿಧ ಮನರಂಜನಾ ಕಾರ್ಯಕ್ರಮಗಳು ನಡೆದವು.

ಪಿಯು ಪರೀಕ್ಷೆ: ಹೊಳೆನರಸೀಪುರ ತಾಲೂಕಿನಲ್ಲಿ 21 ವಿದ್ಯಾರ್ಥಿಗಳು ಗೈರು

ಹೊಳೆನರಸೀಪುರ: ರಾಜ್ಯದಾದ್ಯಂತ ದ್ವಿತೀಯ ಪಿಯುಸಿ ಪರೀಕ್ಷೆ ಶನಿವಾರದಿಂದ ಪ್ರಾರಂಭವಾಯಿತು. ತಾಲೂಕಿನಲ್ಲಿ ಮೂರು ಪರೀಕ್ಷಾ ಕೇಂದ್ರಗಳನ್ನು ತೆರೆಯಲಾಗಿದೆ. 1,383 ವಿದ್ಯಾರ್ಥಿಗಳಲ್ಲಿ 21 ವಿದ್ಯಾರ್ಥಿಗಳು ಗೈರಾಗಿದ್ದಾರೆ. ಎಂದು ಸರ್ಕಾರಿ ಬಾಲಕಿಯರ ಪಪೂ ಕಾಲೇಜು ಪ್ರಾಂಶುಪಾಲ ದೇವರಾಜು ತಿಳಿಸಿದರು.

ಎಸಿಪಿಯಾಗಿ ಬಡ್ತಿ ಹೊಂದಿದ ಇನ್‌ಸ್ಪೆಕ್ಟರ್‌ಗೆ ಅಭಿನಂದನೆ



ಎಸಿಪಿಯಾಗಿ ಬಡ್ತಿ ಹೊಂದಿದ ಹೆಬ್ಬಾಳ್ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಎ.ಮಲ್ಲೇಶ್ ಅವರನ್ನು ಟೆನ್ನಿಸ್ ಗೋಪಿ, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ ಅಭಿನಂದಿಸಿದರು. ಜೆ.ವೆಂಕಟೇಶ್, ವಿನೋದ್ ನಾಗವಾಲ, ಎಂ.ರವಿಕುಮಾರ್, ಸ್ವಾಮಿನಾಯಕ, ಶಿವನಂಜಯ್ಯ ಉಪಸ್ಥಿತರಿದ್ದರು.

ಸೆಸ್ಕ್ ಪ್ರಭಾರ ವ್ಯವಸ್ಥಾಪಕ ನಿರ್ದೇಶಕರಾಗಿ ಮುನಿಗೋಪಾಲರಾಜು ನಿಯೋಜನೆ

● ಸಿಬ್ಬಂದಿ ವರ್ಗದಿಂದ ಅಭಿನಂದನೆ ● ತ್ವರಿತ ರೀತಿ ಕಾರ್ಯ ನಿರ್ವಹಿಸಲು ಸಿಬ್ಬಂದಿಗೆ ಕಿವಿಮಾತು



ಮೈಸೂರಿನ ಸೆಸ್ಕ್ ಪ್ರಧಾನ ಕಚೇರಿಯಲ್ಲಿ ಪ್ರಭಾರ ವ್ಯವಸ್ಥಾಪಕ ನಿರ್ದೇಶಕ (ಎಂಡಿ) ರಾಗಿ ಅಧಿಕಾರವಹಿಸಿಕೊಂಡ ಮುನಿಗೋಪಾಲರಾಜು ಅವರನ್ನು ಸಿಬ್ಬಂದಿ ಅಭಿನಂದಿಸಿದರು.

ಮೈಸೂರು,ಮಾ.1(ಎಸ್‌ಪಿಎನ್)–ಪ್ರತಿಯೊಬ್ಬರು ತಮ್ಮ ಜವಾಬ್ದಾರಿಯನ್ನು ಅರಿತು ಸಮರ್ಪಕವಾಗಿ ಕೆಲಸ ಮಾಡುವ ಮೂಲಕ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್)ದಿಂದ ಉತ್ತಮ ಸೇವೆಯನ್ನು ಗ್ರಾಹಕರಿಗೆ ನೀಡಲು ಶ್ರಮಿಸೋಣ ಎಂದು ಸೆಸ್ಕ್‌ನ ಪ್ರಭಾರ ವ್ಯವಸ್ಥಾಪಕ ನಿರ್ದೇಶಕರಾದ ಕೆ.ಎಂ. ಮುನಿಗೋಪಾಲ್ ರಾಜು ತಮ್ಮ ಸಿಬ್ಬಂದಿ ವರ್ಗಕ್ಕೆ ಸಲಹೆ ನೀಡಿದರು.

ಮೈಸೂರಿನ ವಿಜಯನಗರ 2ನೇ ಹಂತದ ನಿಗಮದ ಪ್ರಧಾನ ಕಚೇರಿಯಲ್ಲಿ ಶನಿವಾರ ನಡೆದ ಸಭೆಯಲ್ಲಿ ಪ್ರಭಾರ ವ್ಯವಸ್ಥಾಪಕರಾಗಿ ಅಧಿಕಾರ ಸ್ವೀಕರಿಸಿದ ನಂತರ ಮಾತನಾಡಿದ ಅವರು, ನಿಗಮದಲ್ಲಿ ಕೆಲಸ ಮಾಡುತ್ತಿರುವ ಎಲ್ಲರೂ ತಂಡವಾಗಿ ಕೆಲಸ ಮಾಡಬೇಕಿದ್ದು, ಆ ಮೂಲಕ ನಿಗಮದ ಎಲ್ಲ ಕೆಲಸಗಳು ವೇಗವಾಗಿ ಪೂರ್ಣಗೊಳಿಸಲು ಆದ್ಯತೆ ಮೇರೆಗೆ ಕೆಲಸ ಮಾಡಬೇಕಿದೆ ಎಂದು ಹೇಳಿದರು.

ನಿಗಮದ ಏಳಿಗೆಯ ಜೊತೆಗೆ, ಸಿಬ್ಬಂದಿಯ ಕ್ಷೇಮಾಭಿವೃದ್ಧಿಗೆ ಸಾಕಷ್ಟು ಯೋಜನೆಗಳನ್ನು ರೂಪಿಸಲಾಗಿದೆ. ಹೀಗಾಗಿ ಯಾವುದೇ ಸಮಸ್ಯೆ ಅಥವಾ ತೊಂದರೆಗಳಿದ್ದಲ್ಲಿ ಅದನ್ನು ನೇರವಾಗಿ ನನ್ನ ಅಥವಾ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸುವಂತೆ ತಮ್ಮ ಸಹೋದ್ಯೋಗಿಗಳಿಗೆ ಸೂಚಿಸಿದರಲ್ಲದೆ, ನಿಗಮವೂ ಈಗಾಗಲೇ ತಾಂತ್ರಿಕ ನಿರ್ವಹಣೆಯಲ್ಲಿ ಸುಧಾರಣೆಯನ್ನು ಕಂಡಿದ್ದು, ಆರ್ಥಿಕ ಮತ್ತು ಆಡಳಿತ ವಿಭಾಗದಲ್ಲಿ ಮತ್ತಷ್ಟು ಸುಧಾರಣೆ ಆಗಬೇಕಿದೆ ಎಂದರು.

ಈ ಸಂದರ್ಭದಲ್ಲಿ ಸೆಸ್ಕ್ ಹಾಗೂ ಕೆಪಿಟಿಸಿಎಲ್‌ನ ಹಿರಿಯ ಅಧಿಕಾರಿಗಳು, ಸಿಬ್ಬಂದಿ ಸೇರಿದಂತೆ ಇತರೆ ಸಿಬ್ಬಂದಿ ಪ್ರಭಾರ ವ್ಯವಸ್ಥಾಪಕ ನಿರ್ದೇಶಕ ಮುನಿಗೋಪಾಲರಾಜು ಅವರಿಗೆ ಶುಭಕೋರಿದರು. ಈ ಹಿಂದೆ ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಜಿ.ಶೀಲಾ ಅವರು ಫೆ.28ರಂದು ಸೇವೆಯಿಂದ ನಿವೃತ್ತಿ ಹೊಂದಿದ ಹಿನ್ನೆಲೆಯಲ್ಲಿ ನಿಗಮದ ತಾಂತ್ರಿಕ ನಿರ್ದೇಶಕರಾಗಿರುವ ಕೆ.ಎಂ.ಮುನಿಗೋಪಾಲರಾಜು ಅವರು ಪ್ರಭಾರ ವ್ಯವಸ್ಥಾಪಕ ನಿರ್ದೇಶಕರಾಗಿ ನಿಯೋಜನೆಗೊಂಡಿದ್ದಾರೆ.

ಅರಣ್ಯ ಭೂಮಿ ಒತ್ತುವರಿ ಆರೋಪ: ಸಚಿವ ಮಂಕಾಳು ವೈದ್ಯ ವಿರುದ್ಧ ರಾಜ್ಯಪಾಲರಿಗೆ ದೂರು

ಬೆಂಗಳೂರು: ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವ ಮಂಕಾಳು ಎಸ್. ವೈದ್ಯ ಅವರು ಅರಣ್ಯ ಭೂಮಿ ಒತ್ತುವರಿ ಮಾಡಿದ್ದಾರೆ ಎಂದು ಆರೋಪಿಸಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರಿಗೆ ದೂರು ನೀಡಲಾಗಿದೆ.

ಕಾರವಾರ ಜಿಲ್ಲೆಯ ಭಟ್ಕಳ ಪಟ್ಟಣದ ಆರ್‌ಟಿಐ ಕಾರ್ಯಕರ್ತರಾದ ಶಂಕರ್ ನಾಯಕ್, ನಾಗೇಂದ್ರ ನಾಯಕ್ ಮತ್ತು ನಾಗೇಶ್ ನಾಯಕ್ ಅವರು ಸಚಿವ ಮಂಕಾಳು ವೈದ್ಯ ವಿರುದ್ಧ ರಾಜ್ಯಪಾಲರಿಗೆ ದೂರು ನೀಡಿದ್ದಾರೆ. ಈ ಬಗ್ಗೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೂ ದೂರು ಸಲ್ಲಿಸಲಾಗಿದೆ. ಅಲ್ಲದೆ ಹೆಚ್ಚುವರಿಯಾಗಿ, ಕ್ರಮ ಕೈಗೊಳ್ಳುವಂತೆ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಲಾಗಿದೆ ಎಂದು ತಿಳಿಸಿದ್ದಾರೆ.

ದೂರಿನ ಪ್ರಕಾರ, ಸಚಿವರು ಭಟ್ಕಳ ತಾಲೂಕಿನ ಬೈಲೂರಿನ ಸರ್ಕಾರಿ ಅರಣ್ಯ ಜಾಗದ ಸರ್ವೆ ನಂ– 600ರಲ್ಲಿ ಅಕ್ರಮವಾಗಿ ತಮ್ಮ ಬೀನಾ ವೈದ್ಯ ಶಿಕ್ಷಣ ಸಂಸ್ಥೆಗಾಗಿ ಅರಣ್ಯ ಭೂಮಿ ಒತ್ತುವರಿ ಮಾಡಿರುವುದಾಗಿ ಆರೋಪಿಸಲಾಗಿದೆ.

ಮೇ 18, 2024ರಂದು ಒತ್ತುವರಿ ಮಾಡಲಾಗಿದೆ ಎಂದು ದೂರಿನಲ್ಲಿ ಹೇಳಲಾಗಿದೆ. ದೂರು ದಾಖಲಾಗಿದ್ದರೂ, ಅರಣ್ಯ ಅಧಿಕಾರಿಗಳು ಸಚಿವ ವೈದ್ಯ ಅವರ ಹೆಸರನ್ನು ಬಿಟ್ಟು ಇತರರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ ಎಂದು ಆರೋಪಿಸಲಾಗಿದೆ ಸಚಿವ ವೈದ್ಯ ಅವರು ತಮ್ಮ ರಾಜಕೀಯ ಪ್ರಭಾವ ಬಳಸಿ ಪ್ರಕರಣದಿಂದ ತಪ್ಪಿಸಿಕೊಳ್ಳುತ್ತಿದ್ದಾರೆ ಎಂದು ದೂರುದಾರರು ಆರೋಪಿಸಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಸುಭದ್ರವಾಗಿದೆ

ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ವಿಶ್ವಾಸ



ಮೈಸೂರು ಮಹಾನಗರಪಾಲಿಕೆ ಕಚೇರಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸುದ್ದಿಗಾರರೊಂದಿಗೆ ಮಾತನಾಡಿದರು.

ಮೈಸೂರು, ಮಾ.1(ಆರ್‌ಕೆ)– ರಾಜ್ಯದಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಸುಭದ್ರವಾಗಿದ್ದು, ಜನರಿಗೆ ಉತ್ತಮ ಆಡಳಿತ ನೀಡಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಇಂದಿಲ್ಲಿ ತಿಳಿಸಿದ್ದಾರೆ.

ಮೈಸೂರು ಮಹಾನಗರಪಾಲಿಕೆ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಅವರು, ರಾಜ್ಯದಲ್ಲಿ ಈ ಹಿಂದೆ ಮಹಾರಾಷ್ಟ್ರದಲ್ಲಿ ಏಕನಾಥ್ ಶಿಂಧೆ ಸರ್ಕಾರ ರಚನೆ ಮಾದರಿ ರಾಜ್ಯದಲ್ಲೂ ಸರ್ಕಾರ ರಚನೆಯಾಗಲಿದೆ ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಈ ಬಗೆಯ ಯಾವುದೇ ಅಂತೆ ಕಂತೆಗಳಿಗೆ ನಾನು ಉತ್ತರಿಸುವುದಿಲ್ಲ. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ಸರ್ಕಾರ ಸುಭದ್ರವಾಗಿದೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಇಶಾ ಫೌಂಡೇಷನ್ ಕಾರ್ಯಕ್ರಮಕ್ಕೆ ಹೋಗಿದ್ದರು. ಅದರ ಬಗ್ಗೆ ಈಗಾಗಲೇ ಅವರೇ ಸ್ಪಷ್ಟನೆ ನೀಡಿದ್ದಾರೆ. ಆದ್ದರಿಂದ ಈ ವಿಚಾರಕ್ಕೆ ಹೆಚ್ಚು ಮಹತ್ವ ನೀಡುವ ಅವಶ್ಯಕತೆ ಇಲ್ಲ ಎಂದರು.

ಸಚಿವ ರಾಜಣ್ಣ ಏನು ಹೇಳಿಕೆ ನೀಡಿದ್ದಾರೆಂದು ಗೊತ್ತಿಲ್ಲ. ಸಿದ್ದರಾಮಯ್ಯ–ಡಿ.ಕೆ.ಶಿವಕುಮಾರ್ ನಡುವೆ ಅಧಿಕಾರ ಹಂಚಿಕೆ ವಿಚಾರದಲ್ಲಿ ಯಾವ ಮಾತುಕತೆಯೂ ಸದ್ಯದ ಮಟ್ಟಿಗೆ ಆಗಿಲ್ಲ. ಅಧಿಕಾರವನ್ನು ಯಾರೂ ಯಾರಿಗೂ ಬರೆದುಕೊಟ್ಟಿಲ್ಲ. ಆದ್ದರಿಂದ ಸಿಎಂ ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ನಾನು ಪ್ರತಿಕ್ರಿಯೆ ನೀಡಲಾರೆ ಎಂದು ಡಾ.ಹೆಚ್.ಸಿ.ಮಹದೇವಪ್ಪ ನುಡಿದರು.

ಪರಿಶಿಷ್ಟ ಜಾತಿ ಮತ್ತು ಪಂಗಡದ ಅನುದಾನ ದುರ್ಬಳಕೆಯಾಗಿದೆ ಎಂದು ಆರೋಪಿಸಿ ಬಿಜೆಪಿಯವರು ನಡೆಸುತ್ತಿರುವ ಜನಾಂದೋಲನ ಕೇವಲ ರಾಜಕೀಯ ಉದ್ದೇಶವಾಗಿದ್ದು, ಎಸ್‌ಸಿ, ಎಸ್‌ಟಿ ಸಮುದಾಯಕ್ಕೆ ಸಿಗುವ ಸೌಲಭ್ಯ ಸಂಬಂಧ ಕಾಯ್ದೆ ಮಾಡಿರುವುದೇ ನಾವು. ಜನಸಂಖ್ಯೆಗನುಗುಣವಾಗಿ ಅನುದಾನ ನೀಡಲು ಕಾಯ್ದೆಯನ್ನು ಅನುಷ್ಠಾನಗೊಳಿಸಿದ್ದೇವೆ. ನಾವು ತಂದಿರುವ ಕಾಯ್ದೆಗಳು ಇಡೀ ದೇಶಕ್ಕೆ ಮಾದರಿಯಾಗಿವೆ ಎಂದ ಅವರು, ಈ ಬಗೆಯ ಆರೋಪಗಳನ್ನು ಬಿಟ್ಟು ಬಿಜೆಪಿಯವರು ಕೇಂದ್ರದಿಂದ ರಾಜ್ಯಕ್ಕೆ ಸಿಗಬಹುದಾದ ಅನುದಾನವನ್ನು ತರಲಿ ಎಂದರು.

ದೇಶದ ಇತರೆ ರಾಜ್ಯಗಳಲ್ಲಿ ಬಿಜೆಪಿ ಅಧಿಕಾರದಲ್ಲಿದೆ. ಅಲ್ಲಿನ ಎಸ್‌ಸಿ, ಎಸ್‌ಟಿ ಕಾಯ್ದೆ ಜಾರಿ ಮಾಡುವ ಬದ್ಧತೆಯನ್ನು ಬಿಜೆಪಿಯವರು ತೋರಲಿ. ಅದನ್ನು ಬಿಟ್ಟು ರಾಜಕೀಯ ಲಾಭಕ್ಕಾಗಿ ಮಾತನಾಡುವುದು ಸರಿಯಲ್ಲ ಎಂದರು.

ಮೈಸೂರಿನ ಶಿಥಿಲಗೊಂಡಿರುವ ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಮತ್ತು ದೇವರಾಜ ಮಾರುಕಟ್ಟೆ ಕಟ್ಟಡಗಳನ್ನು ಕೆಡವಿ ಮರು ನಿರ್ಮಾಣ ಮಾಡುವ ಸಂಬಂಧ ಟೈಮ್ ಬಾಂಡ್‌ನಲ್ಲಿ ಕೆಲಸ ಮಾಡುತ್ತೇವೆ. ಈಗಾಗಲೇ ಮಹಾರಾಣಿ ಕಾಲೇಜು ಕಟ್ಟಡ ಕೂಡ ಕುಸಿದಿದ್ದು, ಘಟನೆಯಲ್ಲಿ ದೊಡ್ಡ ಅನಾಹುತ ತಪ್ಪಿದೆ. ಕಾನೂನಿನ ಅಡೆತಡೆಗಳೆಲ್ಲವೂ ಮುಗಿದಿದ್ದು, ಆದಷ್ಟು ಬೇಗ ಈ ಕುರಿತಂತೆ ಸೂಕ್ತ ನಿರ್ಧಾರ ಕೈಗೊಳ್ಳುತ್ತೇವೆ ಎಂದು ಡಾ.ಮಹದೇವಪ್ಪ ನುಡಿದರು.

ಡಿ.ಕೆ.ಶಿವಕುಮಾರ್ ಬೆಂಗಳೂರು ಹೀರೋ ಆಗಬೇಕು...!

ಉದ್ಯಮಿ ಮೋಹನ್‌ದಾಸ್ ಪೈ ಅಚ್ಚರಿ ಹೇಳಿಕೆ



ಡಿಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ಉದ್ಯಮಿ ಮೋಹನ್‌ದಾಸ್ ಪೈ ಭೇಟಿ ಮಾಡಿದರು.

ಬೆಂಗಳೂರು: ಕಳೆದ ಎರಡು ವರ್ಷಗಳಿಂದ ಬೆಂಗಳೂರಿನಲ್ಲಿ ಯಾವುದೇ ಅಭಿವೃದ್ಧಿ ಆಗುತ್ತಿಲ್ಲ ಎಂದು ಇತ್ತೀಚೆಗೆ ರಾಜ್ಯ ಸರ್ಕಾರ ಹಾಗೂ ಬೆಂಗಳೂರು ಅಭಿವೃದ್ಧಿ ಸಚಿವರು ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಸಾಮಾಜಿಕ ಜಾಲತಾಣ ಎಕ್ಸ್ ಮೂಲಕ ತೀವ್ರ ವಾಗ್ದಾಳಿ ನಡೆಸಿದ್ದ ಉದ್ಯಮಿ ಮೋಹನ್ ದಾಸ್ ಪೈ, ಇದೀಗ ದಿಢೀರ್ ಉಲ್ಟಾ ಹೊಡೆದಿದ್ದು, ಡಿಕೆ ಶಿವಕುಮಾರ್ ಪರ ಅಚ್ಚರಿಯ ಮಾತುಗಳನ್ನಾಡಿದ್ದಾರೆ.

ಬೆಂಗಳೂರಿನ ಸದಾಶಿವನಗರ ನಿವಾಸದಲ್ಲಿ ಇಂದು ಡಿಕೆ ಶಿವಕುಮಾರ್ ಅವರನ್ನು ಭೇಟಿ ಮಾಡಿ ಸಮಾಲೋಚನೆ ನಡೆಸಿದ ಮಣಿಪಾಲ್ ಗ್ಲೋಬಲ್ ಎಜುಕೇಶನ್ ಸರ್ವಿಸಸ್ ಸಂಸ್ಥೆ ಮುಖ್ಯಸ್ಥ ಹಾಗೂ ಇನ್ಫೋಸಿಸ್ ಮಾಜಿ CFO ಟಿ.ವಿ.ಮೋಹನ್ ದಾಸ್ ಪೈ ಹಲವು ವಿಚಾರಗಳ ಬಗ್ಗೆ ಚರ್ಚೆ ನಡೆಸಿದ್ದಾರೆ.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಮೋಹನ್ ದಾಸ್ ಪೈ, ಡಿಕೆ ಶಿವಕುಮಾರ್ ಉತ್ತಮ ಸಚಿವರು, ಬೆಂಗಳೂರಿನ ಫುಟ್‌ಪಾತ್, ರಸ್ತೆ, ಮೆಟ್ರೋ ಅಭಿವೃದ್ಧಿ ಸೇರಿದಂತೆ ಅವರೊಂದಿಗೆ ಅನೇಕ ವಿಚಾರಗಳ ಬಗ್ಗೆ ಚರ್ಚೆ ನಡೆಸಿದ್ದೇನೆ. ಇನ್ನು 6 ತಿಂಗಳಲ್ಲಿ ಅಭಿವೃದ್ಧಿ ಮಾಡುತ್ತೇನೆ ಎಂದು ಡಿಕೆ ಶಿವಕುಮಾರ್ ಭರವಸೆ ನೀಡಿದ್ದಾರೆ. ಅವರು ಬೆಂಗಳೂರಿನ ಹೀರೋ ಆಗಬೇಕು ಎಂದರು.

ಭಾರತದಲ್ಲಿ ಯಾವುದೇ ಸಿಟಿಯಲ್ಲಿ ಅಭಿವೃದ್ಧಿ ಬಗ್ಗೆ ನಮ್ಮ ಸಲಹೆ ಕೇಳಿಲ್ಲ. ಇಲ್ಲಿ ನಾವು ಹೇಳಿದರೆ, ಕರೆದು ಅಭಿಪ್ರಾಯ ಪಡೀತಾರೆ. ಇಷ್ಟು ಸಾಮರಸ್ಯ ಬೇರೆ ಯಾವ ನಗರದಲ್ಲೂ ಇಲ್ಲ. ಕನ್ನಡಿಗರಿಗೆ ಒಳ್ಳೆಯ ಕೆಲಸ ಸಿಗಬೇಕು. ಬೆಂಗಳೂರು ಅಭಿವೃದ್ಧಿ ಆಗಬೇಕು ಎಂದರು.

ಹಿಂದಿನ ಬಿಜೆಪಿ ಸರ್ಕಾರ ಇದ್ದಾಗಲೂ ಭ್ರಷ್ಟಾಚಾರದ ಬಗ್ಗೆ ಮಾತನಾಡಿದ್ದೆ. ಎಲ್ಲ ಸರ್ಕಾರ ಇದ್ದಾಗ ಮಾತನಾಡಿದ್ದೇನೆ. ಎಲ್ಲ ಮುಖ್ಯಮಂತ್ರಿಗಳು ನನ್ನ ಕರೆದು ಅಭಿಪ್ರಾಯ ಕೇಳಿದ್ದಾರೆ. ಬೆಂಗಳೂರು ನಗರ ಅಂತರರಾಷ್ಟ್ರೀಯ ಗಮನಸೆಳೆದಿದೆ. ಇದು ನಮ್ಮ ನಗರ ಹೀಗಾಗಿ ನಾವು ಮಾತನಾಡಿದ್ದೇವೆ ಎಂದು ಪೈ ತಿಳಿಸಿದರು.

ಚಾಮರಾಜ ಕ್ಷೇತ್ರ ವ್ಯಾಪ್ತಿಯ ಪಾಲಿಕೆ ಆಸ್ತಿಗಳ ಸಂರಕ್ಷಿಸಿ

● ಅಧಿಕಾರಿಗಳಿಗೆ ಶಾಸಕ ಕೆ.ಹರೀಶ್‌ಗೌಡ ಸೂಚನೆ ● ಕುಡಿಯುವ ನೀರು, ಒಳಚರಂಡಿ ಸಮಸ್ಯೆ ಪರಿಹಾರಕ್ಕೆ ತಾಕೀತು
● ಟೆಂಡರ್ ಕರೆದು ಒಪ್ಪಿಸಿದ ಕಾಮಗಾರಿಗಳು ಆರಂಭವಾಗದೇ ಇರುವುದಕ್ಕೆ ತೀವ್ರ ಬೇಸರ

ಮೈಸೂರು, ಮಾ.1(ಎಸ್‌ಬಿಡಿ)– ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿರುವ ನಗರ ಪಾಲಿಕೆ ಆಸ್ತಿಗಳ ಸಂರಕ್ಷಣೆ ಮಾಡುವಂತೆ ಶಾಸಕ ಕೆ.ಹರೀಶ್‌ಗೌಡರು, ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ನಗರ ಪಾಲಿಕೆ ಸಭಾಂಗಣದಲ್ಲಿ ಶನಿವಾರ ಚಾಮರಾಜ ವಿಧಾನಸಭಾ ಕ್ಷೇತ್ರದ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಕ್ಷೇತ್ರದಲ್ಲಿ ಪಾದಯಾತ್ರೆ ವೇಳೆ ಕಂಡು ಬಂದ ಸಮಸ್ಯೆಗಳು ಹಾಗೂ ಸಾರ್ವಜನಿಕರ ದೂರುಗಳನ್ನು ಪ್ರಸ್ತಾಪಿಸಿ, ಅಧಿಕಾರಿಗಳು ಹಾಗೂ ಸಿಬ್ಬಂದಿ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲವೇ ಎಂದು ಪ್ರಶ್ನಿಸಿದರು.

ಪಾಲಿಕೆಯ ಆಸ್ತಿ ಗುರುತಿಸಿ, ಅವುಗಳನ್ನು ಸಂರಕ್ಷಣೆ ಮಾಡುವಲ್ಲಿ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ. ಕ್ಷೇತ್ರದಲ್ಲಿರುವ ಪಾಲಿಕೆ ಆಸ್ತಿಗಳ ಬಗ್ಗೆ ಸಮರ್ಪಕ ಮಾಹಿತಿ ನೀಡಿಲ್ಲ. ಈಗಲಾದರೂ ಪಾಲಿಕೆ ಆಸ್ತಿ ಸಂರಕ್ಷಣೆಗೆ ಅಧಿಕಾರಿಗಳು ಮುಂದಾಗಬೇಕು. ಅಂತಹ ಸ್ಥಳಗಳಲ್ಲಿ ಅಂಗನವಾಡಿ, ಗ್ರಂಥಾಲಯ ಸೇರಿದಂತೆ ಸಾರ್ವಜನಿಕರಿಗೆ ಅಗತ್ಯ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕು ಎಂದು ತಿಳಿಸಿದರು.

ನೀರಿನ ಸಮಸ್ಯೆಯಾಗಬಾರದು: ಬೇಸಿಗೆ ವೇಳೆ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಕ್ರಮ ವಹಿಸಬೇಕು. ಎಲ್ಲೆಡೆ ಶುದ್ಧ ಕುಡಿಯುವ ನೀರು ಪೂರೈಸಬೇಕು. ಹಲವೆಡೆ ಸಮರ್ಪಕವಾಗಿ ನೀರು ಸರಬರಾಜು ಆಗುತ್ತಿಲ್ಲ ಎಂಬ ದೂರುಗಳು ಕೇಳಿಬಂದಿವೆ. ಕೆಟ್ಟಿರುವ ಬೋರ್‌ವೆಲ್‌ಗಳನ್ನು ಕೂಡಲೇ ದುರಸ್ತಿ ಮಾಡಿಸಿ. ತೀರಾ ಸಮಸ್ಯೆ ಇರುವ ಭಾಗಕ್ಕೆ ಟ್ಯಾಂಕರ್ ಮೂಲಕ ನೀರು ಕಲ್ಪಿಸಿ. ಪಾಲಿಕೆಯಿಂದ ನಿರ್ವಹಣೆ ಮಾಡುತ್ತಿರುವ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸುಸ್ಥಿತಿಯಲ್ಲಿಡಿ. ನೀರಿನ ಶುಲ್ಕದ ಮೇಲೆ



ಮೈಸೂರು ಮಹಾನಗರ ಪಾಲಿಕೆ ಸಭಾಂಗಣದಲ್ಲಿ ಶನಿವಾರ ಶಾಸಕ ಕೆ.ಹರೀಶ್‌ಗೌಡರ ಅಧ್ಯಕ್ಷತೆಯಲ್ಲಿ ಚಾಮರಾಜ ವಿಧಾನಸಭಾ ಕ್ಷೇತ್ರದ ಪ್ರಗತಿ ಪರಿಶೀಲನಾ ಸಭೆ ನಡೆಯಿತು.

ಅವೈಜ್ಞಾನಿಕವಾಗಿ ಬಡ್ಡಿ ವಿಧಿಸಬೇಡಿ. ಸ್ಥಗಿತಗೊಂಡಿರುವ ನೀರು ಸರಬರಾಜು ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಿ. ನೀರು ಸರಬರಾಜು ಹಾಗೂ ಒಳಚರಂಡಿ ವಿಭಾಗದ ಇಂಜಿನಿಯರ್‌ಗಳು ಹಾಗೂ ಸಿಬ್ಬಂದಿ ನಿಗಾ ವಹಿಸಿ, ಕೆಲಸ ಮಾಡಬೇಕು ಎಂದು ಸೂಚನೆ ನೀಡಿದರು.

ಒಳಚರಂಡಿ ಸಮಸ್ಯೆ ಇದೆ: ಪಡುವಾರಹಳ್ಳಿ, ಮಂಚೇಗೌಡನಕೊಪ್ಪಲು, ಕುಂಬಾರಕೊಪ್ಪಲು, ಹೆಬ್ಬಾಳು, ಮೇಟಗಳ್ಳಿ ಹಾಗೂ ಇನ್ನಿತರ ಬಡಾವಣೆಗಳಲ್ಲಿ ಒಳಚರಂಡಿ ಸಮಸ್ಯೆ ಇದೆ. ಈ ಬಗ್ಗೆ ಸಾರ್ವಜನಿಕರು ದೂರು ನೀಡಿದರೂ ಅಧಿಕಾರಿಗಳು ಸ್ಪಂದಿಸುತ್ತಿಲ್ಲ ಎನ್ನುತ್ತಿದ್ದಾರೆ. ದೂರುಗಳು ಬಾರದಂತೆ ಸಿಬ್ಬಂದಿ ಕಾರ್ಯನಿರ್ವಹಿಸಬೇಕು. ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಪರಿಸರ ಪರಿಹಾರ ನಿಧಿಯಿಂದ ನಮ್ಮ ಕ್ಷೇತ್ರದಲ್ಲಿ ಒಟ್ಟು 17 ಪ್ಯಾಕೇಜ್ ಮಾಡಿ 44.65 ಕೋಟಿ ಮೊತ್ತದ ಕಾಮಗಾರಿಗಳಿಗೆ ಟೆಂಡರ್ ಆಗಿದ್ದರೂ ಕೆಲಸ ಪ್ರಾರಂಭವಾಗದಿರುವ ಬಗ್ಗೆ ಮಾಹಿತಿ ನೀಡಿ. 25 ಕೋಟಿ ವಿಶೇಷ ಅನುದಾನದಲ್ಲಿ ನೀರು ಮತ್ತು ಒಳಚರಂಡಿ ಕಾಮ ಗಾರಿಗಳಿಗೆ ನೀಡಲಾಗಿರುವ 7 ಕೋಟಿ ಅನುದಾನದ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಿ ಎಂದರು.

ಅಭಿವೃದ್ಧಿಗೂ ಗಮನಹರಿಸಿ: ಕ್ಷೇತ್ರದ 20 ವಾರ್ಡ್‌ಗಳಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ವಲಯದ ಅಭಿವೃದ್ಧಿ ಅಧಿಕಾರಿಗಳಿಂದ ಮಾಹಿತಿ ಪಡೆದ ಶಾಸಕರು, 15ನೇ ಹಣಕಾಸು ಆಯೋಗದ ಅನುದಾನದಲ್ಲಿ ಪಾಲಿಕೆ ವತಿಯಿಂದ ಕಾಮಗಾರಿಗಳನ್ನು ಕೈಗೊಳ್ಳಬೇಕು. 25 ಕೋಟಿ ವಿಶೇಷ ಅನುದಾನದಡಿ ಇನ್ನೂ ಅನೇಕ ಕಾಮಗಾರಿಗಳು ಪ್ರಾರಂಭವಾಗಿಲ್ಲ. 8 ಕೋಟಿ ರೂ. ಕಾಮಗಾರಿ ಇನ್ನೂ ಟೆಂಡರ್ ಹಂತದಲ್ಲಿದೆ. ಇಷ್ಟೊಂದು ವಿಳಂಬವಾಗಲು ಕಾರಣವೇನೆಂದು ತಿಳಿದು, ಪರಿಹಾರ ಕ್ರಮ ಕೈಗೊಳ್ಳಬೇಕು. ಮಹಾತ್ಮಗಾಂಧಿ ನಗರ ವಿಕಾಸ ಯೋಜನೆ 2ನೇ ಹಂತದ ಕಾಮಗಾರಿಗಳ ಬಗ್ಗೆಯೂ ಗಮನಹರಿಸಬೇಕು. ಅಮೃತ್ ಯೋಜನೆ 2.0 ಅಡಿಯಲ್ಲಿ ಕಲ್ಯಾಣಿ ಮತ್ತು ಉದ್ಯಾನ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಬೇಕು. ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಪೂರ್ಣಗೊಳಿಸುವುದರ ಜೊತೆಗೆ ಈಗಾಗಲೇ ಕಾಮಗಾರಿ ಮುಗಿಸಿರುವ ಗುತ್ತಿಗೆದಾರರಿಗೆ ಬಾಕಿ ಬಿಲ್ ಪಾವತಿಸಲು ಕ್ರಮ ವಹಿಸಬೇಕು ಎಂದು ಸೂಚಿಸಿದರು.

ಸಮನ್ವಯತೆಯಿಂದ ಕೆಲಸ ಮಾಡಿ: ಇ–ಸ್ವತ್ತು ಅಭಿಯಾನದ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಬೇಕು. ಎಲ್ಲಾ ವಲಯ ಕಚೇರಿಗಳ ರಾಜಸ್ವ ನಿರೀಕ್ಷಕರು, ಆರೋಗ್ಯ ನಿರೀಕ್ಷಕರು, ವಾರ್ಡ್ ಮೇಸ್ತ್ರಿಗಳು ಹಾಗೂ ಕಚೇರಿ ಸಿಬ್ಬಂದಿ ಸಮನ್ವಯತೆಯೊಂದಿಗೆ ಸಮರ್ಪಕವಾಗಿ ಕಾರ್ಯ ನಿರ್ವಹಿಸಬೇಕು. ಸ್ಲಂ ಬೋರ್ಡ್ ಬಡಾವಣೆಗಳನ್ನು ಪಾಲಿಕೆ ಸುಪರ್ದಿಗೆ ತೆಗೆದುಕೊಳ್ಳುವಲ್ಲಿ ಮತ್ತಷ್ಟು ವಿಳಂಬವಾಗದಂತೆ ಅಧಿಕಾರಿಗಳು ಕ್ರಮ ವಹಿಸಬೇಕು. ಒಣ ಮರಗಳನು ತೆರವುಗೊಳಿಸಬೇಕು. ಉದ್ಯಾನಗಳ ನಿರ್ವಹಣೆ, ಪ್ರಯಾಣಿಕರ ತಂಗುದಾಣಗಳಿಗೆ ಬೆಳಕಿನ ವ್ಯವಸ್ಥೆ, ಸಮರ್ಪಕ ಕಸ ವಿಲೇವಾರಿ, ಬೀದಿ ನಾಯಿಗಳ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಿ. ನಗರ ಯೋಜನಾಧಿಕಾರಿಗಳು ವಾಣಿಜ್ಯ ಕಟ್ಟಡಗಳಿಗೆ ಪ್ಲಾನ್ ಅನುಮೋದನೆ ನೀಡುವಾಗ ವಲಯಾಧಿಕಾರಿಗಳೊಂದಿಗೆ ಚರ್ಚಿಸಿ, ಕ್ರಮ ವಹಿಸಬೇಕು ಎಂದು ಸೂಚನೆ ತಿಳಿಸಿದರು.

ಸಭೆಯಲ್ಲಿ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಉಪ ಆಯುಕ್ತ ಸೋಮಶೇಖರ್, ಎಸ್‌ಇ ಸಿಂಧು ಇನ್ನಿತರ ಅಧಿಕಾರಿಗಳು ಹಾಜರಿದ್ದರು.

ಆಯವ್ಯಯದಲ್ಲಿ 50 ಕೋಟಿ ಮೀಸಲಿಡಿ...


ವೃತ್ತಗಳು, ಉದ್ಯಾನವನಗಳು, ಕಲ್ಯಾಣಿಗಳು ಹಾಗೂ ಕ್ರೀಡಾಂಗಣ ಅಭಿವೃದ್ಧಿ, ಈಜುಕೊಳ, ಗ್ರಂಥಾಲಯ, ಫುಡ್‌ಜೋನ್ ನಿರ್ಮಾಣ ಸೇರಿದಂತೆ 2023–24ನೇ ಸಾಲಿನ ಆಯವ್ಯಯದಲ್ಲಿ ಚಾಮರಾಜ ಕ್ಷೇತ್ರಕ್ಕೆ ಘೋಷಣೆಯಾದ ಯಾವುದೂ ಈಡೇರಿಲ್ಲ. ವಿಜಯನಗರ 2ನೇ ಹಂತದ ವಾಟರ್ ಟ್ಯಾಂಕ್ ಹತ್ತಿರ ಫುಡ್‌ಜೋನ್ ನಿರ್ಮಿಸುವ ಬಗ್ಗೆ ಸ್ಥಳ ಪರಿಶೀಲನೆ ನಡೆಸಿ ವರ್ಷ ಕಳೆದರೂ ಯಾವುದೇ ಕ್ರಮವಾಗಿಲ್ಲ. ಈ ಸಾಲಿನ ಆಯ–ವ್ಯಯದಲ್ಲಿ ಕ್ಷೇತ್ರಕ್ಕೆ 50 ಕೋಟಿ ಅನುದಾನವನ್ನು ಮೀಸಲಿಡಬೇಕು. ಮಹಾರಾಣಿ ಕಾಲೇಜು ಹಾಗೂ ಹಾಸ್ಟೆಲ್ ನವೀಕರಣ ಕಾಮಗಾರಿ ನಡೆಯುತ್ತಿದ್ದು, ವಿದ್ಯಾರ್ಥಿನಿಯರ ಅನುಕೂಲಕ್ಕಾಗಿ ಕಾಲೇಜು ಹಾಗೂ ಹಾಸ್ಟೆಲ್ ನಡುವೆ ಸ್ಕೈ ವಾಕ್ ನಿರ್ಮಿಸಲು ಅಗತ್ಯ ಕ್ರಮ ವಹಿಸಬೇಕು ಎಂದು ಶಾಸಕ ಕೆ. ಹರೀಶ್‌ಗೌಡರು ತಿಳಿಸಿದರು.

ಮೈಸೂರು ಮಿತ್ರ ಭಾನುವಾರ 2 ಮಾರ್ಚ್ 2025

ಕಾರಿಗೆ ಬಸ್ ಡಿಕ್ಕಿ: ಇಂಜಿನಿಯರ್ ಸಾವು

ಕೆ.ಎಂ. ದೊಡ್ಡಿ ಬಳಿ ದುರಂತ, ಬಸ್, ಕಾರು ವಶ


ವಿ.ಮನು



ಮಂಡ್ಯ: ಟಾಟಾ ನಿಕ್ಸಾನ್ ಕಾರಿಗೆ ಕೆಎಸ್ ಆರ್‌ಟಿಸಿಬಸ್ ಡಿಕ್ಕಿ ಹೊಡೆದ ಪರಿಣಾಮ ಇಂಜಿನಿಯರ್ ಒಬ್ಬರು ಸಾವನ್ನಪ್ಪಿರುವ ಘಟನೆ ಮಂಡ್ಯ ಜಿಲ್ಲೆಮದ್ದೂರು ತಾಲೂಕಿನ ಕೆ.ಎಂ. ದೊಡ್ಡಿ ಸಮೀಪ ಬೋರಾಪುರ ಗ್ರಾಮದಲ್ಲಿ ಶನಿವಾರ ಮಧ್ಯಾಹ್ನ ಸಂಭವಿಸಿದೆ.

ಪತ್ರಕರ್ತೆ ಹರವು ಸ್ಫೂರ್ತಿ ಅವರ ಪತಿ, ಕೆ.ಎಂ.ದೊಡ್ಡಿ ವೆಂಕಟೇಶ್ ಅವರ ಪುತ್ರ ಬೆಂಗಳೂರಿನ ಖಾಸಗಿ ಕಂಪನಿಯ ಸಾಫ್ಟ್‌ವೇರ್ ಇಂಜಿನಿಯರ್ ವಿ.ಮನು (36) ಮೃತ ವ್ಯಕ್ತಿ.

ಶನಿವಾರ ಬೆಂಗಳೂರಿನಿಂದ ಸ್ವಗ್ರಾಮ ಕೆ.ಎಂ.ದೊಡ್ಡಿಗೆ ವಿ.ಮನು ಟಾಟಾ ನಿಕ್ಸಾನ್ ಕಾರಿನಲ್ಲಿ ಬರುತ್ತಿದ್ದಾಗ ಮಳವಳ್ಳಿಯಿಂದ ಕೆ.ಎಂ.ದೊಡ್ಡಿ ಮಾರ್ಗ ಮದ್ದೂರಿಗೆ ಬರುತ್ತಿದ್ದಾಗ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿಯಾಗಿ ಈ ದುರ್ಘಟನೆ ನಡೆದಿದೆ.

ಬಸ್ಸಿನ ಮುಂಬದಿಯ ಚಕ್ರ ಪಂಕ್ಚರ್ ಆಗಿ ಚಾಲಕನ ನಿಯಂತ್ರಣ ತಪ್ಪಿ ಕಾರಿಗೆ ಡಿಕ್ಕಿ ಹೊಡೆದ ಪರಿಣಾಮ ಗಂಭೀರವಾಗಿ ಗಾಯಗೊಂಡ ವಿ.ಮನು ಅವರನ್ನು ಮದ್ದೂರು ಸರ್ಕಾರಿ ಆಸ್ಪತ್ರೆ ಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಬಳಿಕ ಹೆಚ್ಚಿನ ಚಿಕಿತ್ಸೆಗೆ ಮಂಡ್ಯ ಮಿಮ್ಸ್‌ಗೆ ಕರೆತರುವಾಗ ಮಾರ್ಗ ಮಧ್ಯೆ ಕೊನೆಯುಸಿರೆಳೆದರು.

ಮೃತರು 6 ವರ್ಷದ ಮಗ ಸುಧನ್ವ, ಪತ್ನಿ ಪತ್ರಕರ್ತೆ ಹರವು ಸ್ಫೂರ್ತಿ ಹಾಗೂ ಪತ್ರಕರ್ತ, ಲೇಖಕ ಹರವು ದೇವೇಗೌಡ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಕೆ.ಎಂ.ದೊಡ್ಡಿ ಬಳಿಯ ಮೆಣಸಗೆರೆಯಲ್ಲಿ ಭಾನುವಾರ ಮಧ್ಯಾಹ್ನ 12ಕ್ಕೆ ನಡೆಯಲಿದೆ ಎಂದು ಕುಟುಂಬ ವರ್ಗದವರು ತಿಳಿಸಿದ್ದಾರೆ.

ಮದ್ದೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಬಸ್ ಹಾಗೂ ಕಾರನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಪರಿಹಾರ ನೀಡದ ನೀರಾವರಿ ಇಲಾಖೆಯ ಪೀಠೋಪಕರಣಗಳ ಜಪ್ತಿ

ಕೆ.ಆರ್.ಪೇಟೆ,ಮಾ.1– ನ್ಯಾಯಾಲಯ ಆದೇಶವನ್ನು ಪಾಲಿಸದ ಕಾರಣ ನ್ಯಾಯಾಲಯದ ಸೂಚನೆ ಮೇರೆಗೆ ಪಟ್ಟಣದಲ್ಲಿರುವ ಹೇಮಾವತಿ ನೀರಾವರಿ ನಿಗಮದ ನಂ.3 ಕಾರ್ಯಪಾಲಕ ಇಂಜಿನಿಯರ್ ಕಚೇರಿಯ ಪೀಠೋಪಕರಣಗಳನ್ನು ಜಪ್ತಿ ಮಾಡಲಾಯಿತು.

ಹೇಮಾವತಿ ನಾಲಾ ಯೋಜನೆಗಾಗಿ ಭೂಮಿ ಕಳೆದುಕೊಂಡ ಸುಮಾರು 15 ರೈತರು ಹೆಚ್ಚುವರಿ ಪರಿಹಾರಕ್ಕಾಗಿ ಶ್ರೀರಂಗಪಟ್ಟಣದ ಜಿಲ್ಲಾ ನ್ಯಾಯಾಲಯದಲ್ಲಿ 2015ರಲ್ಲಿ ವಕೀಲ ವಡ್ಡರಹಳ್ಳಿ ಧನಂಜಯ್ ಕುಮಾರ್ ಅವರ ಮೂಲಕ ಪ್ರಕರಣ ದಾಖಲಿಸಿದ್ದರು.

ಪ್ರಕರಣ ವಿಚಾರಣೆ ನಡೆಸಿದ ಶ್ರೀರಂಗಪಟ್ಟಣ ನ್ಯಾಯಾಲಯ ಭೂಮಿ ಕಳೆದುಕೊಂಡ ರೈತರಿಗೆ 1 ಕೋಟಿ 10 ಲಕ್ಷ ರೂಗಳ ಹೆಚ್ಚುವರಿ ಪರಿಹಾರ ನೀಡುವಂತೆ ಆದೇಶಿಸಿತ್ತು ಆದರೆ ನೀರಾವರಿ ಇಲಾಖೆ ನ್ಯಾಯಾಲಯದ ಆದೇಶವನ್ನು ಪಾಲಿಸದೇ ನಿರ್ಲಕ್ಷಿಸಿತ್ತು. ಈ ಹಿನ್ನೆಲೆಯಲ್ಲಿ ಜಪ್ತಿ ಮಾಡಲಾಯಿತು.

ಸಾಲ ವಸೂಲಾತಿಗಾಗಿ ಬಂದು ರೈತನ ಮೇಲೆ ಹಲ್ಲೆ ನಡೆಸಿದ ಮೈಕ್ರೋ ಫೈನಾನ್ಸ್ ಸಿಬ್ಬಂದಿ ಬೈಕಿಗೆ ಬೆಂಕಿ

ರೊಚ್ಚಿಗೆದ್ದ ಗ್ರಾಮಸ್ಥರನ್ನು ಕಂಡು ಸಿಬ್ಬಂದಿ ಪರಾರಿ, ರಾಜಿ ಪಂಚಾಯಿತಿ ಮೂಲಕ ಪ್ರಕರಣ ಇತ್ಯರ್ಥ

ನಾಗಮಂಗಲ: ಸಾಲ ವಸೂಲಾತಿಗಾಗಿ ಬಂದಿದ್ದ ಮೈಕ್ರೋ ಫೈನಾನ್ಸ್ ಸಿಬ್ಬಂದಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಯುವ ರೈತನ ಮೇಲೆ ಹಲ್ಲೆ ನಡೆಸಿದ ಪರಿಣಾಮ ರೊಚ್ಚಿಗೆದ್ದ ಗ್ರಾಮಸ್ಥರು ಮೈಕ್ರೋ ಫೈನಾನ್ಸ್ ಸಂಸ್ಥೆಯ ಸಿಬ್ಬಂದಿ ಬೈಕ್‌ಗೆ ಬೆಂಕಿ ಹಚ್ಚಿರುವ ಘಟನೆ ತಾಲೂಕಿನ ಹೊಣಕೆರೆ ಹೋಬಳಿ ಗೆಜ್ಜೆ ಹೊಸಳ್ಳಿ ಗ್ರಾಮದಲ್ಲಿ ಸಂಭವಿಸಿದೆ.

ಗೆಜ್ಜೆ ಹೊಸಳ್ಳಿ ಗ್ರಾಮದ ಲಕ್ಷ್ಮಣ ಎಂಬುವರ ಪುತ್ರ ಸುನಿಲ್ ಹಲ್ಲೆಗೊಳಗಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕೆಲ ತಿಂಗಳುಗಳ ಹಿಂದೆ ಮೈಕ್ರೋ ಫೈನಾನ್ಸ್‌ನಲ್ಲಿ 2.5 ಲಕ್ಷ ರೂ. ಟ್ರ್ಯಾಕ್ಟರ್ ಸಾಲ ಪಡೆದಿದ್ದ ಗ್ರಾಮದ ರೈತ ಲಕ್ಷ್ಮಣ ಕಳೆದ ನಾಲ್ಕು ತಿಂಗಳಿಂದ ಸಾಲದ ಕಂತು ಪಾವತಿಸಿರಲಿಲ್ಲ. ಗುರುವಾರ ಸಂಜೆ ಬೈಕ್‌ನಲ್ಲಿ ಬಂದ ಫೈನಾನ್ಸ್ ಸಂಸ್ಥೆಯ ಇಬ್ಬರು ಸಿಬ್ಬಂದಿ ಬಾಕಿ ಉಳಿಸಿಕೊಂಡಿರುವ ಸಾಲದ ಕಂತು ಪಾವತಿಸಿ ಇಲ್ಲದಿದ್ದರೆ ಟ್ರ್ಯಾಕ್ಟರ್ ಜಪ್ತಿ ಮಾಡುವುದಾಗಿ ಬೆದರಿಕೆ ಹಾಕಿದ್ದಾರೆ.

ಲಕ್ಷ್ಮಣ್ ಅವರ ಪುತ್ರ ಸುನಿಲ್ ಈಗ ಹಣ ಕಟ್ಟಲು ನಮ್ಮಲ್ಲಿ ಹಣವಿಲ್ಲ. ಚಿನ್ನದ ಒಡವೆ ಅಡಮಾನವಿಟ್ಟು ನಾಳೆ ಪಾವತಿಸುವುದಾಗಿ ಪರಿಪರಿಯಾಗಿ ಬೇಡಿಕೊಂಡರು ಸಹ ಇದಕ್ಕೆ ಒಪ್ಪದ ಸಿಬ್ಬಂದಿ ಕುಟುಂಬಸ್ಥರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಸುನಿಲ್ ಮೇಲೆ ಏಕಾಏಕಿ ಹಲ್ಲೆ ನಡೆಸಿದರು ಎಂದು ಹೇಳಲಾಗಿದೆ.

ಇದರಿಂದ ರೊಚ್ಚಿಗೆದ್ದ ಗ್ರಾಮಸ್ಥರು ಫೈನಾನ್ಸ್ ಸಿಬ್ಬಂದಿ ತಂದಿದ್ದ ಬೈಕ್‌ಗೆ ಬೆಂಕಿ ಹಚ್ಚುತ್ತಿದ್ದಂತೆ ಹಾಗೂ ಗ್ರಾಮಸ್ಥರು ಸೇರುತ್ತಿದ್ದಂತೆ ಸಿಬ್ಬಂದಿ ಸ್ಥಳದಿಂದ ಕಾಲ್ಕಿತ್ತಿದ್ದಾರೆ.

ನಂತರ ಮೈಕ್ರೋ ಫೈನಾನ್ಸ್ ಸಿಬ್ಬಂದಿ ರಾಜಿ ಸಂಧಾನ ಮೂಲಕ ಸಮಸ್ಯೆ ಬಗೆಹರಿಸಿಕೊಂಡಿದ್ದಾರೆ. ಘಟನೆ ನಡೆದರೂ ಸಹ ಪೊಲೀಸ್ ಠಾಣೆಯಲ್ಲಿ ಯಾವುದೇ ರೀತಿಯ ದೂರು ದಾಖಲಾಗಿಲ್ಲ ಎಂದು ತಿಳಿದು ಬಂದಿದೆ

ಶೈಕ್ಷಣಿಕ ಅಧಿವೇಶನ

ಮಂಡ್ಯ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ವತಿಯಿಂದ ರಾಜ್ಯ ಮಟ್ಟದ ಶೈಕ್ಷಣಿಕ ಅಧಿವೇಶನ, ಮಾತೆ ಸಾವಿತ್ರಿಬಾಯಿ ಫುಲೆ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ಸರ್ವ ಸದಸ್ಯರ ಸಭೆಯನ್ನು ಮಾ.3 ಬೆಳಿಗ್ಗೆ 9.30 ಗಂಟೆಗೆ ಮಂಡ್ಯ ವಿಶ್ವವಿದ್ಯಾಲಯ ಆವರಣದಲ್ಲಿ ಆಯೋಜಿಸಲಾಗಿದೆ ಎಂದು ಸಂಘದ ರಾಜ್ಯಾಧ್ಯಕ್ಷ ಕೆ.ನಾಗೇಶ್ ತಿಳಿಸಿದರು.

ಶೀಘ್ರದಲ್ಲೇ ರಾಜ್ಯದಲ್ಲಿ 15 ಸಾವಿರ ಶಿಕ್ಷಕರ ನೇಮಕಾತಿ


ರಾಜ್ಯ ಮಟ್ಟದ ಶೈಕ್ಷಣಿಕ ಅಧಿವೇಶನ ಮತ್ತು ಮಾತೆ ಸಾವಿತ್ರಿಬಾಯಿ ಫುಲೆ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸುತ್ತಿರುವುದು.

ಮಂಡ್ಯ,ಮಾ.1– ಶೀಘ್ರದಲ್ಲೇ ರಾಜ್ಯದಲ್ಲಿ 15 ಸಾವಿರ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ನಡೆಯಲಿದ್ದು, ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಮಾತುಕತೆ ನಡೆಸಿದ್ದೇನೆ. ನೇಮಕಾತಿ ಪ್ರಕ್ರಿಯೆ ತ್ವರಿತ ಗತಿಯಲ್ಲಿ ಆರಂಭವಾಗಲಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ವತಿಯಿಂದ ನಗರದ ಮಂಡ್ಯ ವಿಶ್ವವಿದ್ಯಾನಿಲಯದ ಆವರಣದಲ್ಲಿ ಶನಿವಾರ ನಡೆದ ರಾಜ್ಯ ಮಟ್ಟದ ಶೈಕ್ಷಣಿಕ ಅಧಿವೇಶನ ಮತ್ತು ಮಾತೆ ಸಾವಿತ್ರಿಬಾಯಿ ಫುಲೆ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಕೆಲವು ದಿನಗಳ ಹಿಂದೆ ಕಲಬುರ್ಗಿಯಲ್ಲಿ ನಡೆದಿದ್ದ ಕ್ಯಾಬಿನೆಟ್ ಸಭೆಯಲ್ಲಿ ರಾಜ್ಯದಲ್ಲಿ ಖಾಲಿ ಇರುವ ಶೇ.80ರಷ್ಟು ಶಿಕ್ಷಕರ ನೇಮಕಾತಿಗೆ ಒಪ್ಪಿಗೆ ಸೂಚಿಸಿತ್ತು. ಇದಾದ ಬಳಿಕ ನಾನು ಸಿಎಂ ಭೇಟಿ ಮಾಡಿ, ಕನಿಷ್ಟ 15 ಸಾವಿರ ಶಿಕ್ಷಕರ ನೇಮಕ ಆಗಲೇಬೇಕೆಂದು ಒತ್ತಾಯ ಮಾಡಿದ್ದೆ. ಇದಕ್ಕೆ ಸಿಎಂ ಸಹ ಪೂರಕವಾಗಿ ಸ್ಪಂದಿಸಿದ್ದು, ಶೀಘ್ರವೇ ನೇಮಕಾತಿ ಪ್ರಕ್ರಿಯೆ ಆರಂಭವಾಗಲಿದೆ ಎಂದರು.

ಅನುದಾನಿತ ಶಿಕ್ಷಕರು ಸಹ ಹಲವು ಬೇಡಿಕೆಗಳನ್ನು ಇಟ್ಟಿದ್ದಾರೆ. ಅವರ ಬೇಡಿಕೆ ಈಡೇರಿಕೆಗೂ ಸಹ ಸರ್ಕಾರ ಮತ್ತು ಶಿಕ್ಷಣ ಇಲಾಖೆ ಸಿದ್ಧವಿದೆ. ಈ ಹಿಂದೆ ಇದ್ದ ಸರ್ಕಾರ ಕೇವಲ ನಾಲ್ಕೂವರೆ ಸಾವಿರ ಶಿಕ್ಷಕರ ನೇಮಕಾತಿ ಮಾಡಿತ್ತು. ಆದರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಒಂದು ವರ್ಷ 9 ತಿಂಗಳಿನಲ್ಲಿ ಕನಿಷ್ಟ 12 ಸಾವಿರ ಶಿಕ್ಷಕರ ನೇಮಕಾತಿ ಮಾಡಿದೆ. ಇನ್ನೂ 15 ಸಾವಿರ ಶಿಕ್ಷಕ ಹುದ್ದೆಗಳನ್ನು ತುಂಬಿಸಬೇಕೆಂಬುದು ನಮ್ಮ ಉದ್ದೇಶವಾಗಿದೆ ಎಂದು ಸ್ಪಷ್ಟಪಡಿಸಿದರು.

ದ್ವಿತೀಯ ಪಿಯುಸಿ ಪರೀಕ್ಷೆ ಆರಂಭ

ಸಚಿವರುಗಳಿಂದ ವೆಬ್ ಕ್ಯಾಸ್ಟಿಂಗ್ ಪರಿಶೀಲನೆ

ಮಂಡ್ಯ, ಮಾ.1– ಶನಿವಾರದಿಂದ ಪ್ರಾರಂಭವಾಗಿರುವ ದ್ವಿತೀಯ ಪಿಯುಸಿ ಪರೀಕ್ಷೆಯು ಮಂಡ್ಯ ಜಿಲ್ಲೆಯ 26 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಿತು. ವಿದ್ಯಾರ್ಥಿಗಳು ಪರೀಕ್ಷೆ ಬರೆದರು. ಎಲ್ಲಾ ಪರೀಕ್ಷಾ ಕೇಂದ್ರಗಳ ವೆಬ್ ಕ್ಯಾಸ್ಟಿಂಗ್ ನ್ನು ವೀಕ್ಷಿಸಲು ತಂಡ ರಚಿಸಿದ್ದು, ತಂಡವು ಜಿಲ್ಲಾಧಿಕಾರಿಗಳ ಕಚೇರಿಯಿಂದ ಪ್ರತಿ ಪರೀಕ್ಷಾ ಕೊಠಡಿಯನ್ನು ವೀಕ್ಷಿಸಿತು.


ವೆಬ್ ಕ್ಯಾಸ್ಟಿಂಗ್ ಕೊಠಡಿಗೆ ಇಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಹಾಗೂ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಎಸ್.ಮಧುಬಂಗಾರಪ್ಪ ಅವರು ಭೇಟಿ ನೀಡಿ ಪರೀಕ್ಷಾ ಕೇಂದ್ರಗಳಲ್ಲಿ ನಡೆಯುತ್ತಿರುವ ಪರೀಕ್ಷಾ ಪ್ರಕ್ರಿಯೆಯನ್ನು ವೀಕ್ಷಿಸಿದರು.

ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಎಸ್.ಮಧು ಬಂಗಾರಪ್ಪ ಅವರು ಮಾತನಾಡಿ ವೆಬ್ ಕ್ಯಾಸ್ಟಿಂಗ್ ಅನುಷ್ಠಾನದ ಮೂಲಕ ವಿದ್ಯಾರ್ಥಿಗಳಿಗೆ ಪರೀಕ್ಷೆಯ ಬಗ್ಗೆ ಗಂಭೀರತೆ ಹೆಚ್ಚಿದೆ ಹಾಗೂ ಹೆಚ್ಚಿನ ಜ್ಞಾನಾರ್ಜನೆ ನಡೆಸುತ್ತಾರೆ. ಶಿಕ್ಷಕರು ಸಹ ವಿದ್ಯಾರ್ಥಿಗಳಿಗೆ ಹೆಚ್ಚಿನ ಪರಿಹಾರ ಬೋಧನೆಗಳನ್ನು ನಡೆಸಿ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುತ್ತಾರೆ ಎಂದರು.

ಇದೇ ಸಂದರ್ಭದಲ್ಲಿ ಶಾಸಕರಾದ ರಮೇಶ್ ಬಾಬು ಬಂಡಿಸಿದ್ದೇಗೌಡ, ಪಿ.ರವಿಕುಮಾರ್, ಜಿಲ್ಲಾಧಿಕಾರಿ ಡಾ.ಕುಮಾರ, ಜಿಪಂ ಮುಖ್ಯ ಸಿಇಓ ಅಧಿಕಾರಿ ಕೆ.ಆರ್.ನಂದಿನಿ, ಎಡಿಸಿ ಬಿ.ಸಿ.ಶಿವಾನಂದಮೂರ್ತಿ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಭಿಕ್ಷೆ ಬೇಡಿಯಾದರೂ ಮಂಡ್ಯ ವಿವಿ ಉಳಿಸೋಣ

ಮಂಡ್ಯ ವಿಶ್ವವಿದ್ಯಾನಿಲಯ ವಿಲೀನ ವಿರೋಧಿಸಿ, ಬಿಜೆಪಿ-ಜೆಡಿಎಸ್ ಬೃಹತ್ ಪ್ರತಿಭಟನೆ


ವಿಪಕ್ಷ ನಾಯಕ ಆರ್.ಅಶೋಕ್, ಶಾಸಕ ಅಶ್ವತ್ಥ್ ನಾರಾಯಣ ನೇತೃತ್ವದಲ್ಲಿ ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ ಅವರಿಗೆ ಮನವಿ ಪತ್ರ ನೀಡಲಾಯಿತು.

ಮಂಡ್ಯ,ಮಾ.1– ಭಿಕ್ಷೆ ಬೇಡಿಯಾದರೂ ಮಂಡ್ಯ ವಿಶ್ವವಿದ್ಯಾಲಯ ಸೇರಿದಂತೆ ಸರ್ಕಾರ ಮುಚ್ಚಲು ಉದ್ದೇಶಿಸಿರುವ ಮಂಡ್ಯ ಸೇರಿದಂತೆ ಎಲ್ಲಾ 9 ವಿಶ್ವವಿದ್ಯಾಲಯಗಳನ್ನು ಉಳಿಸೋಣ ಎಂದು ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ್ ಕರೆ ನೀಡಿದರು.

ಮಂಡ್ಯ ಸೇರಿದಂತೆ 9 ಜಿಲ್ಲೆಗಳ ವಿಶ್ವವಿದ್ಯಾಲಯಗಳ ಮಾನ್ಯತೆ ರದ್ದು ಮಾಡಿರುವ ಕಾಂಗ್ರೆಸ್ ಸರ್ಕಾರದ ವಿರುದ್ಧ ಎನ್‌ಡಿಎ ಮೈತ್ರಿಕೂಟ ಶನಿವಾರ ಕರೆ ನೀಡಿದ್ದ ಪ್ರತಿಭಟನಾ ಧರಣಿಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ವಿಶ್ವವಿದ್ಯಾಲಯಗಳನ್ನು ಉಳಿಸುವ ಅಭಿಯಾನ ಮಂಡ್ಯದಿಂದಲೇ ಪ್ರಾರಂಭವಾಗಿದ್ದು, ಎಲ್ಲ ಜಿಲ್ಲೆಗಳಲ್ಲಿ ಎನ್‌ಡಿಎ ಮೈತ್ರಿಕೂಟ ಹಾಗೂ ಎಲ್ಲ ಸಂಘಟನೆಗಳೊಡಗೂಡಿ ಹೋರಾಟ ಮಾಡುತ್ತೇವೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಅವರು ಮಂಡ್ಯ, ಚಾಮರಾಜನಗರ, ಕೊಡಗು ಸೇರಿದಂತೆ 9 ಜಿಲ್ಲೆಗಳಲ್ಲಿ ಸ್ಥಾಪಿಸಿರುವ ವಿಶ್ವವಿದ್ಯಾಲಯಗಳಿಂದ ಲಾಭವಿಲ್ಲ ಹೀಗಾಗಿ ಅಗತ್ಯವಿಲ್ಲ ಎಂದಿದ್ದಾರೆ. ನಿಮಗೆ ಆದಾಯ ಬೇಕಾದರೆ ಎಲ್ಲ ಶಾಲಾ–ಕಾಲೇಜುಗಳು, ವಿಶ್ವವಿದ್ಯಾಲಯಗಳನ್ನು ಮುಚ್ಚಿ ಬಾರ್ ತೆರೆಯಿರಿ, ಒಳ್ಳೆಯ ಆದಾಯ ಬರುತ್ತದೆ ಎಂದು ಲೇವಡಿ ಮಾಡಿದರು.

ಶಿಕ್ಷಣ ವ್ಯಾಪಾರ ಮತ್ತು ಉದ್ಯಮವಲ್ಲ. ನಮ್ಮ ದೇಶದ ಆಸ್ತಿ ಹೆಚ್ಚು ವಿದ್ಯಾವಂತರಾದರೆ ಬೇರೆ ಬೇರೆ ದೇಶಗಳ ಜೊತೆ ಪೈಪೋಟಿ ನಡೆಸಬಹುದು. 9 ವಿಶ್ವವಿದ್ಯಾಲಯಗಳನ್ನು ನಡೆಸಲು 252 ಕೋಟಿ ರೂ. ಬೇಕಾಗಿದೆ 4 ಲಕ್ಷ ಬಜೆಟ್ ಮಂಡಿಸುವ ರಾಜ್ಯ ಸರ್ಕಾರಕ್ಕೆ 252 ಕೋಟಿ ರೂಗಳನ್ನು ನೀಡಲು ಆಗಲ್ಲವೇ ಎಂದು ಪ್ರಶ್ನಿಸಿದರು.

ಗ್ರಾಮೀಣ ಜನ ನಮ್ಮೂರಿಗೆ ಶಾಲೆ, ಆಸ್ಪತ್ರೆ ಬೇಕು ಎಂದು ಕೇಳುತ್ತಾರೆ. ಆದರೆ, ಈ ಕಾಂಗ್ರೆಸ್ ಸರ್ಕಾರ ಕೊಟ್ಟಿರುವ ವಿಶ್ವವಿದ್ಯಾಲಯಗಳನ್ನು ಮುಚ್ಚಲು ಹೊರಟಿದೆ. ವಿಶ್ವವಿದ್ಯಾಲಯಕ್ಕೆ ಕೇಂದ್ರ ಮತ್ತು ವಿವಿಗೆ ಒಳಪಡುವ ಕಾಲೇಜುಗಳಿಂದಲೇ ಹಣ ಬರುತ್ತದೆ. ಅದರಿಂದಲೇ ನಡೆಸಬಹುದು. ಶಿಕ್ಷಣ ಮಾರಾಟದ ವಸ್ತು ಆಗಬಾರದು. ಜಿಲ್ಲೆಯಲ್ಲಿ ಒಂದು ವಿವಿ ಇದ್ದರೆ ಅದು ಒಂದು ಗೌರವ ಎಂದರು.

ಆರ್ಥಿಕ ತಜ್ಞ ಎಂದ್ಹೇಳುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿವಿಗಳಿಂದ ಲಾಭವಿಲ್ಲ ಎಂದು ಮುಚ್ಚಲು ಹೊರಟಿದ್ದಾರೆ. ಸರ್ಕಾರದ ಖಜಾನೆಗೇ ಹೆಗ್ಗಣಗಳು ಹೊಕ್ಕಿವೆ. ಕಾಂಗ್ರೆಸ್ ಸರ್ಕಾರ ಬಂದು ವಿದ್ಯೆಯನ್ನು ಕಿತ್ತಾಕಿದೆ. ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಅವರು ಮುಚ್ಚಿರುವ ಬಾರ್‌ಗಳಿಗೆ ಲೈಸೆನ್ಸ್ ನೀಡಿ ತೆರೆಸುತ್ತಿದ್ದರೆ, ಇತ್ತ ಸರ್ಕಾರ ತೆರೆದಿರುವ ವಿಶ್ವವಿದ್ಯಾಲಯಗಳನ್ನು ಮುಚ್ಚುತ್ತಿದೆ ಎಂದು ವ್ಯಂಗ್ಯವಾಡಿದರು.

ಜಿಲ್ಲೆಯಲ್ಲಿ 6 ಮಂದಿ ವಿಧಾನಸಭಾ ಶಾಸಕರು ಹಾಗೂ ಇಬ್ಬರು ವಿಧಾನಪರಿಷತ್ ಸದಸ್ಯರು ಸೇರಿ ಒಟ್ಟು 8 ಮಂದಿ ಶಾಸಕರಿದ್ದು, ಒಂದು ವಿಶ್ವವಿದ್ಯಾಲಯವನ್ನು ಉಳಿಸಲು ಇವರಿಗೆ ಯೋಗ್ಯತೆ ಇಲ್ಲವಾದರೆ ಏಕೆ ಅಧಿಕಾರದಲ್ಲಿರಬೇಕೆಂದು ಪ್ರಶ್ನಿಸಿದರು.

ಮಾಜಿ ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥ್ ನಾರಾಯಣ ಮಾತನಾಡಿ, ಕಾಂಗ್ರೆಸ್ ಸರ್ಕಾರ ಬಂದಾಗಿನಿಂದ ಬಿಜೆಪಿ ಸರ್ಕಾರದ ಅವಧಿಯಲ್ಲಿ ಸ್ಥಾಪಿಸಿದ್ದ 9 ವಿಶ್ವವಿದ್ಯಾಲಯಗಳಿಗೂ ಒಂದೇ ಒಂದು ನಯಾ ಪೈಸೆ ಕೊಟ್ಟಿಲ್ಲ. ಶಿಕ್ಷಣವನ್ನು ವ್ಯಾಪಾರ ಎಂದು ತಿಳಿದಿರುವ ಇಂತಹ ಸರ್ಕಾರ ಇರಬಾರದು, ಈ ಭ್ರಷ್ಟ ಸರ್ಕಾರವನ್ನು ಕಿತ್ತೊಗೆಯಿರಿ ಎಂದು ಕರೆ ನೀಡಿದರು.

ಧರಣಿಯಲ್ಲಿ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ, ಮಾಜಿ ಸಚಿವರಾದ ಸಿ.ಎಸ್.ಪುಟ್ಟರಾಜು, ಕೆ.ಸಿ.ನಾರಾಯಣ ಗೌಡ, ಮಾಜಿ ಶಾಸಕ ಕೆ.ಟಿ.ಶ್ರೀಕಂಠೇಗೌಡ ಮುಖಂಡರಾದ ಬಿ.ಆರ್.ರಾಮಚಂದ್ರ ಎಸ್.ಸಚ್ಚಿದಾನಂದ ಇಂಡುವಾಳು, ಡಾ.ಸಿದ್ದರಾಮಯ್ಯ, ಅಶೋಕ್ ಜಯರಾಂ, ಡಾ.ಎನ್.ಎಸ್.ಇಂದ್ರೇಶ್, ಡಿ.ರಮೇಶ್, ಅಂಬುಜಮ್ಮ, ಬೇಕರಿ ಅರವಿಂದ್, ಸಿ.ಟಿ. ಮಂಜುನಾಥ್, ಕಂಸಾಗರ ರವಿ, ಸಾತನೂರು ಜಯರಾಮು, ಕನ್ನಡ ಸೇನೆ ಮಂಜು ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ಒಂದನೇ ಪುಟದಿಂದ

ಐವರು ಇಂಜಿನಿಯರಿಂಗ್ ವಿದ್ಯಾರ್ಥಿಗಳು ಸಾವು

ಎಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿದ್ದರು.

ವಿವರ: ಸ್ನೇಹಿತರಾಗಿರುವ ಈ ವಿದ್ಯಾರ್ಥಿಗಳು ಇಂದು (ಶನಿವಾರ) ಮಲೆಮಹದೇಶ್ವರ ಬೆಟ್ಟದಲ್ಲಿ ಮಹೋತ್ಸವವಿದ್ದ ಕಾರಣ ಅಲ್ಲಿಗೆ ಮಾರುತಿ ಡಿಸೈರ್ (ಕೆಎ 21 ಎನ್ 5876) ಕಾರಿನಲ್ಲಿ ಮೈಸೂರಿನಿಂದ ಹೊರಟಿದ್ದರು. ವಿದ್ಯಾರ್ಥಿ ಸುಹಾಸ್ ಕಾರನ್ನು ಚಾಲನೆ ಮಾಡುತ್ತಿದ್ದ. ಕಾರು ಕೊಳ್ಳೇಗಾಲದ ನಂತರ ಮಧುವನಹಳ್ಳಿ ಮತ್ತು ಚಿಕ್ಕಿಂದುವಾಡಿ ಮಧ್ಯೆ ಇರುವ ವಡ್ಡರಕಟ್ಟೆ ಎಂಬಲ್ಲಿನ ತಿರುವಿನಲ್ಲಿ ತೆರಳುತ್ತಿದ್ದಾಗ ಹನೂರಿನಿಂದ ವೇಗವಾಗಿ ಬರುತ್ತಿದ್ದ ಟಿಪ್ಪರ್‌ನ ಚಾಲಕ ಬೇರೊಂದು ವಾಹನವನ್ನು ಓವರ್ ಟೇಕ್ ಮಾಡುವ ಭರದಲ್ಲಿ ಇವರ ಕಾರಿಗೆ ಡಿಕ್ಕಿ ಹೊಡೆದಿದ್ದಾನೆ. ಪರಿಣಾಮ ಟಿಪ್ಪರ್ ಸುಮಾರು 10 ಅಡಿ ಆಳದಲ್ಲಿರುವ ಭತ್ತದ ಗದ್ದೆಯಲ್ಲಿ ಉರುಳಿ ಬಿದ್ದರೆ, ಕಾರು ಅಲ್ಲಿನ ಸೇತುವೆ ಕೆಳಗಿರುವ ಕಾಲುವೆಯಲ್ಲಿ ಬಿದ್ದಿದೆ. ಅಪಘಾತದ ರಭಸಕ್ಕೆ ಟಿಪ್ಪರ್ ಮತ್ತು ಕಾರಿನ ಮುಂಭಾಗ ಸಂಪೂರ್ಣವಾಗಿ ಜಖಂಗೊಂಡಿದ್ದು, ಐವರೂ ವಿದ್ಯಾರ್ಥಿಗಳು ಕಾರಿನಲ್ಲೇ ಕೊನೆಯುಸಿರೆಳೆದಿದ್ದಾರೆ.

ವಿಷಯ ತಿಳಿದ ತಕ್ಷಣ ಕೊಳ್ಳೇಗಾಲ ಡಿವೈಎಸ್‌ಪಿ ಧರ್ಮೇಂದ್ರ, ಸರ್ಕಲ್ ಇನ್ಸ್‌ಪೆಕ್ಟರ್ ಶಿವಮಾದಪ್ಪ, ಕೊಳ್ಳೇಗಾಲ ಪಟ್ಟಣ ಠಾಣೆ ಸಬ್ ಇನ್ಸ್‌ಪೆಕ್ಟರ್ ವರ್ಷಾ, ಗ್ರಾಮಾಂತರ ಠಾಣೆ ಸಬ್ ಇನ್ಸ್‌ಪೆಕ್ಟರ್ ಸುಪ್ರೀತ್ ಅವರು ಸ್ಥಳಕ್ಕೆ ದೌಡಾಯಿಸಿ ಸ್ಥಳೀಯರ ಸಹಕಾರದೊಂದಿಗೆ ಕಾರಿನಲ್ಲಿದ್ದ ಮೃತದೇಹಗಳನ್ನು ಹೊರ ತೆಗೆದಿದ್ದಾರೆ. ಕ್ರೇನ್ ಸಹಕಾರದಿಂದ ಹಳ್ಳಕ್ಕೆ ಬಿದ್ದಿದ್ದ ಟಿಪ್ಪರ್ ಮತ್ತು ಕಾರನ್ನು ಮೇಲೆತ್ತಲಾಯಿತು. ಮೃತದೇಹಗಳನ್ನು ಕೊಳ್ಳೇಗಾಲ ಉಪ ವಿಭಾಗದ ಆಸ್ಪತ್ರೆಯಲ್ಲಿ ಇರಿಸಲಾಗಿದೆ. ಘಟನಾ ಸ್ಥಳಕ್ಕೆ ದಕ್ಷಿಣ ವಲಯ ಡಿಐಜಿ ಬೋರಲಿಂಗಯ್ಯ, ಚಾಮರಾಜನಗರ ಎಸ್ಪಿ ಕವಿತಾ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಕಾರಿಗೆ ಡಿಕ್ಕಿ ಹೊಡೆದ ಟಿಪ್ಪರ್ ಮಂಡ್ಯ ಜಿಲ್ಲೆ ಪಾಂಡವಪುರದ್ದಾಗಿದ್ದು, ಟಿಪ್ಪರ್ ಚಾಲಕ ಮಂಜುನಾಥ್‌ನನ್ನು ಬಂಧಿಸಿರುವ ಕೊಳ್ಳೇಗಾಲ ಗ್ರಾಮಾಂತರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಬಿ–ಖಾತಾ ನೀಡುವ ಅಭಿಯಾನಕ್ಕೆ ಚಾಲನೆ

ನಿಟ್ಟಿನಲ್ಲಿ ಸರ್ಕಾರ ಆದೇಶ ಹೊರಡಿಸಿರುವ ಕಾರಣ, ರಾಜ್ಯಾದ್ಯಂತ ಎಲ್ಲಾ ಅನಧಿಕೃತ ಆಸ್ತಿಗಳನ್ನು ಅಧಿಕೃತಗೊಳಿಸುವ ಬಿ–ಖಾತಾ ಪ್ರಕ್ರಿಯೆಯನ್ನು ಆರಂಭಿಸಲಾಗಿದೆ ಎಂದರು.

ಮಧ್ಯವರ್ತಿಗಳ ಹಾವಳಿ ತಪ್ಪಿಸಿ, ಕಟ್ಟುನಿಟ್ಟಿನ ಕ್ರಮದ ಮೂಲಕ ಯಾವುದೇ ಲೋಪವಾಗದಂತೆ ಈ ಅಭಿಯಾನ ನಡೆಸಬೇಕು. ಸಾರ್ವಜನಿಕರ ಬಳಿ ಲಭ್ಯವಿರುವ ದಾಖಲೆಗಳನ್ನು ಪಡೆದು, ಸರ್ಕಾರ ನಿಗದಿಪಡಿಸಿರುವ ಶುಲ್ಕ ಪಾವತಿಸಿಕೊಂಡು ಬಿ–ಖಾತಾ ಪತ್ರ ನೀಡಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು. ಇದರಿಂದ ಸ್ಥಳೀಯ ಸಂಸ್ಥೆಗಳಿಗೂ ಆರ್ಥಿಕ ಸಂಪನ್ಮೂಲ ಕ್ರೋಢೀಕರಣವಾಗಲಿದ್ದು, ಪಟ್ಟಣ ಪಂಚಾಯತಿ, ಪುರಸಭೆ, ನಗರಸಭೆ, ಮಹಾನಗರಪಾಲಿಕೆಗಳಲ್ಲಿ ಮೂಲ ಸೌಲಭ್ಯಗಳ ಕಲ್ಪಿಸಲು ಅನುಕೂಲವಾಗಲಿದೆ ಎಂದರು.

ಸಾರ್ವಜನಿಕರು ಈ ಅವಕಾಶವನ್ನು ಬಳಸಿಕೊಂಡು ತಮ್ಮ ಆಸ್ತಿಗಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಸಲ್ಲಿಸಿ, ಬಿ–ಖಾತಾ ಪತ್ರ ಪಡೆಯುವ ಮೂಲಕ ಅಧಿಕೃತ ಆಸ್ತಿಗಳ ಪಟ್ಟಿಗೆ ಸೇರಿಸಿಕೊಳ್ಳಬೇಕೆಂದು ಡಾ.ಹೆಚ್.ಸಿ.ಮಹದೇವಪ್ಪ ಇದೇ ಸಂದರ್ಭ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಶಾಸಕರಾದ ತನ್ವೀರ್ ಸೇಠ್, ಟಿ.ಎಸ್.ಶ್ರೀವತ್ಸ ಕೆ.ಹರೀಶ್ ಗೌಡ, ವಿಧಾನಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಮೈಸೂರು ಮಹಾನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್, ಪಾಲಿಕೆ ಉಪ ಆಯುಕ್ತ (ಕಂದಾಯ) ಸೋಮಶೇಖರ್, ಎಲ್ಲಾ ವಲಯ ಕಚೇರಿಗಳ ವಲಯಾಧಿಕಾರಿಗಳು, ನಗರಸಭೆ ಹಾಗೂ ಪಟ್ಟಣ ಪಂಚಾಯತಿಗಳ ಮುಖ್ಯಸ್ಥರು ಭಾಗವಹಿಸಿದ್ದರು.

ಡಿ.ಕೆ.ಶಿವಕುಮಾರ್ ಕೂಡ ಸಿಎಂ ಆಗುತ್ತಾರೆ

ಡಿ.ಕೆ.ಶಿವಕುಮಾರ್ ಉಪ ಮುಖ್ಯಮಂತ್ರಿಯಾಗಿದ್ದಾರೆ. ಇಂತಹ ಸಂದರ್ಭದಲ್ಲಿ ನಡೆಯುತ್ತಿ ರುವ ಈಗಿನ ಬೆಳವಣಿಗೆಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರು.

ಆದರೆ ಸಿದ್ದರಾಮಯ್ಯರಂತೆ ಡಿ.ಕೆ.ಶಿವಕುಮಾರ್‌ಗೂ ಮುಖ್ಯಮಂತ್ರಿ ಸ್ಥಾನ ಒಲಿಯಬಹುದು. ಈ ವಿಚಾರವನ್ನು ನಾನು ಹಲವು ಬಾರಿ ಸ್ಪಷ್ಟಪಡಿಸಿದ್ದೇನೆ. ಹೆಚ್.ಡಿ.ಕುಮಾರಸ್ವಾಮಿ ಅವರು ಮೈಸೂರಿನಲ್ಲಿ ಮೊನ್ನೆ ನಡೆಸಿದ ಸಭೆಗೆ ಗೈರು ಹಾಜರಾದ ಬಗ್ಗೆ ಪ್ರತಿಕ್ರಿಯೆ ನೀಡಿದ ಜಿ.ಟಿ.ದೇವೇಗೌಡರು, ನನ್ನ ಕ್ಷೇತ್ರ ಬಹಳ ದೊಡ್ಡದಿದೆ. ಜನರ ಕಷ್ಟಗಳನ್ನು ಆಲಿಸಲು ಪ್ರವಾಸದಲ್ಲಿರುವ ಕಾರಣ ರಾಜಕೀಯ ಸಭೆ–ಸಮಾರಂಭಗಳಿಂದ ದೂರ ಇದ್ದೇನೆ ಎಂದು ಸ್ಪಷ್ಟನೆ ನೀಡಿದರು. ಮುಂಬರುವ ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯಿತಿ ಚುನಾವಣೆಯ ಪ್ರಚಾರದಲ್ಲಿ ಭಾಗಿಯಾಗುತ್ತೀರಾ ಎಂಬ ಪ್ರಶ್ನೆಗೆ, ಚುನಾವಣೆ ಬಂದಾಗ ಈ ಬಗ್ಗೆ ನಿರ್ಧರಿಸುತ್ತೇನೆ ಎಂದು ಶಾಸಕ ಜಿ.ಟಿ.ದೇವೇಗೌಡರು ತಿಳಿಸಿದರು.

ಪಾಠ ಮಾಡುವಾಗ ಮೊಬೈಲ್ ಮುಟ್ಟಬಾರದು!

ಒಂದು ತಿಂಗಳ ಒಳಗಾಗಿ ಎಲ್ಲಾ ಸರ್ಕಾರಿ ಶಾಲೆಗಳಿಗೆ ಖಾತೆ ಮಾಡಿರಬೇಕು. ಮೂರೂ ಇಲಾಖೆಯ ಅಧಿಕಾರಿಗಳು ಸಮನ್ವಯತೆಯಿಂದ ಈ ಕಾರ್ಯ ಮಾಡಿ ಮುಗಿಸಬೇಕು ಎಂದು ಆದೇಶಿಸಿದರು.

ಬಹಳಷ್ಟು ಗ್ರಾಮಗಳಲ್ಲಿ ಸ್ಮಶಾನಕ್ಕಾಗಿ ಜಾಗ ಮೀಸಲಿಡಲಾಗಿದೆ. ಅದರೆ ಇಲ್ಲಿ ಕೂಡ ಸ್ಮಶಾನ ಜಾಗ ಅತಿಕ್ರಮಿಸಿಕೊಳ್ಳುವ, ಒತ್ತುವರಿ ಮಾಡುವ ಪ್ರಯತ್ನ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಸ್ಮಶಾನ ಜಾಗ ಗುರುತಿಸಿ ಕಾಂಪೌಂಡ್ ಅಥವಾ ತಂತಿ ಬೇಲಿ ಹಾಕಿಸಬೇಕು ಎಂದು ಹೇಳಿದರು.

ಶಿಕ್ಷಕರು ಮೊಬೈಲ್ ಬಳಸಬಾರದು: ಶಾಲೆಗಳಲ್ಲಿ ಶಿಕ್ಷಕರು ಪಾಠದ ವೇಳೆಯೂ ಮೊಬೈಲ್‌ನಲ್ಲಿ ತಲ್ಲೀನರಾಗಿರುತ್ತಾರೆ. ಈ ಬಗ್ಗೆ ಬಹಳಷ್ಟು ಗ್ರಾಮಗಳಿಂದ ನನಗೆ ದೂರು ಬಂದಿದೆ. ಮೊಬೈಲ್ ಬಳಸಬೇಡಿ ಎಂದು ಪಾಠ ಹೇಳಬೇಕಾದ ಶಿಕ್ಷಕರೇ ಅತಿಯಾಗಿ ಮೊಬೈಲ್ ಬಳಸುತ್ತಿದ್ದಾರೆ. ಶಿಕ್ಷಕರು ಯಾವಾಗಲೂ ಮೊಬೈಲ್ ಹಿಡಿದಿದ್ದರೆ ಏನು ಪಾಠ ಮಾಡುತ್ತಾರೆ ಎಂದು ಪ್ರಶ್ನಿಸಿದ ಜಿ.ಟಿ.ದೇವೇಗೌಡರು, ಇನ್ನು ಮುಂದೆ ಪಾಠದ ವೇಳೆ ಮೊಬೈಲ್ ಬಳಸದಂತೆ ಎಲ್ಲಾ ಶಾಲಾ ಶಿಕ್ಷಕರಿಗೆ ಸೂಚನೆ ನೀಡಬೇಕು ಎಂದು ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಹಾಸ್ಟೆಲ್‌ನಲ್ಲಿ ಊಟ ಮಾಡಿ: ಮೈಸೂರು ತಾಲೂಕಿನ 30 ಹಾಸ್ಟೆಲ್ ಬಗ್ಗೆ ಮಾಹಿತಿ ಪಡೆದ ಜಿ.ಟಿ.ದೇವೇಗೌಡರು, ಹಾಸ್ಟೆಲ್‌ಗಳಲ್ಲಿ ಗುಣಮಟ್ಟದ ಆಹಾರ ನೀಡಬೇಕು. ಈ ಹಿನ್ನೆಲೆಯಲ್ಲಿ ಅಧಿಕಾರಿಗಳು ಹಾಸ್ಟೆಲ್‌ಗಳಿಗೆ ದಿಢೀರ್ ಭೇಟಿ ನೀಡಿ ಮಕ್ಕಳೊಂದಿಗೆ ಊಟ ಮಾಡಬೇಕು. ಈ ಮೂಲಕ ಆಹಾರದ ಗುಣಮಟ್ಟ ಖಾತ್ರಿಪಡಿಸಿಕೊಳ್ಳಬೇಕು. ಜೊತೆಗೆ ಮಕ್ಕಳ ಅಭಿಪ್ರಾಯ ಪಡೆಯಲು ತಿಂಗಳಿಗೊಮ್ಮೆ ಸಭೆ ನಡೆಸಬೇಕು. ಒಂದು ವೇಳೆ ಗುಣಮಟ್ಟದ ಆಹಾರ ನೀಡುತ್ತಿಲ್ಲ ಎಂದು ದೃಢಪಟ್ಟರೆ ಆಹಾರ ತಯಾರಕರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು.

ಗ್ರಾಮೀಣ ಪ್ರದೇಶದ ಮಕ್ಕಳು ಕಲಿಕೆಗಾಗಿ ನಗರಕ್ಕೆ ಬಂದು ಹಾಸ್ಟೆಲ್‌ನಲ್ಲಿ ವ್ಯಾಸಂಗ ಮಾಡುತ್ತಾರೆ. ಇಂತಹ ಮಕ್ಕಳಿಗೆ ಊಟ ಹಾಗೂ ಸವಲತ್ತಿನಲ್ಲಿ ಅನ್ಯಾಯ ಮಾಡಬಾರದು. ಸರ್ಕಾರ ನೀಡಿರುವ ಸೌಲಭ್ಯ ಅವರಿಗೆ ಕಲ್ಪಿಸಬೇಕು ಎಂದರು.

ಶಿಕ್ಷಣದ ಮುಖ್ಯವಾಹಿನಿಗೆ ತನ್ನಿ: ಈಗಿನ ಶಿಕ್ಷಣ ವ್ಯವಸ್ಥೆಯಲ್ಲಿ ಶಾಲಾ ಕಾಲೇಜಿಗೆ ಹೋಗಲು ಸಮರ್ಪಕ ಕೆಎಸ್‌ಆರ್ ಟಿಸಿ ಬಸ್, ಶಾಲೆಗಳಲ್ಲಿ ಶೌಚಾಲಯ, ಆಟದ ಮೈದಾನ, ಬಿಸಿಯೂಟ ಸೇರಿದಂತೆ ಹಲವು ಮೂಲಭೂತ ಸೌಕರ್ಯ ಕಲ್ಪಿಸಲಾಗಿದೆ. ಸರ್ಕಾರದಿಂದ ಇಷ್ಟೆಲ್ಲಾ ಸೌಲಭ್ಯ ಕೊಟ್ಟರೂ ಮಕ್ಕಳು ಶಾಲೆಯಿಂದ ಹೊರಗುಳಿಯಬಾರದು. ಈ ಹಿನ್ನೆಲೆ ಪೋಷಕರು ಹಾಗೂ ಮಕ್ಕಳಿಗೆ ಅಕ್ಷರದ ಮಹತ್ವ ತಿಳಿಸಿ ಶಿಕ್ಷಣದ ಮುಖ್ಯವಾಹಿನಿಗೆ ತರಬೇಕು ಎಂದು ಜಿ.ಟಿ. ದೇವೇಗೌಡರು ತಿಳಿಸಿದರು.

ಉಚಿತ ವೈದ್ಯಕೀಯ ಸೌಲಭ್ಯದ ಬಗ್ಗೆ ಮಾಹಿತಿ ನೀಡಿ: ಪ್ರತಿಯೊಂದು ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತ ವೈದ್ಯಕೀಯ ಸೌಲಭ್ಯದ ಬಗ್ಗೆ ರೋಗಿಗಳಿಗೆ ತಿಳಿಸಬೇಕು. ಈ ಹಿನ್ನೆಲೆ ಆಸ್ಪತ್ರೆಯಲ್ಲಿ ದೊಡ್ಡ ಫಲಕ ಹಾಗೂ ಭಿತ್ತಿಪತ್ರದ ಮೂಲಕ ಮಾಹಿತಿ ನೀಡಬೇಕು. ಬಹಳಷ್ಟು ಜನರಿಗೆ ಸರ್ಕಾರದ ಉಚಿತ ವೈದ್ಯಕೀಯ ಸೌಲಭ್ಯದ ಬಗ್ಗೆ ಮಾಹಿತಿ ಇಲ್ಲದೆ ಖಾಸಗಿ ಆಸ್ಪತ್ರೆಗೆ ಹೋಗುತ್ತಾರೆ. ಮೊದಲೇ ಆರ್ಥಿಕವಾಗಿ ಸಂಕಷ್ಟದಲ್ಲಿ ಇರುವ ಬಡವರಿಗೆ ಖಾಸಗಿ ಆಸ್ಪತ್ರೆಗೆ ಹೋದಾಗ ಚಿಕಿತ್ಸೆಗಾಗಿ ಸಾಲ ಮಾಡುವ ಪರಿಸ್ಥಿತಿ ಬರುತ್ತದೆ ಎಂದರು.

ಆದ ಕಾರಣ ಬಿಪಿಎಲ್ ಕಾರ್ಡ್, ಎಪಿಎಲ್ ಕಾರ್ಡ್, ಯಶಸ್ವಿನಿ ಹಾಗೂ ಆಯುಷ್ಮಾನ್ ಕಾರ್ಡ್‌ನಿಂದ ಏನೇನು ವೈದ್ಯಕೀಯ ಸೌಲಭ್ಯ ಸಿಗುತ್ತದೆ ಎಂದು ಜನರಿಗೆ ತಿಳಿಸಬೇಕು ಎಂದು ಜಿ.ಟಿ.ದೇವೇಗೌಡರು ಹೇಳಿದರು.

ಪಂಪ್‌ಸೆಟ್ ಸಕ್ರಮಗೊಳಿಸಿ: ರೈತರು ಕೃಷಿ ಪಂಪ್‌ಸೆಟ್‌ಗಳಿಗೆ ಅನಧಿಕೃತವಾಗಿ ವಿದ್ಯುತ್ ಸಂಪರ್ಕ ಪಡೆದಿರುತ್ತಾರೆ. ಇದರಿಂದ ವಿದ್ಯುತ್ ಏರಿಳಿತ ಉಂಟಾಗಿ ಪಂಪ್‌ಸೆಟ್‌ಗಳು ಸುಟ್ಟು ಹೋಗುತ್ತವೆ. ಈ ಹಿನ್ನೆಲೆ ಸರ್ಕಾರ ನಿಗದಿ ಮಾಡಿರುವ ಹಣ ಕಟ್ಟಿಸಿಕೊಂಡು ಅನಧಿಕೃತ ಪಂಪ್‌ಸೆಟ್‌ಗಳನ್ನು ಅಧಿಕೃತಗೊಳಿಸಿ. ಮೀಟರ್ ಅಳವಡಿಸುವುದರಿಂದ ಸರ್ಕಾರಕ್ಕೂ ಆದಾಯ ಬರುತ್ತದೆ ಎಂದು ಅಭಿಪ್ರಾಯಪಟ್ಟರು.

ಸಾಮಾಜಿಕ ಅರಣ್ಯ ಯೋಜನೆಯಲ್ಲಿ ಹಸಿರು ವನ ನಿರ್ಮಿಸಬೇಕು. ನಗರ ಸಭೆ ಹಾಗೂ ಪಟ್ಟಣ ಪಂಚಾಯಿತಿಗಳು ಕಸ ಸಂಗ್ರಹ ಹಾಗೂ ಸ್ವಚ್ಛತೆಗೆ ಕ್ರಮ ವಹಿಸಬೇಕು, ಸರ್ಕಾರ ಸೂಚನೆ ನೀಡಿರುವಂತೆ ಬಿ ಖಾತಾ ಹಾಗೂ ಇ ಖಾತಾ ಮಾಡಿಕೊಡಬೇಕು ಎಂದು ಜಿ.ಟಿ.ದೇವೇಗೌಡರು ಸೂಚನೆ ನೀಡಿದರು. ತಾಲೂಕು ಯೋಜನಾಧಿಕಾರಿ ಸುರೇಶ್, ತಹಶೀಲ್ದಾರ್ ಮಹೇಶ್ ಕುಮಾರ್, ಎಕ್ಸಿಕ್ಯೂಟಿವ್ ಆಫೀಸರ್ ಕೃಷ್ಣ ಸೇರಿದಂತೆ ಹಲವು ಅಧಿಕಾರಿಗಳು ಹಾಜರಿದ್ದರು.

ಬಡವರಿಗೆ ಕಣ್ಣೀರು ಹಾಕಿಸಿ, ಪ್ರಯಾಗ್ ರಾಜ್‌ನ ತ್ರಿವೇಣಿ ಸಂಗಮದಲ್ಲಿ ಮಿಂದೆದ್ದರೆ ಪಾಪ ಪರಿಹಾರ ಆಗಲ್ಲ ಎಂದು ಶಾಸಕ ಜಿ.ಟಿ.ದೇವೇಗೌಡರು ಅಧಿಕಾರಿಗಳಿಗೆ ಎಚ್ಚರಿಸಿದರು. ಜನರ ಸೇವೆ ಮಾಡಲು ನಿಮಗೆ ಸರ್ಕಾರದಲ್ಲಿ ಸ್ಥಾನ ಸಿಕ್ಕಿದೆ. ದೇವರು ಕೊಟ್ಟ ಈ ಅವಕಾಶ ಬಳಸಿಕೊಂಡು ಜನರ ಸೇವೆ ಮಾಡಿ ಎಂದು ಸಲಹೆ ನೀಡಿದರು.

ಸರ್ಕಾರಿ ಕೆಲಸ ದೇವರ ಕೆಲಸ ಎಂಬ ಮನೋಭಾವದಿಂದ ಕೆಲಸ ಮಾಡಿದರೆ ದೇವರು ಮೆಚ್ಚುತ್ತಾನೆ. ಅದು ಬಿಟ್ಟು ಅನ್ಯಾಯ ಮಾಡಿ, ದೇವಾಲಯಕ್ಕೆ ಹೋಗಿ ದೇವರಿಗೆ ವಿಶೇಷ ಪೂಜೆ ಸಲಿಸಿದರೆ ಯಾವುದೇ ಪ್ರಯೋಜನವಿಲ್ಲ ಎಂದು ಅಭಿಪ್ರಾಯಪಟ್ಟರು.

ಅಧಿಕಾರಿಗಳು ಮನಸ್ಸು ಮಾಡಿದರೆ ಯಾವ ಕೆಲಸವೂ ದೊಡ್ಡದ್ದಲ್ಲ. ಹಣ ಸಂಪಾದಿಸುವ ಸ್ಥಾನಕ್ಕೆ ಹೋಗಬೇಕು ಎಂದು ಹಪಹಪಿಸದೆ ಇರುವ ಸ್ಥಾನದಲ್ಲಿ ತೃಪ್ತಿಯಿಂದ ಕೆಲಸ ಮಾಡಿ ಎಂದು ಸಲಹೆಯಿತ್ತರು

ಬಿ–ಖಾತಾ ಪಡೆಯುವ ವಿಧಾನ

ಬಡಾವಣೆಗಳಲ್ಲಿನ ಆಸ್ತಿಗಳಿಗೆ ಇ–ಖಾತಾ ಪತ್ರ ನೀಡುತ್ತಿರಲಿಲ್ಲ. ಆದರೆ, ಆದಾಯ ಸಂಗ್ರಹ ಉದ್ದೇಶದಿಂದ ಸರ್ಕಾರವು ಅನಧಿಕೃತ ಬಡಾವಣೆಗಳ ನಿವೇಶನ ಹಾಗೂ ಮನೆಗಳನ್ನು ತೆರಿಗೆ ವ್ಯಾಪ್ತಿಗೆ ತರಲು ಬಿ–ಖಾತಾ ನೀಡುವ ಸಲುವಾಗಿ ಕರ್ನಾಟಕ ಮುನ್ಸಿಪಲ್ ಕಾಯ್ದೆ ಮತ್ತು ನಿಯಮಗಳಿಗೆ 2025ರ ಫೆಬ್ರವರಿಯಲ್ಲಿ ತಿದ್ದುಪಡಿ ತಂದಿದೆ.

ಅದರಂತೆ 2024ರ ಸೆಪ್ಟೆಂಬರ್ 10ರ ಪೂರ್ವದಲ್ಲಿ ನೋಂದಣಿಯಾದ ಅನಧಿಕೃತ ಸ್ವತ್ತುಗಳಿಗೆ ಬಿ–ಖಾತಾ ನೀಡಲು ಅವಕಾಶ ಕಲ್ಪಿಸಿದ್ದು, ಇದರಿಂದ ಅನಧಿಕೃತ ಆಸ್ತಿಗಳನ್ನು, ಆಸ್ತಿ ತೆರಿಗೆ ವ್ಯಾಪ್ತಿಗೊಳಪಡಿಸಿ ಪ್ರತ್ಯೇಕ ವಹಿ (ಬಿ ರಿಜಿಸ್ಟ್ರಾರ್)ಯಲ್ಲಿ ದಾಖಲಿಸಲು ಅವಕಾಶ ಕಲ್ಪಿಸಿದೆ. ಇದರಿಂದ ನಗರ ಸ್ಥಳೀಯ ಸಂಸ್ಥೆಗಳಿಗೆ ಆದಾಯ ಸಂಗ್ರಹಕ್ಕೆ ಅನುಕೂಲವಾಗುವುದಲ್ಲದೆ, ಸಾರ್ವಜನಿಕರಿಗೆ ತಮ್ಮ ಆಸ್ತಿಯ ಅಧಿಕೃತ ದಾಖಲೆ ಬಿ–ಖಾತಾ ದೊರೆಯುವುದರಿಂದ ವಹಿವಾಟು ನಡೆಸಲು ಅನುಕೂಲವಾಗಲಿದೆ.

ಮೈಸೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಸುಮಾರು 25 ಸಾವಿರಕ್ಕೂ ಹೆಚ್ಚು ಅನಧಿಕೃತ ಆಸ್ತಿಗಳ ಅಂದಾಜಿಸಲಾಗಿದ್ದು, ಅಧಿಕಾರಿಗಳು ಅನಧಿಕೃತ ಬಡಾವಣೆಗಳಲ್ಲಿ ಪ್ರತಿ ಮನೆ ಮನೆಗೆ ಭೇಟಿ ನೀಡಿ, ಕರಪತ್ರಗಳನ್ನು ಹಂಚಿ ಪ್ರಚಾರ ಮಾಡುವ ಮೂಲಕ 2025ರ ಮೇ 10ರೊಳಗಾಗಿ ಅರ್ಹ ಆಸ್ತಿಗಳ ಮಾಲೀಕರಿಂದ ಲಭ್ಯವಿರುವ ದಾಖಲೆಗಳನ್ನು ಪಡೆದು ಸಂಬಂಧಪಟ್ಟ ವಲಯಾಧಿಕಾರಿಗಳ ಮೂಲಕ ಬಿ–ಖಾತಾ ನೀಡಲು ಕ್ರಮ ವಹಿಸಲಾಗಿದೆ.

ಬಿ–ಖಾತಾ ಪತ್ರಕ್ಕೆ ಸಲ್ಲಿಸಬೇಕಾದ ದಾಖಲೆಗಳು: ಬಿ–ಖಾತಾ ರಿಜಿಸ್ಟ್ರಾರ್‌ನಲ್ಲಿ ಆಸ್ತಿ ದಾಖಲೆ ನಮೂದಿಸಲು ಸದರಿ ಆಸ್ತಿಗೆ ಸಂಬಂಧಿಸಿದಂತೆ ಮಾಲೀಕತ್ವ ಸಾಬೀತು ಪಡಿಸುವ 2024ರ ಸೆಪ್ಟೆಂಬರ್ 10ರೊಳಗೆ ನೋಂದಾಯಿತ ಮಾರಾಟ ಪತ್ರ/ದಾನ ಪತ್ರ/ ವಿಭಾಗ ಪತ್ರ/ ಹಕ್ಕು ಖುಲಾಸೆ ಪತ್ರ, ಪ್ರಸಕ್ತ ಸಾಲಿನವರೆಗೆ ಋಣಭಾರ ರಾಹಿತ್ಯ ಪ್ರಮಾಣ ಪತ್ರ (ಇಸಿ), ಚಾಲ್ತಿ ಸಾಲಿನ ಆಸ್ತಿ ತೆರಿಗೆ ಪಾವತಿ ರಶೀದಿ ಪತ್ರ, ಸ್ವತ್ತಿನ ಮಾಲೀಕರು ಮತ್ತು ಸ್ವತ್ತಿನ ಫೋಟೋ ಹಾಗೂ ಸ್ವತ್ತಿನ ಮಾಲೀಕರ ಗುರುತಿನ ಪತ್ರಗಳನ್ನು ಸಂಬಂಧಪಟ್ಟ ಕಚೇರಿಗೆ ಸಲ್ಲಿಸಬಹುದಾಗಿದೆ.

ವಲಯ ಕಚೇರಿ ಅಧಿಕಾರಿಗಳ ಸಹಾಯವಾಣಿ ಸಂಖ್ಯೆ

ಬಿ–ಖಾತಾ ಪತ್ರ ಪಡೆಯಲು ಅನುಕೂಲವಾಗುವಂತೆ ಪಾಲಿಕೆಯ ಆಯಾಯ ವ್ಯಾಪ್ತಿಯ ವಲಯ ಕಚೇರಿ ಅಧಿಕಾರಿಗಳ (ಕಂದಾಯಾಧಿಕಾರಿಗಳು) ಸಹಾಯವಾಣಿ ಸಂಖ್ಯೆಯನ್ನು ನೀಡಲಾಗಿದೆ.

ವಲಯ ಕಚೇರಿ–1 ಸ್ವರ್ಣಲತಾ–9164354570
ವಲಯ ಕಚೇರಿ–2 ವೆಂಕಟೇಶ್–9448167687
ವಲಯ ಕಚೇರಿ–3 ಬಸವಣ್ಣ– 9008380777
ವಲಯ ಕಚೇರಿ–4 ಜೆ.ಆಶಾ– 9482732695
ವಲಯ ಕಚೇರಿ–5 ಪ್ರಸಾದ್– 9980283881
ವಲಯ ಕಚೇರಿ–6 ಅರಸು ಕುಮಾರಿ–9900630873
ವಲಯ ಕಚೇರಿ–7 ಲೋಕೇಶ್–9611075537
ವಲಯ ಕಚೇರಿ–8 ಉಮೇಶ್–9886732570
ವಲಯ ಕಚೇರಿ–9 ಜಾವದ್–7795046625

ಮೈಸೂರಲ್ಲಿ ವಿಶ್ವದರ್ಜೆ ಫಿಲ್ಮ್‌ಸಿಟಿ ನಿರ್ಮಾಣ

ಸೇರಿಕೊಂಡಿದೆ. ಸಂಪತ್ತಿನ ಈ ವಿಪರೀತ ಅಸಮಾನ ಹಂಚಿಕೆಯಿಂದ ಸಮಾಜದಲ್ಲಿ ಅಸಂತೋಷ ಹೆಚ್ಚುತ್ತಿದೆ. ಇದಕ್ಕೆ ಕಲಾ ಮಾಧ್ಯಮ ಆಗಿರುವ ಸಿನಿಮಾಗಳು ಪರಿಹಾರ ಹುಡುಕಬೇಕು. ಸಮಾಜವನ್ನು ಕಲಾ ಮಾಧ್ಯಮದ ಮೂಲಕ ಬೆಸೆಯಬೇಕು ಎಂದರು. ಡಾ.ರಾಜ್ ಕುಮಾರ್ ಅವರ ಸಿನಿಮಾಗಳಲ್ಲಿದ್ದ ಮೌಲ್ಯಗಳು ಮತ್ತು ಘನತೆ ಈಗಿನ ಸಿನಿಮಾಗಳಲ್ಲಿ ಕಾಣುತ್ತಿಲ್ಲ. ರಾಜ್‌ಕುಮಾರ್ ಸಿನಿಮಾಗಳಲ್ಲಿ ಸೌಹಾರ್ದ ಮತ್ತು ಮಾನವೀಯ ಮೌಲ್ಯಗಳು ತುಂಬಿರುತ್ತಿದ್ದವು. ಹೀಗಾಗಿ ಸರ್ವರಿಗೂ ಇವರ ಸಿನಿಮಾಗಳು ಇಷ್ಟ ಆಗುತ್ತಿದ್ದವು ಎಂದು ವಿವರಿಸಿದರು.

ಮೌಢ್ಯಗಳನ್ನು ಬಿತ್ತುವ, ಸಂವಿಧಾನದ ಮೌಲ್ಯಗಳಿಗೆ ವಿರುದ್ಧವಾದ ಸಿನಿಮಾಗಳು ಸಮಾಜಕ್ಕೆ ಒಳ್ಳೆಯದಲ್ಲ. ಬಸವಣ್ಣನವರು ಕರ್ಮ ಸಿದ್ಧಾಂತವನ್ನು ತಿರಸ್ಕರಿಸಿದ್ದರು. ಸಿನಿಮಾಗಳು ಮತ್ತೆ ಮೌಢ್ಯಗಳನ್ನು ಬಿತ್ತುವುದಕ್ಕೆ ಹೋಗಬಾರದು ಎಂದರು. ಈಗ ತಂತ್ರಜ್ಞಾನ ಬೆಳೆದು ಕೃತಕ ಬುದ್ಧಿಮತ್ತೆವರೆಗೂ ಬೆಳೆದು ಬಂದಿದೆ. ನಮ್ಮ ಬದುಕನ್ನು ಪ್ರತಿಬಿಂಬಿಸುವ, ನಮ್ಮ ತಳಮಳಗಳಿಗೆ ಪರಿಹಾರ ಹುಡುಕುವ ಸಿನಿಮಾಗಳು ಬಂದಾಗ ಅಂತಹ ಸಿನಿಮಾಗಳು ಶಾಶ್ವತವಾಗಿ ಸಮಾಜದಲ್ಲಿ ಉಳಿಯುತ್ತವೆ ಎಂದರು.

'ಗ್ರೇಟರ್ ಮೈಸೂರು' ಗ್ಯಾರಂಟಿ!

ಬಜೆಟ್‌ನಲ್ಲಿ ಈ ಸಂಬಂಧ ಘೋಷಣೆ ಮಾಡುತ್ತಾರೆ ಎಂಬ ಅಚಲ ವಿಶ್ವಾಸವಿದೆ ಎಂದರು. ಬಜೆಟ್ ಮಂಡನೆಯಾಗುತ್ತಿರುವ ಹಿನ್ನೆಲೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಏನೆಲ್ಲಾ ಕೆಲಸ ಆಗಬೇಕು, ಕುಡಿಯುವ ನೀರಿನ ಸಮಸ್ಯೆ ಎಲ್ಲಿದೆ ಎಂಬ ಹಲವು ಮಾಹಿತಿಯನ್ನು ಇಂದಿನ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪಡೆಯುತ್ತೇನೆ. ತರುವಾಯ ಇದರ ಪರಿಹಾರಕ್ಕೆ ಸರ್ಕಾರದ ಮಟ್ಟದಲ್ಲಿ ಪ್ರಯತ್ನಿಸುತ್ತೇನೆ ಎಂದರು.

ಮುಡಾ ವ್ಯಾಪ್ತಿಯಲ್ಲಿದ್ದ ಬಡಾವಣೆಗಳನ್ನು ಈಗ ನಗರಸಭೆ ಹಾಗೂ ಪಟ್ಟಣ ಪಂಚಾಯಿತಿಗಳಿಗೆ ಹಸ್ತಾಂತರ ಮಾಡಲಾಗಿದೆ. ಆದರೆ ಈ ಬಡಾವಣೆಗಳ ಅಭಿವೃದ್ಧಿಗೆ ಆಯಾಯ ಸ್ಥಳೀಯ ಸಂಸ್ಥೆಗಳಲ್ಲಿ ಹಣವಿಲ್ಲ. ಈ ವಿಚಾರವನ್ನು ಕೂಡ ಸಿದ್ದರಾಮಯ್ಯ ಗಮನಕ್ಕೆ ತಂದಿದ್ದೇನೆ ಎಂದರು. ಸಿದ್ದರಾಮಯ್ಯ ಅವರು ಮಂಡಿಸುವ ಬಜೆಟ್‌ನಲ್ಲಿ ಬಹಳಷ್ಟು ನಿರೀಕ್ಷೆಗಳಿವೆ. ನನ್ನ ಕ್ಷೇತ್ರದ ಕುಡಿಯುವ ನೀರಿನ ಹಾಗೂ ಒಳ ಚರಂಡಿ ಸಮಸ್ಯೆಗೆ ಅಗತ್ಯ ಹಣ ನೀಡಲಿದ್ದಾರೆ ಎಂಬ ವಿಶ್ವಾಸವಿದೆ ಎಂದು ಹೇಳಿದರು.

ನಿಮ್ಮ ನಟ್ಟು ಬೋಲ್ಟ್ ಟೈಟ್ ಮಾಡುವೆ: ಚಿತ್ರರಂಗಕ್ಕೆ ಡಿಕೆಶಿ ಎಚ್ಚರಿಕೆ

ಬೆಂಗಳೂರು: ಬೆಂಗಳೂರು ಚಲನಚಿತ್ರೋತ್ಸವವನ್ನು ಡಿಸಿಎಂ ಡಿಕೆ ಶಿವಕುಮಾರ್ ಇಂದು ಉದ್ಘಾಟಿಸಿದರು. ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಅವರು, ನನಗೆ ಚಲನಚಿತ್ರ ವಾಣಿಜ್ಯ ಮಂಡಳಿ, ಈ ಸಿನಿಮಾ ನಟರ ಬಗ್ಗೆ ನನಗೆ ಬಹಳ ಸಿಟ್ಟು ಬಂದುಬಿಟ್ಟಿದೆ, ಏಕೆಂದರೆ, ಕೋವಿಡ್ ಮುಗಿದ ಸಮಯದಲ್ಲಿ ನಾವು ನಮ್ಮ ಜಲ ನಮ್ಮ ಹಕ್ಕು ಎಂಬ ಜಾಥಾ ಮಾಡಿದ್ದೆವು, ನಮ್ಮ ಜನರಿಗೆ ನೀರು ಕೊಡುವ ಉದ್ದೇಶದಿಂದಾಗಿ ನಾವು, ಸಿದ್ದರಾಮಯ್ಯನವರು ಪಾದಯಾತ್ರೆ ಮಾಡಿದ್ದೆವು. ಆಗ ಸಾಧು ಕೋಕಿಲ ಮತ್ತು ದುನಿಯಾ ವಿಜಿ ಬಿಟ್ಟರೆ ಇನ್ಯಾರೂ ಸಹ ನಮಗೆ ಬೆಂಬಲ ಕೊಡಲಿಲ್ಲ ಅದಕ್ಕೆ ನಮ್ಮ ಸರ್ಕಾರ ಬಂದ ಕೂಡಲೇ ಸಾಧು ಕೋಕಿಲ ಅವರಿಗೆ ಅಕಾಡೆಮಿ ಅಧ್ಯಕ್ಷ ಸ್ಥಾನ ಕೊಟ್ಟೆವು. ಇನ್ನು ಮುಂದೆಯಾದರೂ ಸರಿಯಾಗಿ ನಡೆದುಕೊಳ್ಳಿ, ಕೇವಲ 20 ಜನಕ್ಕೆ ಸಿನಿಮಾ ಎಂಬುದು ಬೇಕಾಗಿರೋದಾ? ಸಿನಿಮಾ ಶೂಟಿಂಗ್‌ಗೆ ನಾವು ಅನುಮತಿ ಕೊಡಬೇಡಿ ಎಂದು ಹೇಳಿದರೆ, ಶೂಟಿಂಗ್ ನಡೆಯುವುದೇ ಇಲ್ಲ. ಆಗ ಏನು ಮಾಡ್ತೀರಿ? ಯಾರು ಯಾರಿಗೆ ಎಲ್ಲೆಲ್ಲಿ ನಟ್ಟು ಬೋಲ್ಟು ಟೈಟ್ ಮಾಡಬೇಕು ಎಂಬುದು ನನಗೆ ಗೊತ್ತಿದೆ ಎಂದು ಹೇಳಿದ್ದಾರೆ.

ಕಟ್ಟಡ ಕಾರ್ಮಿಕರ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ನಾಳೆಯಿಂದ ಅಹೋರಾತ್ರಿ ಧರಣಿ

ಮೈಸೂರು, ಮಾ.1(ಜಿಎ)–ಕಟ್ಟಡ ಕಾರ್ಮಿಕರು ಹಾಗೂ ಇನ್ನಿತರ ಕಾರ್ಮಿಕರ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಮಾ.3ರಿಂದ 7ರವರೆಗೆ ಸಿಐಟಿಯು ವತಿಯಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅಹೋರಾತ್ರಿ ಧರಣಿ ಆಯೋಜಿಸಲಾಗಿದೆ ಎಂದು ಪ್ರಧಾನ ಕಾರ್ಯದರ್ಶಿ ನವೀನ್‌ಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾ.3ರಂದು ಪಂಚಾಯಿತಿ ನೌಕರರು, ಮಾ.4ರಂದು ಬಿಸಿಯೂಟ ತಯಾರಕರು, ಮಾ.5ರಂದು ಕಟ್ಟಡ ನಿರ್ಮಾಣ ಕಾರ್ಮಿಕರು, ಮಾ.6ರಂದು ಕೈಗಾರಿಕಾ ಕಾಯಂ ಹಾಗೂ ಕಾಯಮ್ಮೇತರ ಕಾರ್ಮಿಕರು, ಅಸಂಘಟಿತ ಕಾರ್ಮಿಕರು, ಮಾ.7ರಂದು ಅಂಗನವಾಡಿ ನೌಕರರು ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಹೈಕೋರ್ಟ್ ತೀರ್ಪಿನಂತೆ 2012ರ ಅಧಿಸೂಚನೆ ಪ್ರಕಾರ ಕಟ್ಟಡ ಕಾರ್ಮಿಕರಿಗೆ ಶೈಕ್ಷಣಿಕ ಸಹಾಯಧನ ಬಿಡುಗಡೆಗೊಳಿಸಬೇಕು, ಹೊಸ ತಂತ್ರಜ್ಞಾನದಲ್ಲಿನ ತಾಂತ್ರಿಕ ತೊಂದರೆ ನಿವಾರಿಸಬೇಕು, ಮಹಿಳಾ ಕಟ್ಟಡ ಕಾರ್ಮಿಕರಿಗೆ ಕೆಲಸದ ಸ್ಥಳದಲ್ಲಿ ಸುರಕ್ಷತೆ ಹಾಗೂ ಪೌಷ್ಠಿಕಾಂಶಭರಿತ ಆಹಾರಕ್ಕಾಗಿ ಮಾಸಿಕ 3 ಸಾವಿರ ಪಾವತಿಸಬೇಕು, ತಾಯಿ ಮಗು ಆರೋಗ್ಯ ಭತ್ಯೆ 500 ರೂ. ಅನ್ನು ಸಾವಿರಕ್ಕೆ ಏರಿಸಬೇಕು ಎಬ ಮೊದ ಲಾದ ಬೇಡಿಕೆ ಈಡೇರಿಕೆಗೆ ಆಗ್ರಹಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಎಚ್.ಎಂ.ಬಸವಯ್ಯ, ವಿ.ಸೋಮಶಂಕರ್, ಕೆ.ಸಿ.ಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

ಅಭಿನಂದನೆ...



ಬೆಂಗಳೂರಿನ ಧಾರ್ಮಿಕ ದತ್ತಿ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಯತಿರಾಜ ಸಂಪತ್‌ಕುಮಾರ್ ಅವರನ್ನು ಮೇಲುಕೋಟೆ ಯೋಗನರಸಿಂಹಸ್ವಾಮಿ ದೇವಸ್ಥಾನದ ಪ್ರಧಾನ ಅರ್ಚಕರಾದ ನಾರಾಯಣ ಭಟ್ಟ ಮತ್ತು ಮೈಸೂರಿನ ಕಾಳಿದಾಸ ರಸ್ತೆಯಲ್ಲಿರುವ ಯದುಗಿರಿ ಯತಿರಾಜ ಶಾಖಾ ಮಠ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದ ಮುಖ್ಯಸ್ಥ ಕೆ.ಆರ್.ಯೋಗಾನರಸಿಂಹನ್ (ಮುರುಳಿ) ಅಭಿನಂದಿಸಿದರು. ಈ ಸಂದರ್ಭದಲ್ಲಿ ಆಯುಕ್ತರ ಸಹಾಯಕ ದಯಾನಂದ್ ಉಪಸ್ಥಿತರಿದ್ದರು.

ಖಜಾನೆ ಹಣ ಕೊಡಬೇಕಿಲ್ಲ, TDR ಪತ್ರ ಕೊಡಲಿ

ಸರ್ಕಾರಕ್ಕೆ ಯದುವೀರ್ ಆಗ್ರಹ



ಬೆಂಗಳೂರು: ಟಿಡಿಆರ್ ನೀಡಲು ಸರ್ಕಾರಕ್ಕೆ ಖರ್ಚೇನೂ ತಗಲುವುದಿಲ್ಲ, ಅದೊಂದು ಪ್ರಮಾಣ ಪತ್ರ ಅಷ್ಟೇ ಎಂದು ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ ಒಡೆಯರ್ ಹೇಳಿದ್ದಾರೆ.

ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸುಪ್ರೀಂಕೋರ್ಟ್‌ನಲ್ಲಿ ರಾಜ್ಯ ಸರ್ಕಾರಕ್ಕೆ ಹಿನ್ನಡೆಯಾಗಿದೆ. ಹಾಗೆಂದು ಒಡೆಯರ್ ಮನೆತನಕ್ಕೆ ಖುಷಿಯೇನೂ ಆಗಿಲ್ಲ, ಕಾನೂನು ನ್ಯಾಯವನ್ನು ಎತ್ತಿ ಹಿಡಿದಿದೆ ಅಷ್ಟೇ ಎಂದು ಹೇಳಿದರು.

ಸರ್ಕಾರ ಕಾನೂನು ಪ್ರಕ್ರಿಯೆಯಂತೆ ಕೆಲಸ ಮಾಡಿದರೆ ಎಲ್ಲರಿಗೂ ಅನುಕೂಲವಾಗುತ್ತದೆ. ಟಿಡಿಆರ್ ಕೊಡುವುದೆಂದರೆ ಅವರ ಖಜಾನೆಯಿಂದ ಒಂದು ರೂಪಾಯಿ ಕೊಡುವುದಲ್ಲ. ಕೇವಲ ಒಂದು ಸರ್ಟಿಫಿಕೇಟ್ ಕೊಡಬೇಕಾಗಿದೆ. ಇಷ್ಟು ಟಿಡಿಆರ್‌ನ ಮಾಲೀಕರು ನಾವು ಎಂದಷ್ಟೇ. ಅದರ ಮೂಲಕ ರಸ್ತೆ ಅಭಿವೃದ್ಧಿ, ಅಗಲೀಕರೂ ಮಾಡಬಹುದು. 2009ರಲ್ಲಿ ಟಿಡಿಆರ್ ಕೊಡುತ್ತೇವೆ ಎಂದು ಸರ್ಕಾರ ನಿರ್ಣಯ ಕೈಗೊಂಡಿತ್ತು. ಅಂದಿನಿಂದ ಇಂದಿನವರೆಗೆ 15 ವರ್ಷ ಸುಪ್ರೀಂ ಕೋರ್ಟ್‌ನಲ್ಲಿ ವಾದ ಮಾಡಿಕೊಂಡು ಬಂದಿದ್ದೇವೆ. ರಾಜ್ಯದಲ್ಲಿ ಎಲ್ಲೇ ಆಗಲಿ ಅಭಿವೃದ್ಧಿ ಕೆಲಸ ನಿರಂತರವಾಗಿ ನಡೆಯಬೇಕು. ರಾಜ್ಯ ಸರ್ಕಾರಕ್ಕೆ ಕೆಟ್ಟ ಹೆಸರು ಬರಬೇಕು ಎಂಬ ಯಾವುದೇ ದುರುದ್ದೇಶ ನಮಗೆ ಇಲ್ಲ. ರಾಜ್ಯ ಸರ್ಕಾರಕ್ಕೂ ಒಳ್ಳೆಯ ಹೆಸರು ಬರಬೇಕು. ಒಳ್ಳೆಯ ಕೆಲಸ ಮಾಡಬೇಕು ಎನ್ನುವುದು ನಮ್ಮ ಆಶಯವೂ ಆಗಿದೆ. 2009ರಲ್ಲಿ ಟಿಡಿಅರ್ ಕೊಟ್ಟು ರಸ್ತೆ ಅಗಲೀಕರಣ ಮಾಡುವ ಬಗ್ಗೆ ಸರ್ಕಾರ ಒಪ್ಪಿಕೊಂಡಿತ್ತು ರಾಜ್ಯ ಸರ್ಕಾರ ನಂತರ ಟಿಡಿಆರ್ ನೀಡಲು ನಿರಾಕರಿಸಿದೆ. ಸರ್ಕಾರ ಟಿಡಿಆರ್ ನೀಡದೆ, ಯಾವುದೇ ಪರಿಹಾರ ನೀಡದೆ ಬಳ್ಳಾರಿ ಮತ್ತು ಜಯಮಹಲ್ ರಸ್ತೆಗಳ ಅಭಿವೃದ್ಧಿ, ಅಗಲೀಕರಣ ಸಾಧ್ಯವಿಲ್ಲ ಎಂದರು.

ಬೆಂಗಳೂರಿನ ನಾಗರಿಕರಿಗೆ ದಿನ ನಿತ್ಯ ಸಮಸ್ಯೆ ಅಗುತ್ತಿದೆ. ಅಭಿವೃದ್ಧಿ ಹಕ್ಕು ಪ್ರಮಾಣ ಪತ್ರವನ್ನು ನೀಡಿದಲ್ಲಿ 8000 ಕೋಟಿ ವೆಚ್ಚ ಮಾಡುವ ಬದಲು ಇದೊಂದು 120 ಕೋಟಿ ವೆಚ್ಚದಲ್ಲಿ ರಸ್ತೆ ಅಗಲಿಕರಣ ಮಾಡಬಹುದು. ಅದರೆ ಜನರಿಗೆ ರಾಜ್ಯ ಸರ್ಕಾರ ಅನಾನುಕೂಲ ಮಾಡಲು ಮುಂದಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಾ.6ರಿಂದ ರಾಜ್ಯ ಮಟ್ಟದ ಟಿ20 ಕ್ರಿಕೆಟ್ ಪಂದ್ಯಾವಳಿ

ಮೈಸೂರು, ಮಾ.1(ಜಿಎ)–ಜೈಹಿಂದ್ ಕ್ರಿಕೆಟ್ ಕ್ಲಬ್ ವತಿಯಿಂದ ಎಂ.ಎಸ್.ಭಗತ್ ಸಿಂಹ ಸ್ಮರಣಾರ್ಥ ಮಾ.6ರಿಂದ 9ರವರೆಗೆ ಮೈಸೂರಿನ ಗಂಗೋತ್ರಿ ಗ್ಲೇಡ್ಸ್ ಹಾಗೂ ಎಸ್‌ಜೆಸಿಇ ಮೈದಾನದಲ್ಲಿ ರಾಜ್ಯ ಮಟ್ಟದ ಟಿ20 ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಜೈಹಿಂದ್ ಕ್ರಿಕೆಟ್ ಕ್ಲಬ್ ಕಾರ್ಯದರ್ಶಿ ಪ್ರದೀಪ್‌ಸಿಂಹ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯುವ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡಲು ಈ ಪಂದ್ಯಾವಳಿ ಆಯೋಜಿಸಲಾಗಿದ್ದು, ರಾಜ್ಯಾದ್ಯಂತ 8 ತಂಡಗಳು ಪಾಲ್ಗೊಳ್ಳಲಿವೆ. ರಣಜಿ ಟ್ರೋಫಿ ಮಾಜಿ ಆಟಗಾರರು, ವಿವಿಧ ವಯೋಮಾನದ ರಾಜ್ಯ ತಂಡಗಳನ್ನು ಪ್ರತಿನಿಧಿಸುವವರು ತಂಡದಲ್ಲಿ ಇರಲಿದ್ದಾರೆ. ಪ್ರತಿ ಗುಂಪಿನಿಂದ 2 ಅಗ್ರ ತಂಡಗಳು ಸೆಮಿಫೈನಲ್‌ನಲ್ಲಿ ಆಡಲಿವೆ. ಮಾ.9ರಂದು ಪಂದ್ಯ ಮುಗಿದ ಬಳಿಕ ಸಮಾರೋಪ ಸಮಾರಂಭ ನಡೆಯಲಿದೆ. ವಿಜೇತ ತಂಡಕ್ಕೆ 1.5 ಲಕ್ಷ ನಗದು ಬಹುಮಾನ ನೀಡಲಾಗುವುದು. ರನ್ನರ್ ಅಪ್‌ಗೆ 1 ಲಕ್ಷ, ವಿವಿಧ ವೈಯಕ್ತಿಕ ಬಹುಮಾನ ಇರಲಿವೆ ಎಂದರು. ಗೋಷ್ಠಿಯಲ್ಲಿ ಕ್ಲಬ್ ಸದಸ್ಯರಾದ ಪ್ರತಾಪ್ ಸಿಂಹ, ಕಿರಣ್ ಗೋಪಾಲ್ ಇದ್ದರು.

ಬಿಗಿ ಭದ್ರತೆಯಡಿ ದ್ವಿತೀಯ ಪಿಯು ಪರೀಕ್ಷೆ ಆರಂಭ

ಮೈಸೂರು, ಮಾ.1(ಆರ್‌ಕೆ)–2024–25ನೇ ಸಾಲಿನ ದ್ವಿತೀಯ ಪಿಯು ವಾರ್ಷಿಕ ಪರೀಕ್ಷೆಗಳು ರಾಜ್ಯಾದ್ಯಂತ ಇಂದಿನಿಂದ ವ್ಯಾಪಕ ಪೊಲೀಸ್ ಭದ್ರತೆಯೊಂದಿಗೆ ಆರಂಭವಾಗಿವೆ.

ಮೈಸೂರು ನಗರದ 27 ಸೇರಿದಂತೆ ಜಿಲ್ಲೆಯಾದ್ಯಂತ 50 ಕೇಂದ್ರಗಳಲ್ಲಿ ಪರೀಕ್ಷೆಗಳು ಆರಂಭವಾಗಿದ್ದು, ಮೊದಲ ದಿನವಾದ ಇಂದು (ಬೆಳಗ್ಗೆ 10ರಿಂದ ಮಧ್ಯಾಹ್ನ 1) ಕನ್ನಡ ಮತ್ತು ಅರೇಬಿಕ್ ಭಾಷಾ ಪರೀಕ್ಷೆಗಳು ನಡೆದವು.

ಮಾ.3ರಂದು ಗಣಿತ ಶಾಸ್ತ್ರ, ಶಿಕ್ಷಣ ಮತ್ತು ತರ್ಕಶಾಸ್ತ್ರ ಮತ್ತು ವ್ಯವಹಾರ ಅಧ್ಯಯನ ಪತ್ರಿಕೆಗಳ ಪರೀಕ್ಷೆಗಳು ನಡೆಯಲಿದ್ದು, ಮಾ.20ರಂದು ಹಿಂದಿ ಭಾಷೆಯ ಪತ್ರಿಕೆಯೊಂದಿಗೆ ದ್ವಿತೀಯ ಪಿಯು ಪರೀಕ್ಷೆಗಳು ಪೂರ್ಣಗೊಳ್ಳಲಿವೆ. ಜಿಲ್ಲೆಯಾದ್ಯಂತ 35,382 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಣಿಯಾಗಿದ್ದು, ಆ ಪೈಕಿ 32,684 ಹೊಸಬರು, 1680 ಪುನರಾವರ್ತಿತ, 1,028 ಖಾಸಗಿ ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿದ್ದಾರೆ. ಮೈಸೂರು ನಗರ ಮತ್ತು ತಾಲೂಕಿನಲ್ಲಿ 27, ನಂಜನಗೂಡು ತಾಲೂಕಿನಲ್ಲಿ 5, ಟಿ.ನರಸೀಪುರ ಮತ್ತು ಪಿರಿಯಾಪಟ್ಟಣ ತಾಲೂಕುಗಳಲ್ಲಿ ತಲಾ 4, ಕೆ.ಆರ್.ನಗರದಲ್ಲಿ 2, ಸಾಲಿಗ್ರಾಮದಲ್ಲಿ 1 ಹಾಗೂ ಹೆಚ್.ಡಿ.ಕೋಟೆ ತಾಲೂಕಿನಲ್ಲಿ 3 ಕೇಂದ್ರಗಳಲ್ಲಿ ಪರೀಕ್ಷೆಗಳು ಯಾವುದೇ ಗೊಂದಲವಿಲ್ಲದೆ ನಡೆಯಿತು.

ಸಿಸಿ ಕ್ಯಾಮರಾ ಕಣ್ಗಾವಲು: ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಿ ಮೈಸೂರಿನ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ವೆಬ್ ಕಾಸ್ಟಿಂಗ್ ವ್ಯವಸ್ಥೆ ಮಾಡಲಾಗಿದ್ದು, ಪರೀಕ್ಷಾ ಪ್ರಕ್ರಿಯೆಯನ್ನು ಗಮನಿಸಿ ಅಕ್ರಮ ಅಥವಾ ಸಂಶಯ ಕಂಡುಬಂದಲ್ಲಿ ತಕ್ಷಣ ಕ್ರಮ ವಹಿಸಲು ಜಿಲ್ಲಾಡಳಿತ ಮುಂದಾಗಿದೆ. ವೆಬ್ ಕಾಸ್ಟಿಂಗ್ ಸೆಂಟರ್‌ನಲ್ಲಿ ಪದವಿ ಪೂರ್ವ ಮತ್ತು ವೃತ್ತಿ ಶಿಕ್ಷಣ ಇಲಾಖೆ 10 ಮಂದಿ ಅಧಿಕಾರಿಗಳು ಪರೀಕ್ಷಾ ಕೇಂದ್ರಗಳ ದೃಶ್ಯಗಳನ್ನು ವೀಕ್ಷಿಸಲು ವ್ಯವಸ್ಥೆ ಮಾಡಲಾಗಿದೆ. ಇಂದು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್ ಅವರು ವೆಬ್ ಕಾಸ್ಟಿಂಗ್ ಸೆಂಟರ್‌ಗೆ ಭೇಟಿ ನೀಡಿ ಕಾರ್ಯ ವೈಖರಿ ಪರಿಶೀಲಿಸಿದರು.

ಎಲೆಕ್ಟ್ರಾನಿಕ್ಸ್ ವಸ್ತುಗಳಿಗೆ ನಿರ್ಬಂಧ: ಪರೀಕ್ಷೆಗೆ ಬರುವ ವಿದ್ಯಾರ್ಥಿಗಳು ಎಲೆಕ್ಟ್ರಾನಿಕ್ ಕೈ ಗಡಿಯಾರ, ಶೂಗಳ ಧರಿಸದಂತೆ ಎಚ್ಚರ ವಹಿಸಲಾಗಿದೆ. ಮೊಬೈಲ್, ಲ್ಯಾಪ್‌ಟಾಪ್, ಪೆನ್‌ಡ್ರೈವ್ ಇನ್ನಿತರ ವಸ್ತುಗಳನ್ನು ಪರೀಕ್ಷಾ ಕೇಂದ್ರಕ್ಕೆ ಕೊಂಡೊಯ್ಯದಂತೆ ಪರಿಶೀಲಿಸಿ, ಪರೀಕ್ಷಾ ಕೊಠಡಿಗೆ ಪ್ರವೇಶ ನೀಡಲಾಗುತ್ತಿದೆ. ಪ್ರತಿ ಕೇಂದ್ರಗಳಲ್ಲಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದ್ದು, ಸುತ್ತಲಿನ ಪ್ರದೇಶದಲ್ಲಿ ನಿಷೇಧಾಜ್ಞೆ ಜಾರಿ ಮಾಡಿರುವುದರಿಂದ ವಿದ್ಯಾರ್ಥಿಗಳು ಹಾಗೂ ಪರೀಕ್ಷಾ ಸಿಬ್ಬಂದಿ ಹೊರತುಪಡಿಸಿ ಇತರರು ಸುಳಿಯದಂತೆ ಎಚ್ಚರ ವಹಿಸಲಾಗಿದೆ. ಜಿಲ್ಲಾಧಿಕಾರಿಗಳ ಕಚೇರಿಯಲ್ಲಿರುವ ಖಜಾನೆಯಿಂದ ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಗಳನ್ನು ಪರೀಕ್ಷಾ ಕೇಂದ್ರಗಳಿಗೆ ತಲುಪಿಸಿ, ಮೌಲ್ಯಮಾಪನ ಕೇಂದ್ರಗಳಿಗೆ ಮರಳಿ ತರುವ ವಾಹನಗಳಿಗೆ ಜಿಪಿಎಸ್ ಅಳವಡಿಸಲಾಗಿದೆ. ಅಲ್ಲದೆ ಪ್ರತಿ ವಾಹನಕ್ಕೂ ಶಸ್ತ್ರ ಸಜ್ಜಿತ ಪೊಲೀಸ್ ಸಿಬ್ಬಂದಿ ಬೆಂಗಾವಲು ವಾಹನವನ್ನೂ ಒದಗಿಸಲಾಗಿದೆ.





ಶನಿವಾರದಿಂದ ಆರಂಭಗೊಂಡ ದ್ವಿತೀಯ ಪಿಯು ವಾರ್ಷಿಕ ಪರೀಕ್ಷೆಗೆ ತೆರಳುವ ಕೊನೇ ಕ್ಷಣದ ಸಿದ್ಧತೆಯಲ್ಲಿರುವ ವಿದ್ಯಾರ್ಥಿನಿಯರು. (ಬಲಚಿತ್ರ) ಡಿಸಿ ಕಚೇರಿಯಲ್ಲಿ ವೆಬ್‌ಕಾಸ್ಟಿಂಗ್ ವ್ಯವಸ್ಥೆ ಪರಿಶೀಲಿಸಿದ ಎಡಿಸಿ ಡಾ.ಪಿ.ಶಿವರಾಜ್.



ಶುಭ ಹಾರೈಕೆ...

ಮರಿಮಲ್ಲಪ್ಪ ಕಾಲೇಜಿನಲ್ಲಿ ಕೆಆರ್ ಯುವ ಕಾಂಗ್ರೆಸ್ ಕಾರ್ಯಕರ್ತರು ವಿದ್ಯಾರ್ಥಿಗಳಿಗೆ ಗುಲಾಬಿ ನೀಡಿ ಶುಭ ಕೋರಿದರು. ಹೊಯ್ಸಳ, ಶಶಾಂಕ್, ಹೇಮಾ, ಕಾರ್ತಿಕ್, ಅಭಿ, ಅರ್ಜುನ್, ಶಾಯೂಬ್ ಖಾನ್ ಸತೀಶ್ ಉಪಸ್ಥಿತರಿದ್ದರು.

1,171 ವಿದ್ಯಾರ್ಥಿಗಳು ಗೈರು

ಇಂದು ನಡೆದ ದ್ವಿತೀಯ ಪಿಯು ಕನ್ನಡ ಭಾಷಾ ಪರೀಕ್ಷೆಗೆ ಮೈಸೂರು ಜಿಲ್ಲೆಯಲ್ಲಿ ಒಟ್ಟು 29,138 ವಿದ್ಯಾರ್ಥಿಗಳು ನೋಂದಾಯಿತರಾಗಿದ್ದು, ಆ ಪೈಕಿ 1,171 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದರು. ಅದರಂತೆ ಇಂದಿನ ಪರೀಕ್ಷೆಗೆ ಶೇ.97.35ರಷ್ಟು ವಿದ್ಯಾರ್ಥಿಗಳು ಹಾಜರಾಗಿದ್ದರು. ಅದೇ ರೀತಿ ಅರೇಬಿಕ್ ಭಾಷೆಯ ಪರೀಕ್ಷೆಗೆ ಓರ್ವ ವಿದ್ಯಾರ್ಥಿ ನೋಂದಾಯಿತರಾಗಿದ್ದು, ಯಾವುದೇ ಗೈರು ಹಾಜರಾಗಿಲ್ಲ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಮೈಸೂರು ಜಿಲ್ಲಾ ಉಪನಿರ್ದೇಶಕ ಎಂ.ಮರಿಸ್ವಾಮಿ ಅವರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಉಚಿತ ಪ್ರಯಾಣ ವ್ಯವಸ್ಥೆ: ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಕೆಎಸ್‌ಆರ್‌ಟಿಸಿ ಬಸ್ಸು ಗಳಲ್ಲಿ ಉಚಿತ ಪ್ರಯಾಣದ ವ್ಯವಸ್ಥೆ ಮಾಡಲಾಗಿತ್ತು. ಪರೀಕ್ಷಾ ಕೇಂದ್ರಗಳಲ್ಲಿ ಕುಡಿಯುವ ನೀರು, ಮಾರ್ಗಸೂಚಿ ಫಲಕ, ವಿದ್ಯಾರ್ಥಿಗಳ ಎಲೆಕ್ಟ್ರಾನಿಕ್ ವಸ್ತುಗಳು, ಮೊಬೈಲ್ ಹಾಗೂ ಇನ್ನಿತರ ವಸ್ತುಗಳನ್ನು ಇರಿಸಲು ಸೂಕ್ತ ಸೌಲಭ್ಯ ಕಲ್ಪಿಸಲಾಗಿದೆ. ಪದವಿ ಪೂರ್ವ ಶಿಕ್ಷಣ ಇಲಾಖೆ ಜಿಲ್ಲಾ ಉಪನಿರ್ದೇಶಕ ಎಂ.ಮರಿಸ್ವಾಮಿ, ಮೊದಲ ದಿನವಾದ ಇಂದು ಮೈಸೂರು ನಗರ ಮತ್ತು ಜಿಲ್ಲಾದ್ಯಂತ ಕೆಲವು ಕೇಂದ್ರಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಗೋಪಾಲಪುರದಲ್ಲಿ ಭೂಮಿಗಾಗಿ ಹೋರಾಟ; ಹಿರಿಯ ವಕೀಲ ಅರುಣ್‌ಕುಮಾರ್ ಭಾಗಿ

ಹೋರಾಟದಿಂದ ಹಿಂದೆ ಸರಿಯದಂತೆ ಕರೆ




ಟಿ.ನರಸೀಪುರದ ಗೋಪಾಲಪುರ ಗ್ರಾಮದಲ್ಲಿ ಮಾದಿಗ ಸಮುದಾಯ ನಡೆಸುತ್ತಿರುವ ಹೋರಾಟದಲ್ಲಿ ವಕೀಲ ಅರುಣ್‌ಕುಮಾರ್ ಭಾಗವಹಿಸಿ, ಬೆಂಬಲ ಸೂಚಿಸಿದರು.

ಮೈಸೂರು,ಮಾ.1(ಪಿಎಂ)–ಟಿ.ನರಸೀಪುರ ವಿಧಾನಸಭಾ ಕ್ಷೇತ್ರದ ಗೋಪಾಲಪುರ ಗ್ರಾಮದಲ್ಲಿ ನಿವೇಶನಕ್ಕಾಗಿ ಮಾದಿಗ ಸಮುದಾಯ ನಡೆಸುತ್ತಿರುವ ಹೋರಾಟದಲ್ಲಿ ಮೈಸೂರಿನ ಖ್ಯಾತ ಹಿರಿಯ ವಕೀಲ ಅರುಣ್‌ಕುಮಾರ್ ಭಾಗವಹಿಸಿ, ಬೆಂಬಲ ಸೂಚಿಸಿದರು.

ಇದೇ ವೇಳೆ ಮಾತನಾಡಿದ ಅವರು, ಸರ್ಕಾರದ ಭೂಮಿ ಸಮುದಾಯಕ್ಕೆ ಮಂಜೂರಾಗಿದೆ. ಆದರೆ ಸ್ವಾರ್ಥಕ್ಕಾಗಿ ಸಮಾಜದ ಬಡ ಕಟ್ಟಕಡೆಯ ವ್ಯಕ್ತಿಗಳಿಗೆ ಹಂಚದೇ ಏನೋ ಕುತಂತ್ರ ಮಾಡಲಾಗಿದೆ. ಹಕ್ಕು ಪತ್ರ ಪಡೆಯುವವರೆಗೂ ಹೋರಾಟದಿಂದ ಹಿಂದೆ ಸರಿಯಬಾರದು ಎಂದು ಹೋರಾಟಕ್ಕೆ ಬೆಂಬಲ ಸೂಚಿಸಿದರು.

ನಮ್ಮದು ನ್ಯಾಯಪರವಾದ ಹೋರಾಟವಾಗಿದ್ದು, ಹೋರಾಟದ ದಿಕ್ಕು ಸಹ ಸ್ಪಷ್ಟವಾಗಿದೆ. ಸಾಧಿಸುವವರೆಗೂ ಕಿಚ್ಚು ಇರಬೇಕು. ನಾವು ಯಾರ ಬಳಿಯೂ ಬಿಕ್ಷೆ ಕೇಳುತ್ತಿಲ್ಲ. ನಿಮ್ಮ ಹೋರಾಟಕ್ಕೆ ಸದಾ ನನ್ನ ಬೆಂಬಲ ಇರಲಿದ್ದು, ನೀವು ಯಾವಾಗ ಕರೆದರೂ ಬಂದು ಕೈಜೋಡಿ ಸುತ್ತೇನೆ ಎಂದು ಭರವಸೆ ನೀಡಿದರು. ವಕೀಲರು ಹಾಗೂ ಚಿಂತಕ ಬೂದಿತ್ತಿಟ್ಟು ರಾಜೇಂದ್ರ, ಹೋರಾಟಗಾರರಾದ ಪ್ರಸನ್ನ ಚಕ್ರವರ್ತಿ, ಗ್ರಾಪಂ ಅಧ್ಯಕ್ಷ ನಡುಕಲಪುರ ಮಂಜುನಾಥ್ ಮತ್ತಿತರರು ಭಾಗವಹಿಸಿದ್ದರು.

ಆರೋಗ್ಯ ಉಚಿತ ತಪಾಸಣಾ ಶಿಬಿರ



ಮೈಸೂರು,ಮಾ.1–ಮೈಸೂರಿನ ಗಾಂಧಿನಗರದ ನಿವಾಸಿ ದಿವಂಗತ ದುಂಡಮ್ಮ ಮತ್ತು ದಿವಂಗತ ಚಿಕ್ಕ ರಂಗಯ್ಯ ನೆನಪಾರ್ಥ ಗಾಂಧಿನಗರ ಮತ್ತು ಸುತ್ತಮುತ್ತ ನಿವಾಸಿಗಳಿಗಾಗಿ ನಾಳೆ (ಮಾ.2) ಬೆಳಗ್ಗೆ 10 ಗಂಟೆಗೆ ಗಾಂಧಿನಗರದ ಶ್ರೀದುರ್ಗಾ ದೇವಿ ದೇವಸ್ಥಾನದ ಸಮೀಪದ ಶ್ರೀರಾಮಮಂದಿರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9199729 62090 ಸಂಪರ್ಕಿಸಬಹುದು.

ಇಂದು ಭಾರತ–ನ್ಯೂಜಿಲೆಂಡ್ ಪಂದ್ಯ

ದುಬೈ, ಮಾ.1– ಆಡಿರುವ ಎರಡೂ ಪಂದ್ಯಗಳನ್ನು ಗೆದ್ದು ಸೆಮಿಫೈನಲ್ಸ್‌ಗೆ ಪ್ರವೇಶಿಸಿರುವ ಭಾರತ ಮತ್ತು ನ್ಯೂಜಿಲೆಂಡ್ ತಂಡಗಳು ಚಾಂಪಿಯನ್ಸ್ ಟ್ರೋಫಿಯಲ್ಲಿ ಭಾನುವಾರ (ಮಾ.2) ತನ್ನ ಮೂರನೇ ಹಾಗೂ ಕೊನೆಯ ಗುಂಪು ಹಂತದ ಪಂದ್ಯದಲ್ಲಿ ಮುಖಾಮುಖಿಯಾಗುತ್ತಿದ್ದು, ಭಾರತೀಯ ಕಾಲಮಾನ ಮಧ್ಯಾಹ್ನ 2.30ಕ್ಕೆ ಪಂದ್ಯ ಆರಂಭಗೊಳ್ಳಲಿದೆ.

'ಎ' ಗುಂಪಿನಲ್ಲಿ ಸ್ಥಾನ ಪಡೆದಿರುವ ಎರಡೂ ತಂಡಗಳು ಈಗಾಗಲೇ ಸೆಮೀಸ್ ಪ್ರವೇಶಿಸಿರುವುದರಿಂದ ಈ ಪಂದ್ಯದ ಫಲಿತಾಂಶ ಯಾವುದೇ ಪ್ರಭಾವ ಬೀರುವುದಿಲ್ಲ. ಆದರೂ ಅಜೇಯವಾಗಿ ಸೆಮೀಸ್ ಪ್ರವೇಶಿಸುವ ಅವಕಾಶವನ್ನು ಪಂದ್ಯ ದಯಪಾಲಿಸಿದೆ.

ತಲಾ 4 ಅಂಕ ಗಳಿಸಿದ್ದರೂ ರನ್‌ರೇಟ್ ಆಧಾರದಲ್ಲಿ ಸದ್ಯ ಕಿವೀಸ್ 'ಎ' ಗುಂಪಿನ ಅಗ್ರಸ್ಥಾನಿಯಾಗಿ ಹೊರಹೊಮ್ಮಿದ್ದರೆ, ಭಾರತ ಎರಡನೇ ಸ್ಥಾನದಲ್ಲಿದೆ. ಭಾನುವಾರದ ಪಂದ್ಯದಲ್ಲಿ ಭಾರತ ಗೆದ್ದರೆ ತನ್ನ ಗುಂಪಿನಿಂದ ಅಗ್ರಸ್ಥಾನಿಯಾಗಿ ಹೊರಹೊಮ್ಮಲಿದೆ. ವಿಜೇತ ತಂಡ ಸೆಮೀಸ್ ಪಂದ್ಯವನ್ನು ಆತ್ಮವಿಶ್ವಾಸದಿಂದ ಎದುರಿಸುವ ಅವಕಾಶ ಪಡೆದುಕೊಳ್ಳಲಿದೆ. ಭಾರತ ಶುಭಮನ್ ಗಿಲ್, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್ ಮತ್ತು ಕೆಎಲ್. ರಾಹುಲ್ ಅವರಿಂದ ಉತ್ತಮ ಪ್ರದರ್ಶನ ನಿರೀಕ್ಷಿಸಿದೆ.

ಭಾರತ ಇದುವರೆಗೆ ಕಣಕ್ಕಿಳಿಸಿರುವ ಮೂವರು ಸ್ಪಿನ್ನರ್‌ಗಳಾದ ರವೀಂದ್ರ ಜಡೇಜ, ಅಕ್ಷರ್ ಪಟೇಲ್ ಮತ್ತು ಕುಲ್ದೀಪ್ ಯಾದವ್ ಹೆಚ್ಚು ವಿಕೆಟ್‌ಗಳನ್ನು ಪಡೆಯದೇ ಇದ್ದರೂ ಎದುರಾಳಿ ಬ್ಯಾಟರ್‌ಗಳನ್ನು ನಿಯಂತ್ರಿಸಿದ್ದಾರೆ.

ನ್ಯೂಜಿಲೆಂಡ್‌ನ ಕೇನ್ ವಿಲಿಯಮ್ಸನ್, ವಿಲ್ ಯಂಗ್, ಟಾಮ್ ಲೇಥಂ, ಡೆವೋನ್ ಕಾನ್ವೆ ಮತ್ತು ರಚಿನ್ ರವೀಂದ್ರ ಸ್ಪಿನ್ ದಾಳಿ ಸಮರ್ಥವಾಗಿ ಎದುರಿಸಲಿದ್ದಾರೆ. ಹೀಗಾಗಿ ಭಾನುವಾರದ ಪಂದ್ಯದಲ್ಲಿ ಮೇಲುಗೈ ಸಾಧಿಸಬೇಕೆಂದರೆ ಭಾರತೀಯರು ಕಿವೀಸ್ ಬ್ಯಾಟರ್‌ಗಳನ್ನು ಕಟ್ಟಿ ಹಾಕಬೇಕಿದೆ.

ಸಂಭಾವ್ಯ ತಂಡಗಳು

ಭಾರತ: ರೋಹಿತ್ ಶರ್ಮ (ನಾಯಕ), ಶುಭಮನ್ ಗಿಲ್, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ರಿಷಬ್ ಪಂತ್, ಹಾರ್ದಿಕ್ ಪಾಂಡ್ಯ, ರವೀಂದ್ರ ಜಡೇಜ, ವಾಷಿಂಗ್ಟನ್ ಸುಂದರ್, ಹರ್ಷಿತ್ ರಾಣಾ, ಮೊಹಮ್ಮದ್ ಶಮಿ/ಅರ್ಷದೀಪ್ ಸಿಂಗ್, ಕುಲ್ದೀಪ್ ಯಾದವ್/ವರುಣ್ ಚಕ್ರವರ್ತಿ.

ನ್ಯೂಜಿಲೆಂಡ್: ಮಿಚೆಲ್ ಸ್ಯಾಂಟ್ನರ್ (ನಾಯಕ), ಮಿಚೆಲ್ ಬ್ರೇಸ್‌ವೆಲ್, ಡೆವೋನ್ ಕಾನ್ವೆ, ರಚಿನ್ ರವೀಂದ್ರ, ಕೇನ್ ವಿಲಿಯಮ್ಸನ್, ಡೆರಿಲ್ ಮಿಚೆಲ್, ಟಾಮ್ ಲೇಥಂ, ಗ್ಲೆನ್ ಫಿಲಿಪ್ಸ್, ಕೈಲ್ ಜೆಮಿಸನ್, ಮ್ಯಾಟ್ ಹೆನ್ರಿ, ವಿಲ್ ಒ'ರೂರ್ಕ್,

ಮುಡಾ ಪಿಐಎಲ್ ಹಿಂಪಡೆದ ವಕೀಲರಿಗೆ ಹೈಕೋರ್ಟ್ ತರಾಟೆ; ಕಠಿಣ ಕ್ರಮದ ಎಚ್ಚರಿಕೆ

ಬೆಂಗಳೂರು, ಮಾ.1– ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಸಿಬಿಐ ತನಿಖೆಗೆ ಕೋರಿ ಸಲ್ಲಿಸಲಾದ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯಲ್ಲಿ (ಪಿಐಎಲ್) ವಕೀಲರ ವರ್ತನೆಗೆ ಕರ್ನಾಟಕ ಹೈಕೋರ್ಟ್ ಗುರುವಾರ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ನ್ಯಾಯಾಲಯದಲ್ಲಿ ತಮ್ಮ ನಿಲುವನ್ನು ಬದಲಾಯಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ನ್ಯಾಯಾಲಯ ಎಚ್ಚರಿಸಿದೆ. ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜರಿಯಾ ಮತ್ತು ನ್ಯಾಯಮೂರ್ತಿ ಎಂ.ಐ.ಅರುಣ್ ಅವರನ್ನೊಳಗೊಂಡ ವಿಭಾಗೀಯ ಪೀಠವು ಪ್ರಕರಣದ ಸಿಬಿಐ ತನಿಖೆ ಕೋರಿ ಮೈಸೂರು ಮೂಲದ ವಕೀಲ ಸಿ.ಸಂತೋಷ್ ಸಲ್ಲಿಸಿದ್ದ ಪಿಐಎಲ್ ಅನ್ನು ವಿಚಾರಣೆ ನಡೆಸುತ್ತಿತ್ತು.

ವಿಚಾರಣೆಯ ಸಮಯದಲ್ಲಿ, ಅರ್ಜಿದಾರರ ವಕೀಲ ಬಿ.ಎಸ್. ಸಾವಂತ್ ನ್ಯಾಯಾಲಯಕ್ಕೆ ಮಾಹಿತಿ ನೀಡಿದರು, ಮೈಸೂರು ಮೂಲದ ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಅವರು ಮುಡಾ ಪ್ರಕರಣವನ್ನು ಸಿಬಿಐಗೆ ಹಸ್ತಾಂತರಿಸುವಂತೆ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ನೇತೃತ್ವದ ಏಕಸದಸ್ಯ ಪೀಠವು ಅರ್ಹತೆಯ ಕೊರತೆಯನ್ನು ಉಲ್ಲೇಖಿಸಿ ಈಗಾಗಲೇ ವಜಾಗೊಳಿಸಿದೆ. ಈ ಹಿನ್ನೆಲೆಯಲ್ಲಿ, ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಿಂಪಡೆಯಲು ನಾನು ಮೆಮೊ ಸಲ್ಲಿಸಿದ್ದೇನೆ ಎಂದರು.



ಅದಕ್ಕೆ ಪ್ರತಿಕ್ರಿಯಿಸಿದ ಪೀಠವು, ಅರ್ಜಿಯನ್ನು ಹಿಂತೆಗೆದುಕೊಳ್ಳುವ ನಿಮ್ಮ ನಿರ್ಧಾರವು ನಿಮ್ಮ ಸಮಗ್ರತೆಯನ್ನು ನೇರವಾಗಿ ಪ್ರತಿಬಿಂಬಿಸುತ್ತದೆ. ನೀವು ನ್ಯಾಯಾಲಯದ ಮುಂದೆ ನಿಮ್ಮ ನಿಲುವನ್ನು ಬದಲಾಯಿಸುತ್ತಿದ್ದೀರಿ. 2024ರ ನ.4 ರಂದು ಪಿಐಎಲ್ ಅರ್ಜಿಯನ್ನು ಸರಿಯಾದ ವಿನಂತಿ ಮತ್ತು ಮನವರಿಕೆಯಾಗುವ ರೀತಿಯಲ್ಲಿ ದೃಢೀಕರಿಸಬೇಕು ಎಂದು ನಾವು ಸ್ಪಷ್ಟ ಆದೇಶವನ್ನು ನೀಡಿದ್ದೇವೆ. ಆದರೆ ನೀವು ಮಾಧ್ಯಮ ವರದಿಗಳ ಆಧಾರದ ಮೇಲೆ ಪಿಐಎಲ್ ಸಲ್ಲಿಸಿದ್ದೀರಿ.

ಸಿಬಿಐ ತನಿಖೆಯ ಅಗತ್ಯತೆಯ ಬಗ್ಗೆ ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡಲು ಬಲವಾದ ಪುರಾವೆಗಳನ್ನು ಸಲ್ಲಿಸಲು ನಾವು ನಿಮಗೆ ಸೂಚಿಸಿದ್ದೇವೆ. ನೀವು ಆಗ ಅರ್ಜಿಯನ್ನು ಹಿಂತೆಗೆದುಕೊಳ್ಳುವ ಬದಲು, ಈಗ ಅರ್ಜಿಯನ್ನು ಹಿಂತೆಗೆದುಕೊಳ್ಳುತ್ತಿದ್ದೀರಿ. ಮುಂದಿನ ವಿಚಾರಣೆಯಲ್ಲಿ ನಾವು ನಿರ್ಧಾರ ತೆಗೆದುಕೊಳ್ಳುತ್ತೇವೆ. ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆದಾರರಾಗಿ, ನೀವು ಗಂಭೀರವಾಗಿಲ್ಲ. ನಾವು ಪ್ರಕರಣದ ಬಗ್ಗೆ ಪ್ರತಿಕ್ರಿಯಿಸುತ್ತಿಲ್ಲ, ನ್ಯಾಯಾಲಯದ ಮುಂದೆ ನಿಮ್ಮ ನಿಲುವನ್ನು ಬದಲಾಯಿಸಲು ನೀವು ಪಿಐಎಲ್ ವೇದಿಕೆಯನ್ನು ಬಳಸುತ್ತಿದ್ದೀರಿ. ನಿಮ್ಮ ವಾದಗಳು, ಹಿಂಪಡೆಯುವಿಕೆ ಮೆಮೊ, ವಿಚಾರಣೆಯ ವಿನಂತಿ ಮತ್ತು ಅರ್ಜಿ ಸಲ್ಲಿಕೆ ಎಲ್ಲವನ್ನೂ ಗಮನಿಸಲಾಗಿದೆ. ನಿಮ್ಮ ನಡವಳಿಕೆಯ ಬಗ್ಗೆ ನಾವು ಕಠಿಣ ಕ್ರಮ ಕೈಗೊಳ್ಳುತ್ತೇವೆ. ಪಿಐಎಲ್ ಪ್ರಕ್ರಿಯೆಯ ದುರುಪಯೋಗವನ್ನು ನಾವು ಅನುಮತಿಸುವುದಿಲ್ಲ. ನಿಮ್ಮ ಪಿಐಎಲ್ ನಿಜವಾದ ಅರ್ಹತೆಯನ್ನು ಹೊಂದಿದ್ದರೆ, ನಾವು ನಿಮ್ಮ ಪರವಾಗಿ ಮುಂದುವರಿಯುತ್ತೇವೆ. ಎಲ್ಲವೂ ಸಾರ್ವಜನಿಕವಾಗಿದೆ ಮತ್ತು ನಿಮ್ಮ ಹೇಳಿಕೆಗಳ ಬಗ್ಗೆ ನಮಗೆ ಚೆನ್ನಾಗಿ ಅರಿವಿದೆ ಎಂದು ನ್ಯಾಯಮೂರ್ತಿಗಳು ಎಚ್ಚರಿಕೆ ನೀಡಿ, ಪ್ರಕರಣವನ್ನು ಮಾ.10ಕ್ಕೆ ಮುಂದೂಡಿದರು.

ದೇಶ - ವಿದೇಶ

ಪಾಕಿಸ್ತಾನದಲ್ಲಿ ಬಾಂಬ್ ಸ್ಫೋಟ; ಕನಿಷ್ಠ ಐವರ ಸಾವು



ಲಾಹೋರ್: ಪಾಕಿಸ್ತಾನದ ಪೇಶಾವರ ಸಮೀಪದ ಖೈಬರ್ ಪಖ್ತುಂಖ್ವಾದಲ್ಲಿರುವ ಮಸೀದಿ ಹೊರಗೆ ಬಾಂಬ್ ಸ್ಫೋಟ ಸಂಭವಿಸಿದೆ. ಈ ಘಟನೆಯಲ್ಲಿ ಕನಿಷ್ಠ ಐವರು ಸಾವಿಗೀಡಾಗಿ 21 ಮಂದಿ ಗಾಯಗೊಂಡಿದ್ದಾರೆ ಎಂದು ತಿಳಿದುಬಂದಿದೆ. ಶುಕ್ರವಾರದ ಪ್ರಾರ್ಥನೆಯ ಸಮಯದಲ್ಲಿ ಈ ಶಂಕಿತ ಆತ್ಮಹತ್ಯಾ ಬಾಂಬ್ ಸ್ಫೋಟ ಸಂಭವಿಸಿದ್ದು, ಪ್ರಾರ್ಥನೆಯ ಸಮಯದಲ್ಲಿ ಮಸೀದಿಯಲ್ಲಿ ಹೆಚ್ಚಿನ ಸಂಖ್ಯೆಯ ಜನರು ಉಪಸ್ಥಿತರಿದ್ದರು. ಯಾವುದೇ ಪರಿಸ್ಥಿತಿಯನ್ನು ಎದುರಿಸಲು ವೈದ್ಯಕೀಯ ಸೌಲಭ್ಯ ಕುರಿತು ತುರ್ತು ಪರಿಸ್ಥಿತಿಯನ್ನು ಘೋಷಿಸಲಾಗಿದೆ. ಮದರಸಾದ ಉಪ ಮೌಲಾನಾ ಆಗಿರುವ ಜಮಿಯತ್ ಉಲೇಮಾ–ಎ–ಇಸ್ಲಾಂ ಸಮಿಯುಲ್ ಹಕ್ (ಜೆಯುಐ–ಎಸ್) ನಾಯಕ ಮೌಲಾನಾ ಹಮೀದ್ ಉಲ್ ಹಕ್ ಸ್ಫೋಟದ ಸಮಯದಲ್ಲಿ ಮಸೀದಿಯಲ್ಲಿದ್ದರು. ಅವರ ಸ್ಥಿತಿ ಗಂಭೀರವಾಗಿದೆ ಎಂದು ಅವರ ಮಗ ಸಾನಿ ಹಕ್ಕಾನಿ ಹೇಳಿದ್ದಾರೆ. ಆದಾಗ್ಯೂ, ಅನೇಕ ವರದಿಗಳಲ್ಲಿ ಅವರು ಮೃತಪಟ್ಟಿದ್ದಾರೆ ಎಂದು ಹೇಳಲಾಗುತ್ತಿದೆ.


ಗುಂಡಿಕ್ಕಿ ಬಾಂಗ್ಲಾದೇಶಿ ಸ್ಮಗ್ಲರ್ ಹತ್ಯೆಗೈದ ಬಿಎಸ್‌ಎಫ್



ಅಗರ್ತಲಾ: ತ್ರಿಪುರಾದ ಸೆಪಹಿಜಾಲಾ ಜಿಲ್ಲೆಯಲ್ಲಿ ಬಾಂಗ್ಲಾದೇಶಿ ಸ್ಮಗ್ಲರ್‌ನನ್ನು ಗಡಿ ಭದ್ರತಾ ಪಡೆ ಸಿಬ್ಬಂದಿ ಗುಂಡಿಕ್ಕಿ ಹತ್ಯೆ ಮಾಡಿವೆ. ಅಂತಾರಾಷ್ಟ್ರೀಯ ಗಡಿಯ ಎರಡೂ ಕಡೆಯಿಂದ ಕಳ್ಳಸಾಗಾಣಿಕೆದಾರರ ಗುಂಪು ದಾಳಿ ಮಾಡಿದ ನಂತರ ಬಿಎಸ್‌ಎಫ್ ಗುಂಡಿಕ್ಕಿ ಕೊಂದಿದೆ ಎಂದು ಪಡೆ ತಿಳಿಸಿದೆ. ದಾಳಿ ವೇಳೆ ಬಿಎಸ್‌ಎಫ್ ಸಿಬ್ಬಂದಿಯೊಬ್ಬರು ಗಾಯಗೊಂಡಿದ್ದಾರೆ. 20ರಿಂದ 25 ಬಾಂಗ್ಲಾದೇಶಿ ದುಷ್ಕರ್ಮಿಗಳ ಗುಂಪು ಕಲಾಂಚೌರಾ ಪೊಲೀಸ್ ಠಾಣೆ ವ್ಯಾಪ್ತಿಯ ಪುತಿಯಾದಲ್ಲಿ ಭಾರತೀಯ ಪ್ರದೇಶವನ್ನು ಪ್ರವೇಶಿಸಿದ್ದು, ಶುಕ್ರವಾರ ಸಂಜೆ ತಡರಾತ್ರಿ ಹಲವಾರು ಭಾರತೀಯ ಸಹಚರರನ್ನು ಭೇಟಿ ಮಾಡಿದೆ.

ಕಳ್ಳಸಾಗಣೆದಾರರು ಬಿಎಸ್‌ಎಫ್ ಸಿಬ್ಬಂದಿಯ ಮೇಲೆ ದಾಳಿ ನಡೆಸಿ ಶಸ್ತ್ರಾಸ್ತ್ರಗಳನ್ನು ಕಸಿದುಕೊಳ್ಳಲು ಯತ್ನಿಸಿದಾಗ ಸ್ವಯಂ ರಕ್ಷಣೆಗಾಗಿ ಯೋಧರೊಬ್ಬರು ಬಂದೂಕಿನಿಂದ ಒಂದು ಸುತ್ತಿನ ಗುಂಡು ಹಾರಿಸಿದಾಗ ಓರ್ವ ಕಳ್ಳಸಾಗಣೆದಾರ ಗಾಯಗೊಂಡಿದ್ದು, ಅವರನ್ನು ಬಿಶಾಲ್‌ಗಢ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಆತ ಸಾವನ್ನಪ್ಪಿದ್ದಾನೆ.

ಪೋಪ್ ಫ್ರಾನ್ಸಿಸ್ ಆರೋಗ್ಯ ಸ್ಥಿತಿ ಗಂಭೀರ



ರೋಮ್: ಎರಡು ವಾರಗಳಿಂದ ನ್ಯುಮೋನಿಯಾದಿಂದ ಬಳಲುತ್ತಿರುವ ಪೋಪ್ ಫ್ರಾನ್ಸಿಸ್ ಅವರ ಆರೋಗ್ಯ ಸ್ಥಿತಿ ಮತ್ತಷ್ಟು ಗಂಭೀರವಾಗಿದ್ದು, ಶುಕ್ರವಾರ ಆಗಾಗ್ಗೆ ಕೆಮ್ಮುವಿನಿಂದ ವಾಂತಿಯಾಗಿದೆ. ಉಸಿರಾಟದ ತೊಂದರೆಯಿಂದ ಕೃತಕ ಉಸಿರಾಟದ ವ್ಯವಸ್ಥೆ ಮಾಡಲಾಗಿದೆ ಎಂದು ವ್ಯಾಟಿಕನ್ ಹೇಳಿದೆ. 88 ವರ್ಷದ ಪೋಪ್ ಅವರು ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆ ಎಂದು ವ್ಯಾಟಿಕನ್ ಪ್ರಕಟಣೆ ತಿಳಿಸಿದೆ. ಮಧ್ಯಾಹ್ನದ ಆರಂಭದಲ್ಲಿ ಸಂಭವಿಸಿದ ಉಸಿರಾಟದ ತೊಂದರೆಯಿಂದ ಆರೋಗ್ಯದಲ್ಲಿ ಮತ್ತಷ್ಟು ಹದಗೆಟ್ಟಿತು. ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸುತ್ತದೆಯೇ ಎಂಬುದರ ಬಗ್ಗೆ ಮುಂದಿನ 24ರಿಂದ 48 ಗಂಟೆ ಅವಧಿ ವೈದ್ಯರು ತೀವ್ರ ನಿಗಾ ವಹಿಸಲಿದ್ದಾರೆ. ಫೆ.14ರಿಂದ ರೋಮ್‌ನ ಜೆಮೆಲ್ಲಿ ಆಸ್ಪತ್ರೆಯಲ್ಲಿ ಪೋಪ್ ಫ್ರಾನ್ಸಿಸ್ ಅವರಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಪೋಪ್ ಅವರು ಯುವಕನಾಗಿದ್ದಾಗ ಶ್ವಾಸಕೋಶದ ಕಾಯಿಲೆಯಿಂದಾಗಿ ಒಂದು ಶ್ವಾಸಕೋಶದ ಭಾಗವನ್ನು ತೆಗೆದುಹಾಕಲಾಗಿದೆ. ಬ್ರಾಂಕೈಟಿಸ್ ಉಲ್ಬಣಗೊಂಡು ಎರಡೂ ಶ್ವಾಸಕೋಶಗಳಲ್ಲಿ ನ್ಯುಮೋನಿಯಾ ಉಂಟಾಗಿದೆ.

ರೈಲಿಗೆ ತಲೆ ಕೊಟ್ಟು ತಾಯಿ, ಇಬ್ಬರು ಮಕ್ಕಳು ಆತ್ಮಹತ್ಯೆ



ಕೊಟ್ಟಾಯಂ: ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ನೊಂದು ತಾಯಿ ಹಾಗೂ ಇಬ್ಬರು ಮಕ್ಕಳು ರೈಲಿಗೆ ತಲೆ ಕೊಟ್ಟು ಆತ್ಮಹತ್ಯೆಗೆ ಶರಣಾಗಿರುವ ಘಟನೆ ಕೊಟ್ಟಾಯಂನಲ್ಲಿ ನಡೆದಿದೆ.

ಶೈನಿ ಕುರಿಯಾಕೋಸ್ (43) ಮತ್ತು ಅವರ ಹೆಣ್ಣುಮಕ್ಕಳಾದ ಅಲೀನಾ (11) ಮತ್ತು ಇವಾನಾ (10) ಸಾವನ್ನಪ್ಪಿದ್ದಾರೆ. ನಿನ್ನೆ ಬೆಳಗ್ಗೆ 5.30ರ ಸುಮಾರಿಗೆ ಪರೋಲಿಕಲ್ ರೈಲ್ವೆ ಗೇಟ್ ಬಳಿ ಈ ಘಟನೆ ನಡೆದಿದೆ. ಇರಾಕ್‌ನಲ್ಲಿ ತೈಲ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ತೋಡುಪುಳ ಚುಂಗಮ್ ಮೂಲದ ಪತಿ ನೋಬಿ ಜೊತೆ ಜಗಳವಾಡುತ್ತಿದ್ದ ಶೈನಿ, ಕಳೆದ 9 ತಿಂಗಳಿನಿಂದ ಸ್ವಂತ ಮನೆಯಲ್ಲಿ ವಾಸಿಸುತ್ತಿದ್ದರು. ಶೈನಿ ತನ್ನ ಮಕ್ಕಳೊಂದಿಗೆ ಚರ್ಚ್‌ಗೆ ಹೋಗುವುದಾಗಿ ಹೇಳಿ ಮನೆಯಿಂದ ಹೊರಟುಹೋದರು. ಮೂವರು ಹಳಿಗೆ ಬಂದು ಒಬ್ಬರನ್ನೊಬ್ಬರು ಅಪ್ಪಿಕೊಂಡು ನಿಂತರು. ನೀಲಂಬೂರ್ ಎಕ್ಸ್‌ಪ್ರೆಸ್‌ನ ಲೋಕೋ ಪೈಲಟ್ ಎಷ್ಟೇ ಹಾರ್ನ್ ಮಾಡಿದರೂ ಅವರು ಹಿಂದೆ ಸರಿಯಲಿಲ್ಲ. ಆಗಲೇ ರೈಲು ಮೂವರ ಮೇಲೆ ಹರಿದು ಹೋಗಿತ್ತು.

ಟ್ರಂಪ್–ಝೆಲೆನ್ಸ್ಕಿ ನಡುವೆ ಮಾತಿನ ಚಕಮಕಿ



ವಾಷಿಂಗ್ಟನ್: ಉಕ್ರೇನಿಯನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿಅವರನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕೆಣಕಿದ್ದು, ಉಕ್ರೇನ್ '3ನೇ ಮಹಾಯುದ್ಧ ದೊಂದಿಗೆ ಜೂಜಾಡುತ್ತಿದೆ' ಎಂದು ಹೇಳಿದ್ದಾರೆ. ಓವಲ್ ಕಚೇರಿಯಲ್ಲಿ ನಡೆದ ನಾಯಕರಿಬ್ಬರ ಭೇಟಿ ಸಮಯದಲ್ಲಿ ಈ ವಿದ್ಯಮಾನ ನಡೆದಿದೆ. ಇದೇ ವೇಳೆ ಪರಿಸ್ಥಿತಿ ಕೈಮೀರಿ ಹೋಗುತ್ತಿದ್ದಂತೆ ಟ್ರಂಪ್, ಉಕ್ರೇನ್ ಅಧ್ಯಕ್ಷ ಝೆಲೆನ್ಸ್ಕಿಯವರನ್ನು ಶ್ವೇತಭವನದಿಂದ ಹೊರಹೋಗುವಂತೆ ಸೂಚಿಸಿದರು. ನೀವು ಲಕ್ಷಾಂತರ ಜನರ ಜೀವಗಳೊಂದಿಗೆ ಆಟವಾಡುತ್ತಿದ್ದೀರಿ, ಮೂರನೇ ಮಹಾಯುದ್ಧದೊಂದಿಗೆ ಜೂಜಾಡುತ್ತಿದ್ದೀರಿ. ನೀವು ಹೀಗೆ ಮಾಡುತ್ತಿರುವುದು ಈ ದೇಶಕ್ಕೆ ತುಂಬಾ ಅಗೌರವವಾಗಿದೆ ಎಂದು ನೇರವಾಗಿಯೇ ಝೆಲೆನ್ಸ್ಕಿ ಮೇಲೆ ಟ್ರಂಪ್ ವಾಗ್ದಾಳಿ ನಡೆಸಿದರು. ಈ ಚರ್ಚೆ ಸಮಯದಲ್ಲಿ ರಷ್ಯಾದೊಂದಿಗೆ ಯಾವುದೇ ಕದನ ವಿರಾಮವನ್ನು ಒಪ್ಪಿಕೊಳ್ಳುವುದಿಲ್ಲ ಎಂದು ಝೆಲೆನ್ಸ್ಕಿ ಸ್ಪಷ್ಟಪಡಿಸಿದರು. ಝೆಲೆನ್ಸ್ಕಿ ಉಕ್ರೇನ್‌ಗೆ ಯುಎಸ್ ಬೆಂಬಲವನ್ನು ಕೋರಿದರು. ಆದರೆ ಈ ಭೇಟಿ ಒಪ್ಪಂದಕ್ಕೆ ಸಹಿ ಹಾಕದೆ, ಜಂಟಿ ಪತ್ರಿಕಾಗೋಷ್ಠಿ ರದ್ದುಗೊಳಿಸುವುದರೊಂದಿಗೆ ಕೊನೆಗೊಂಡಿತು.

ಮೈಸೂರು ಮಿತ್ರ ಭಾನುವಾರ 2 ಮಾರ್ಚ್ 2025

15 ದಿನದಲ್ಲಿ ಆದಿವಾಸಿಗಳ ಸಮಸ್ಯೆ ಬಗೆಹರಿಸದಿದ್ದರೆ ಅಹೋರಾತ್ರಿ ಧರಣಿ

ಆದಿವಾಸಿ ಮುಖಂಡ ಆರ್.ಕೆ.ಚಂದ್ರು ಎಚ್ಚರಿಕೆ


ಆರ್.ಕೆ.ಚಂದ್ರು

ಮಡಿಕೇರಿ,ಮಾ.1– ಕೊಡಗು ಜಿಲ್ಲೆಯ ವಿರಾಜಪೇಟೆ ಹಾಗೂ ಮಡಿಕೇರಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಆದಿವಾಸಿ ಸಮುದಾಯಗಳ ಸಮಸ್ಯೆಗಳಿಗೆ ಮುಂದಿನ 15 ದಿನಗಳೊಳಗೆ ಸೂಕ್ತ ಸ್ಪಂದನೆ ದೊರೆಯದಿದ್ದಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಎದುರು ನೂರಾರು ಆದಿವಾಸಿಗಳು ಅಹೋರಾತ್ರಿ ಧರಣಿ ಸತ್ಯಾಗ್ರಹ ನಡೆಸಲಿದ್ದಾರೆ ಎಂದು ಆದಿವಾಸಿ ಮುಖಂಡ ಆರ್.ಕೆ. ಚಂದ್ರು ಎಚ್ಚರಿಕೆ ನೀಡಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, ಕೊಡಗು ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ಜೇನುಕುರುಬ, ಬೆಟ್ಟಕುರುಬ, ಸೋಲಿಗ, ಯರವ, ಮಲೆಕುಡಿಯ ಸೇರಿದಂತೆ ಆದಿವಾಸಿ ಸಮುದಾಯಕ್ಕೆ ಸೇರಿದ ಜನರು ತಲೆತಲಾಂತರಗಳಿಂದ ಸಂಕಷ್ಟದ ಬದುಕು ಸಾಗಿಸುತ್ತಿದ್ದಾರೆ. ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳೇ ಕಳೆದಿದ್ದರೂ ಕೊಡಗು ಜಿಲ್ಲೆಯ ಮೂಲನಿವಾಸಿಗಳಾದ ಆದಿವಾಸಿಗಳು ಮೂಲಭೂತ ಸೌಲಭ್ಯಗಳ ಕೊರತೆಯನ್ನು ಎದುರಿಸುತ್ತಿದ್ದಾರೆ ಎಂದಿದ್ದಾರೆ.

ಇಂದಿಗೂ ಸ್ವಂತ ಸೂರಿಲ್ಲದೆ, ಟಾರ್ಪಲ್ ಶೀಟ್‌ನಂತಹ ಗುಡಿಸಲುಗಳಲ್ಲಿ ವಾಸಿಸುತ್ತಿದ್ದು, ಶುದ್ಧ ಕುಡಿಯುವ ನೀರು ಕೂಡ ಲಭಿಸದ ದುಸ್ಥಿತಿ ಇದೆ ಆದಿವಾಸಿಗಳು ದುರ್ಬಲ ಸಮುದಾಯಕ್ಕೆ ಸೇರಿದವರಾಗಿದ್ದು, ಸ್ವಾವಲಂಬಿಗಳಾಗಿ ಬದುಕುವ ಹಕ್ಕನ್ನು ಇಂದಿನ ಸಮಾಜ ಕಸಿದುಕೊಳ್ಳುತ್ತಿದೆ. ತೋಟಗಳಲ್ಲಿ ಮತ್ತು ಉದ್ದಿಮೆಗಳಲ್ಲಿ ಕೂಲಿ ಕಾರ್ಮಿಕರಾಗಿ ಜೀವನ ಸಾಗಿಸುತ್ತಿರುವ ಆದಿವಾಸಿಗಳು ಎಲ್ಲಾ ಕ್ಷೇತ್ರಗಳಲ್ಲೂ ಹಿನ್ನಡೆಯನ್ನು ಅನುಭವಿಸುತ್ತಿದ್ದಾರೆ. ಆದಿವಾಸಿಗಳ ಕುಟುಂಬಗಳ ಮಕ್ಕಳು ವಿದ್ಯಾವಂತರಾಗಿದ್ದರೂ ಉದ್ಯೋಗ ಲಭಿಸದೆ ಕೂಲಿ ಕೆಲಸವನ್ನೇ ಅವಲಂಬಿಸುವಂತಾಗಿದೆ ಎಂದು ಆರ್.ಕೆ. ಚಂದ್ರ ಆರೋಪಿಸಿದ್ದಾರೆ.

ಜಿಲ್ಲೆಯಲ್ಲಿರುವ ಹಾಡಿಗಳಲ್ಲಿ ಹೀನಾಯ ಬದುಕು ಸಾಗಿಸುತ್ತಿರುವ ಆದಿವಾಸಿ ಕುಟುಂಬಗಳಿಗೆ ಇಂದಿಗೂ ಕುಡಿಯುವ ನೀರು, ವಿದ್ಯುತ್ ಮತ್ತು ರಸ್ತೆ ಸೌಲಭ್ಯಗಳಿಲ್ಲ. ಇತ್ತೀಚಿನ ವರ್ಷಗಳಲ್ಲಿ ಅಧಿಕಾರಕ್ಕೆ ಬರುವ ಸರ್ಕಾರಗಳೆಲ್ಲವೂ ಆದಿವಾಸಿಗಳ ಅಭಿವೃದ್ಧಿಗಾಗಿ ಕೋಟಿಗಟ್ಟಲೆ ಹಣವನ್ನು ಮೀಸಲಿಟ್ಟಿರುವುದಾಗಿ ಘೋಷಿಸಿಕೊಳ್ಳುತ್ತಿವೆ. ಆದರೆ ಇಲ್ಲಿಯವರೆಗೆ ಈ ಹಣದಿಂದ ಆದಿವಾಸಿ ಸಮುದಾಯದ ಅಭಿವೃದ್ಧಿಯಾಗಿಲ್ಲ. ಮುಂದಿನ 15 ದಿನಗಳೊಳಗೆ ಜಿಲ್ಲಾಧಿಕಾರಿಗಳು ಖುದ್ದು ಹಾಡಿಗಳಿಗೆ ಭೇಟಿ ನೀಡಿ ಆದಿವಾಸಿಗಳ ಸಮಸ್ಯೆಗಳನ್ನು ಅರಿತುಕೊಂಡು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಒತ್ತಾಯಿಸಿದರು.

ನಿವೃತ್ತ ಬ್ಯಾಂಕ್ ಸಿಬ್ಬಂದಿಗೆ ಬೀಳ್ಕೊಡುಗೆ



ಮಡಿಕೇರಿ, ಮಾ.1– ಪೊನ್ನಂಪೇಟೆ ತಾಲೂಕು ಹುದಿಕೇರಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಬ್ಯಾಂಕ್‌ನಲ್ಲಿ ಹಿರಿಯ ಗುಮಾಸ್ತೆಯಾಗಿ 30 ವರ್ಷಗಳಿಗೂ ಹೆಚ್ಚು ಕಾಲ ಕರ್ತವ್ಯ ನಿರ್ವಹಿಸಿ ನಿವೃತ್ತರಾದ ಕೆ.ಆರ್. ವಿಶಾಲಾಕ್ಷಿ ಅವರನ್ನು ಬ್ಯಾಂಕ್ ವತಿಯಿಂದ ಸನ್ಮಾನಿಸಿ ಬೀಳ್ಕೊಡಲಾಯಿತು. ಈ ಸಂದರ್ಭ ಬ್ಯಾಂಕ್ ಅಧ್ಯಕ್ಷ ಎ.ಎಂ. ಮುತ್ತಪ್ಪ, ಉಪಾಧ್ಯಕ್ಷ ಎಂ.ಎ.ರಮೇಶ್, ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಎಂ.ಎಂ. ತಮ್ಮಯ್ಯ, ಬ್ಯಾಂಕ್ ಸಿಬ್ಬಂದಿಗಳು ಹಾಗೂ ನಿರ್ದೇಶಕರು ಉಪಸ್ಥಿತರಿದ್ದರು.

ಬೇಗೂರಿನಲ್ಲಿ ಹುಲಿ ದಾಳಿಗೆ ಹಸು ಬಲಿ



ಗೋಣಿಕೊಪ್ಪ : ಪೊನ್ನಂಪೇಟೆ ತಾಲೂಕು ಬೇಗೂರು ಗ್ರಾಮದಲ್ಲಿ ಹುಲಿ ದಾಳಿಗೆ ಹಸು ಬಲಿಯಾಗಿದೆ. ಕೊಟ್ಟಂಗಡ ರಾಜಸುಬ್ಬಯ್ಯ ಅವರಿಗೆ ಸೇರಿದ ಹಸುವಾಗಿದ್ದು, ಗದ್ದೆಯಲ್ಲಿ ಮೇಯಲು ಕಟ್ಟಿ ಹಾಕಿದ್ದ ಹಸುವಿನ ಮೇಲೆ ದಾಳಿ ನಡೆಸಿ ಕೊಂದು ಹಾಕಿದೆ. ಪೊನ್ನಂಪೇಟೆ ಅರಣ್ಯ ಇಲಾಖೆಯ ಅಧಿಕಾರಿ, ಸಿಬ್ಬಂದಿ ಸ್ಥಳಕ್ಕೆ ತೆರಳಿ ಕ್ರಮ ಕೈಗೊಂಡರು.

ರಾಜಕೀಯ ಬಿಟ್ಟು ಕೊಡಗು ವಿವಿ ಉಳಿವಿಗೆ ಹೋರಾಟ ಅಗತ್ಯ

ಮಡಿಕೇರಿ ಕೊಡವ ಸಮಾಜದ ಮಾಸಿಕ ಸಭೆಯಲ್ಲಿ ಆಗ್ರಹ


ಮಡಿಕೇರಿ ಕೊಡವ ಸಮಾಜ ಅಧ್ಯಕ್ಷ ಮಂಡುವಂಡ ಪಿ.ಮುತ್ತಪ್ಪ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

ಮಡಿಕೇರಿ,ಮಾ.1– ಕೊಡಗು ವಿಶ್ವವಿದ್ಯಾನಿಲಯ ರದ್ದು ಸೇರಿದಂತೆ ಇತರ ವಿಶ್ವವಿದ್ಯಾನಿಲಯದ ಜೊತೆ ವಿಲೀನಗೊಳಿಸುವ ಸರ್ಕಾರದ ಚಿಂತನೆಯ ಬಗ್ಗೆ ಮಡಿಕೇರಿ ಕೊಡವ ಸಮಾಜದ ಮಾಸಿಕ ಸಭೆ ತೀವ್ರವಾಗಿ ಖಂಡಿಸಿತು.

ಮಡಿಕೇರಿ ಕೊಡವ ಸಮಾಜ ಅಧ್ಯಕ್ಷ ಮಂಡುವಂಡ ಪಿ.ಮುತ್ತಪ್ಪ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿ, ಕೊಡಗು ಜಿಲ್ಲೆಯಲ್ಲಿ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡಬೇಕೆಂಬ ಶ್ರಮದ ಫಲವಾಗಿ ಇಂದು ಕೊಡಗು ವಿಶ್ವವಿದ್ಯಾನಿಲಯ ಪ್ರಾರಂಭಗೊಂಡು ಹೆಗ್ಗಳಿಕೆಗೆ ಕಾರಣವಾಗಿತ್ತು. ಆದರೆ ಏಕಾಏಕಿ ರದ್ದುಗೊಳಿಸುವ ತೀರ್ಮಾನ ಸರಿಯಲ್ಲ. ನಾವೆಲ್ಲ ರಾಜಕೀಯ ಬಿಟ್ಟು ಹೋರಾಡಬೇಕಿದೆ. ಕೊಡಗಿನ ಇಬ್ಬರು ಶಾಸಕರು ಇದರ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸಿ ಸರಕಾರದ ಗಮನಕ್ಕೆ ತಂದು ಕೊಡಗು ವಿಶ್ವ ವಿದ್ಯಾನಿಲಯವನ್ನು ಉಳಿಸಿಕೊಳ್ಳಬೇಕೆಂದರು. ಅಬಕಾರಿ ಇಲಾಖೆಯ ನೂತನ ಸುತ್ತೋಲೆಯಂತೆ ಯಾವುದೇ ಸಮಾಜದ ಸಭೆ ಸಮಾರಂಭಗಳಲ್ಲಿ ಮದ್ಯ ಬಳಸಲು ಅನುಮತಿ ಪಡೆಯಬೇಕೆಂಬ ಕ್ರಮ ಸರಿಯಲ್ಲ. ಕೊಡಗಿನಲ್ಲಿ ಯಾವುದೇ ಹಬ್ಬ ಹರಿದಿನ, ಮದುವೆ, ಸಮಾರಂಭಗಳಲ್ಲಿ ಗುರು ಕಾರೋಣನಿಗೆ ಮದ್ಯವನ್ನು ಎಡೆ ಇಟ್ಟು ಎಲ್ಲರು ಸೇವಿಸುವುದು ಸಂಪ್ರದಾಯ. ದೇಶ ಸೇವೆಯಲ್ಲಿ ಸೇವೆ ಸಲ್ಲಿಸಿದ ಹಾಗೂ ಸೇವೆ ಸಲ್ಲಿಸುತಿರುವ ಯೋಧರಿಗೆ ಸೇನೆಯಿಂದ ರಿಯಾಯಿತಿ ದರದಲ್ಲಿ ಮದ್ಯವನ್ನು ನೀಡಲಾಗುತ್ತದೆ. ಅವರ ಸ್ವಂತ ಹಾಗು ಬಂಧುಗಳ ಸಮಾರಂಭಗಳಲ್ಲಿ ಮದ್ಯವನ್ನು ಬಳಸಲು ಅಬಕಾರಿ ಇಲಾಖೆಯ ಅನುಮತಿಯ ಅವಶ್ಯಕತೆ ಇದೆಯೇ? ಎಂದು ಮುತ್ತಪ್ಪ ಪ್ರಶ್ನಿಸಿದರು. ಮದುವೆ ಸಮಾರಂಭಗಳಲ್ಲಿ ಮದ್ಯವನ್ನು ಅತಿಥಿ ಸತ್ಕಾರಕ್ಕೆ ನೀಡುವುದಕ್ಕೂ ಅವಶ್ಯಕತೆ ಇದೆಯೇ? ಇಂತಹ ನಿಯಮವನ್ನು ಜಾರಿಗೊಳಿಸುವ ಮುನ್ನ ಸೂಕ್ತ ಮರು ಚಿಂತನೆಯ ಅವಶ್ಯ ಇಂತಹ ವಿಷಯದ ಕುರಿತು ಸರ್ಕಾರ ಮರು ಪರಿಶೀಲಿಸಲಿ ಎಂದರು.

ಸಭೆಯಲ್ಲಿ ಸಮಾಜ ಉಪಾಧ್ಯಕ್ಷ ಕೇಕಡ ವಿಜು ದೇವಯ್ಯ, ಜಂಟಿ ಕಾರ್ಯದರ್ಶಿ ನಂದಿನೆರವಂಡ ದಿನೇಶ್, ನಿರ್ದೇಶಕರಾದ ಕನ್ನಂಡ ಕವಿತ ಬೊಳ್ಳಪ್ಪ ಬೊಪ್ಪಂಡ ಸರಳಾ ಕರುಂಬಯ್ಯ, ಮಂಡಿರ ಸದಾ ಮುದ್ದಪ್ಪ, ಪುತ್ತರಿರ ಕರುಣ್ ಕಾಳಯ್ಯ, ಕಾಳಚಂಡ ಅಪ್ಪಣ್ಣ ಕಾಂಡೆರ ಲಲ್ಲು ಕುಟ್ಟಪ್ಪ ಶಾಂತೆಯಂಡ ವಿಶಾಲ್ ಕಾರ್ಯಪ್ಪ ಹಾಜರಿದ್ದರು.

ಆರೋಗ್ಯ ತಪಾಸಣಾ ಶಿಬಿರದಲ್ಲಿ 96 ಮಂದಿಗೆ ಚಿಕಿತ್ಸೆ


ಶಿಬಿರದಲ್ಲಿ ಪಾಲ್ಗೊಂಡಿರುವ ಮಹಿಳೆಯರು.

ವಿರಾಜಪೇಟೆ, ಮಾ.1– ಕೊಡಗು ಹಿಂದು ಮಲಯಾಳಿ ಮಹಿಳಾ ಅಸೋಸಿಯೇಷನ್ ಹಾಗೂ ಅಮಲಾ ಸ್ಪೆಷಾಲಿಟಿ ಕ್ಲಿನಿಕ್ ವತಿಯಿಂದ ವಿರಾಜಪೇಟೆ ಪುರಭವನದಲ್ಲಿ ಸಾರ್ವಜನಿಕರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಸಲಾಯಿತು. ಶಿಬಿರದಲ್ಲಿ 96 ಮಂದಿ ಚಿಕಿತ್ಸೆ ಪಡೆದುಕೊಂಡರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಿಂದು ಮಲಯಾಳಿ ಮಹಿಳಾ ಅಸೋಸಿಯೇಷನ್ ಅಧ್ಯಕ್ಷೆ ಶೀಭಾ ಪ್ರಥ್ವಿನಾಥ್ ವಹಿಸಿ ಮಾತನಾಡಿ,ಮಹಿಳೆಯರು ಬದುಕಿನ ದಾರಿದೀಪ ಆಗಬೇಕು. ಅಡಿಗೆ ಮತ್ತು ಮನೆ ಕೆಲಸದ ನಂತರ ಬದುಕು ನಡೆಸಲು ಮಹಿಳಾ ಅಸೋಸಿಯೇಷನ್ ಟೈಲರಿಂಗ್, ವಾಹನ ಚಾಲನೆ ತರಬೇತಿ, ಕ್ಯಾಂಟೀನ್ ನಡೆಸುವರಿಗೆ ಸಹಾಯ ನೀಡಿದೆ. ಮುಂದಿನ ದಿನದಲ್ಲಿ ಇನ್ನು ಹೆಚ್ಚು ಮಹಿಳೆಯರಿಗೆ ಸ್ವ ಉದ್ಯೋಗ ಕಲ್ಪಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಲಿದ್ದು ಅದರೊಂದಿಗೆ ಸಮಾಜಸೇವೆಯಲ್ಲಿ ತೊಡಗುವುದಾಗಿ ತಿಳಿಸಿದರು.

ತಪಸಣಾ ಶಿಬಿರದಲ್ಲಿ ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿಯ ಅಮಲ ಕ್ಲಿನಿಕ್ ವೈದ್ಯರಾದ ಅಮೇಲ್‌ನಾಥ್, ಮಲಯಾಳಿ ಅಸೋಸಿಯೇಷನ್ ಗೌರವ ಅಧ್ಯಕ್ಷೆ ರೀತಾ ರಜಾನ್, ಕಾರ್ಯದರ್ಶಿ ಪುಷ್ಪ ಶಿವಪ್ಪ ಖಜಾಂಚಿ ಶ್ರೀಕಲಾ, ನಿರ್ದೇಶಕರಾದ ಸ್ಮಿತಾ ಸಂತೋಷ್, ಶಿಜಾಬಾಬು, ಪ್ರೇಮರಾಧ ಕೃಷ್ಣ, ಶೈಲಜ ಪೆರುಂಬಾಡಿ, ಕ್ಲಿನಿಕ್ ಸಿಬ್ಬಂದಿ, ಅಸೋಸಿಯೇಷನ್ ಸದಸ್ಯರು ಉಪಸ್ಥಿತರಿದ್ದರು. ಪದ್ಮಾವತಿ ಸ್ವಾಗತಿಸಿದರು. ದೇವಿ ಸಂತೋಷ್ ನಿರೂಪಿಸಿದರು.

ಇಂದು ಅರೆಭಾಷೆ ಗಡಿನಾಡ ಉತ್ಸವ

ಮಡಿಕೇರಿ: ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಆಶ್ರಯದಲ್ಲಿ ಗೌಡ ಸಮಾಜ ಕುಶಾಲನಗರ ಮತ್ತು ಇದರ ಅಂಗ ಸಂಸ್ಥೆಗಳು ಮತ್ತು ಆಲೂರು ಸಿದ್ದಾಪುರ, ಸುಂಟಿಕೊಪ್ಪ ಗುಡ್ಡೆಹೊಸೂರು, ನಂಜರಾಯಪಟ್ಟಣ, ಚೆಟ್ಟಳ್ಳಿ ಮತ್ತು ಪಿರಿಯಾಪಟ್ಟಣ ಗೌಡ ಸಮಾಜ ಇವರ ಸಹಯೋಗದಲ್ಲಿ ಅರೆಭಾಷೆ ಗಡಿನಾಡ ಉತ್ಸವವು ಮಾ.2 ರಂದು ನಡೆಯಲಿದೆ.

ಅಂದು ಬೆಳಗ್ಗೆ 9 ಗಂಟೆಗೆ ಕೊಪ್ಪ ಗೇಟ್ ಕಾವೇರಿ ಪ್ರತಿಮೆ ಬಳಿಯಿಂದ ಮೆರವಣಿಗೆ ನಡೆಯಲಿದೆ. ಕೊಡಗು ಗೌಡ ಸಮಾಜಗಳ ಒಕ್ಕೂಟದ ಅಧ್ಯಕ್ಷರಾದ ಸೂರ್ತಲೆ ಸೋಮಣ್ಣ ಚಾಲನೆ ನೀಡಲಿದ್ದಾರೆ.

ನಂತರ ಬೆಳಗ್ಗೆ 10 ಗಂಟೆಗೆ ಕುಶಾಲನಗರ ರೈತ ಸಹಕಾರ ಭವನದಲ್ಲಿ ಉದ್ಘಾಟನಾ ಕಾರ್ಯಕ್ರಮ ನಡೆಯಲಿದೆ. ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ, ಮಡಿಕೇರಿ ಶಾಸಕರಾದ ಡಾ.ಮಂತರ್ ಗೌಡ, ಎ.ಎಸ್.ಪೊನ್ನಣ್ಣ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮಾಜಿ ಸಭಾಪತಿ ಕೆ.ಜಿ.ಬೋಪಯ್ಯ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಇತರರು ಪಾಲ್ಗೊಳ್ಳಲಿದ್ದಾರೆ. ನಂತರ ಅರೆಭಾಷೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ.

ಬಳಿಕ ಸಮಾರೋಪ ಸಮಾರಂಭವು ಮಾಧ್ಯಾಹ್ನ 3 ಗಂಟೆಗೆ ನಡೆಯಲಿದೆ. ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ಸದಾನಂದ ಮಾವಜಿ, ಅರಕಲಗೂಡು ವಿಧಾನಸಭಾ ಕ್ಷೇತ್ರದ ಶಾಸಕರಾದ ಎ.ಮಂಜು, ಕೊಡಗು ಗೌಡ ಸಮಾಜಗಳ ಒಕ್ಕೂಟದ ಅಧ್ಯಕ್ಷರಾದ ಸೂರ್ತಲೆ ಸೋಮಣ್ಣ, ಕುಶಾಲನಗರ ಗೌಡ ಸಮಾಜದ ಅಧ್ಯಕ್ಷರಾದ ಚಿಲ್ಲನ ಗಣಿ ಪ್ರಸಾದ್ ಇತರರು ಪಾಲ್ಗೊಳ್ಳಲಿದ್ದಾರೆ.

ಕೊಡಗು ವರ್ಲ್ಡ್ ಕಪ್ ಫುಟ್ಬಾಲ್ ಜೆರ್ಸಿ ಬಿಡುಗಡೆ


ಕೊಡಗು ವರ್ಲ್ಡ್ ಕಪ್ ಫುಟ್ಬಾಲ್ ಜೆರ್ಸಿ ಬಿಡುಗಡೆ ಕಾರ್ಯಕ್ರಮ ನಡೆಯಿತು.

ಗೋಣಿಕೊಪ್ಪ : ಆಲ್ ಸ್ಟಾರ್ ಯೂತ್ ಕ್ಲಬ್ ಆಯೋಜಿಸಿರುವ ಕೊಡಗು ವರ್ಲ್ಡ್ ಕಪ್ ಫುಟ್ಬಾಲ್ ಟೂರ್ನಿ ಅಂಗವಾಗಿ ಆಲ್ ಸ್ಟಾರ್ ತಂಡದ ಜೆರ್ಸಿ ಬಿಡುಗಡೆ ಕಾರ್ಯಕ್ರಮ ದುರ್ಗಬೋಜಿ ಸಭಾಂಗಣದಲ್ಲಿ ನಡೆಯಿತು. ಬಾಲಕ, ಬಾಲಕಿಯರು ಜೆರ್ಸಿ ತೊಟ್ಟು ವೇದಿಕೆಗೆ ಹೆಜ್ಜೆ ಇಡುವ ಮೂಲಕ ಜೆರ್ಸಿ ಅನಾವರಣಗೊಳಿಸಲಾಯಿತು. ಮೇ 1 ರಿಂದ 4 ರವರೆಗೆ ಗೋಣಿಕೊಪ್ಪ ಜಿ.ಎಂ.ಪಿ ಶಾಲಾ ಮೈದಾನದಲ್ಲಿ ಪಂದ್ಯ ನಡೆಯುವ ಬಗ್ಗೆ ಪ್ರಕಟಿಸಲಾಯಿತು. ಡ್ರಗ್ಸ್‌ಗೆ ನೋ ಹೇಳಿ.. ಫುಟ್ಬಾಲ್‌ಗೆ ಎಸ್ ಹೇಳಿ ಎಂಬ ಸಂದೇಶದ ಬಿತ್ತಿಪತ್ರ ಬಿಡುಗಡೆಗೊಳಿಸಲಾಯಿತು. ಪಂದ್ಯಾವಳಿಯ ಉಳಿಕೆ ಹಣದಲ್ಲಿ ಜಿಲ್ಲೆಯ ಇಬ್ಬರು ಬಡ ಮಹಿಳೆಯರಿಗೆ ವಿವಾಹ ಉಚಿತವಾಗಿ ನಡೆಸುವುದಾಗಿ ಘೋಷಿಸಲಾಯಿತು.

ಕ್ರೀಡಾಕೂಟಗಳಿಂದ ಸಮಾಜದಲ್ಲಿ ಸೌಹಾರ್ದತೆಯ ಸಮಾಜ ಸೃಷ್ಟಿಸಲು ಸಾಧ್ಯ ಎಂದು ಗೋಣಿಕೊಪ್ಪ ಗ್ರಾಮ ಪಂಚಾಯಿತಿ ಅಧ್ಯಕ್ಷ ಕುಲ್ಲಚಂಡ ಪ್ರಮೋದ್ ಗಣಪತಿ ಹೇಳಿದರು.

ಆಲ್ ಸ್ಟಾರ್ ಯೂತ್ ಕ್ಲಬ್ ಅಧ್ಯಕ್ಷರಾದ ಸುಧಾಕರ್ ರೈ, ಸಲಹೆಗಾರರಾದ ಮನೆಯಪಂಡ ಶೀಲಾ ಬೋಪಣ್ಣ, ಗೋಣಿಕೊಪ್ಪ ಲಯನ್ಸ್ ಕ್ಲಬ್ ಮಾಜಿ ಅಧ್ಯಕ್ಷ ಪೊನ್ನಿಮಾಡ ಲೋಕೇಶ್ ಕಾರ್ಯಪ್ಪ, ಉದ್ಯಮಿ ಕಿಲನ್ ಗಣಪತಿ, ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆ ಎಂ. ಮಂಜುಳಾ ಶುಭ ಕೋರಿದರು. ರಫೀಜ್ ಮೂಡಬಿದಿರೆ ನಿರೂಪಿಸಿದರು. ಆಲ್ ಸ್ಟಾರ್ ಸ್ಟಾರ್ ಸದಸ್ಯೆ ಮೋನಿಕಾ ಸ್ವಾಗತಿಸಿ, ರುಶೀನಾ ವಂದಿಸಿದರು.

ಮಹದೇಶ್ವರ ಬೆಟ್ಟದಲ್ಲಿ ವಿಜೃಂಭಣೆಯ ಶಿವರಾತ್ರಿ ಮಹಾರಥೋತ್ಸವ


ಶ್ರೀ ಮಲೆ ಮಹದೇಶ್ವರಸ್ವಾಮಿ ಬೆಟ್ಟದಲ್ಲಿ ಶನಿವಾರ ಬೆಳಗ್ಗೆ ಮಹಾಶಿವರಾತ್ರಿ ಮಹಾರಥೋತ್ಸವ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ಉಘೇ... ಉಘೇ... ಮಾದಪ್ಪ

ರಥೋತ್ಸವದಲ್ಲಿ ತಮಿಳುನಾಡು ಸೇರಿದಂತೆ ಚಾಮರಾಜನಗರ, ಬೆಂಗಳೂರು, ಮೈಸೂರು, ಮಂಡ್ಯ, ರಾಮನಗರ, ಕನಕಪುರ, ಚನ್ನಪಟ್ಟಣ, ಮದ್ದೂರು, ದೊಡ್ಡಬಳ್ಳಾಪುರ, ಮಳವಳ್ಳಿ, ಮಂಡ್ಯ, ನಂಜನಗೂಡು, ಟಿ. ನರಸೀಪುರ, ಹೆಚ್.ಡಿ. ಕೋಟೆ ಹಾಗೂ ರಾಜ್ಯದ ವಿವಿಧೆಡೆಯಿಂದ ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತರು ಭಾಗಿಯಾಗಿದ್ದರು.

ರಥವನ್ನು ಎಳೆಯುವಾಗ ಭಕ್ತರು ಜೈ ಮಹತ್ ಮಲೆಯಾ, 'ಉಘೇ ಮಾದಪ್ಪ ಉಘೇ' ಎಂಬಿತ್ಯಾದಿ ಜಯಘೋಷಗಳು ಮುಗಿಲು ಮುಟ್ಟಿದವು. ರಥೋತ್ಸವ ನಡೆದ ಬಳಿಕ ಭಕ್ತರು ರಥವನ್ನು ಸ್ಪರ್ಶಿಸಿ ನಮಸ್ಕರಿಸುವುದರ ಮೂಲಕ ಮಾದಪ್ಪನನ್ನು ನೆನೆದರು.

ಹನೂರು, ಮಾ.1– ತಾಲೂಕಿನ ಶ್ರೀ ಮಲೆ ಮಹದೇಶ್ವರಸ್ವಾಮಿ ಬೆಟ್ಟದಲ್ಲಿ ಶನಿವಾರ ಬೆಳಗ್ಗೆ ಮಹಾಶಿವರಾತ್ರಿ ಮಹಾರಥೋತ್ಸವ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ರಥೋತ್ಸವದ ಅಂಗವಾಗಿ ತೇರನ್ನು ವಿವಿಧ ಪುಷ್ಪ, ತಳಿರು–ತೋರಣ ಹಾಗೂ ಬಣ್ಣ ಬಣ್ಣದ ಬಟ್ಟೆಗಳಿಂದ ಸಿಂಗರಿಸಲಾಗಿತ್ತು. ಬೇಡಗಂಪಣ ಅರ್ಚಕರು ದೇಗುಲದ ಗರ್ಭಗುಡಿಯಲ್ಲಿ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ಬಿಳಿ ಆನೆ ಉತ್ಸವವನ್ನು ನೆರವೇರಿಸಲಾಯಿತು.

ನಂತರ ತೇರಿನ ಬಳಿ ತೆರಳಿ ಧಾರ್ಮಿಕ ವಿಧಿ–ವಿಧಾನಗೊಂದಿಗೆ ಪೂಜಾ ಕೈಂಕರ್ಯ ನಡೆಸಿ, ಬೆಳಗ್ಗೆ 8.10ರ ಸುಮಾರಿಗೆ ಸ್ವಾಮಿಯ ವಿಗ್ರಹವನ್ನು ರಥದಲ್ಲಿ ಕುಳ್ಳಿರಿಸಿ ಬೂದುಕುಂಬಳ ಕಾಯಿಯಿಂದ ದೃಷ್ಟಿ ತೆಗೆಯಲಾಯಿತು. ಬಳಿಕ ಮಹಾಮಂಗಳಾರತಿ ಹಾಗೂ ಬೇಡಗಂಪಣರ 108 ಹೆಣ್ಣು ಮಕ್ಕಳು ಬೆಲ್ಲದ ಆರತಿ ಬೆಳಗಿದ ನಂತರ ಮಹಾರಥೋತ್ಸವಕ್ಕೆ ಚಾಲನೆ ನೀಡಲಾಯಿತು.

ಬಳಿಕ ಸೂಕ್ತ ಪೊಲೀಸ್ ಬಂದೋಬಸ್ತ್‌ನೊಂದಿಗೆ ದೇಗುಲದ ಮುಖ್ಯ ದ್ವಾರದ ಆವರಣದಿಂದ ಸತ್ತಿಗೆ, ಸೂರಿಪಾನಿ, ಛತ್ರಿ, ಚಾಮರ, ನಂದಿಧ್ವಜ ಹಾಗೂ ಮಂಗಳವಾದ್ಯದೊಂದಿಗೆ ದೇಗುಲದ ಸುತ್ತ ಪ್ರದಕ್ಷಿಣೆ ಹಾಕಲಾಯಿತು. ಇದೇ ವೇಳೆ ಹುಲಿ ವಾಹನ, ಬಸವ ವಾಹನ ಹಾಗೂ ರುದ್ರಾಕ್ಷಿ ವಾಹನದ ಉತ್ಸವವನ್ನು ನೆರವೇರಿಸಲಾಯಿತು.

ಈ ವೇಳೆ ಬೇಡಗಂಪಣ ಸಮುದಾಯದ ಹೆಣ್ಣು ಮಕ್ಕಳು ಬೆಲ್ಲದ ಆರತಿ ಹಿಡಿದು ರಥೋತ್ಸವದಲ್ಲಿ ಪಾಲ್ಗೊಂಡಿದ್ದರು. ವೀರಗಾಸೆ ಕುಣಿತ ಭಕ್ತರ ಗಮನ ಸೆಳೆಯಿತು. ರಥೋತ್ಸವದಲ್ಲಿ ನೆರೆದಿದ್ದ ಭಕ್ತರು ತೇರಿಗೆ ಹಣ್ಣು, ದವನ, ಧನ, ಧಾನ್ಯ ಎಸೆದು ನಮಿಸುವುದರ ಮೂಲಕ ಮಾದಪ್ಪನ ಕೃಪೆಗೆ ಪಾತ್ರರಾದರು.

ಸೂಕ್ತ ಪೊಲೀಸ್ ಬಂದೋಬಸ್ತ್: ಮಹಾರಥೋತ್ಸವದ ಹಿನ್ನೆಲೆ ಮಹದೇಶ್ವರ ಬೆಟ್ಟದ ದೇಗುಲದ ಆವರಣದಲ್ಲಿ ಬೆಳಗ್ಗೆ 6 ರಿಂದಲೇ ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತರು ಕಿಕ್ಕಿರಿದು ತುಂಬಿದ್ದರು. ಈ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆಯಿಂದ ಸೂಕ್ತ ಬಂದೋಬಸ್ತ್ ಕಲ್ಪಿಸಲಾಗಿತ್ತು. ರಥದ ಪೂಜಾ ಕೈಂಕರ್ಯದ ವೇಳೆ ಪೊಲೀಸರು ಭಕ್ತರನ್ನು ರಥ ಸಂಚರಿಸುವ ಮಾರ್ಗದಿಂದ ದೂರ ಸರಿಸುವಂತೆ ಸೂಚನೆ ನೀಡುತ್ತಿದ್ದರು. ರಥೋತ್ಸವ ಪ್ರಾರಂಭವಾದ ಬಳಿಕ ಬದಿಯಲ್ಲಿ ನಿಂತಿದ್ದ ಭಕ್ತರು ತೇರನ್ನು ಎಳೆಯಲು ಜಯಘೋಷಗಳನ್ನು ಕೂಗುತ್ತಾ ನಾ ಮುಂದು ತಾ ಮುಂದು ಎಂದು ಮುಂದೆ ಬಂದಾಗ ಪೊಲೀಸರು ಭಕ್ತರನ್ನು ದೂರ ಸರಿಸಲು ಹರಸಾಹಸ ಪಡಬೇಕಾಯಿತು.

ರಥೋತ್ಸವದಲ್ಲಿ ಪ್ರಾಧಿಕಾರದ ಕಾರ್ಯದರ್ಶಿ ಎ.ಈ. ರಘು, ಪ್ರಾಧಿಕಾರದ ನೌಕರರು, ದೇಗುಲದ ಅರ್ಚಕ ವೃಂದ ಹಾಗೂ ಸಿಬ್ಬಂದಿ ಇದ್ದರು.

ಬಜೆಟ್‌ನಲ್ಲಿ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡುವಂತೆ ಎಸ್‌ಡಿಪಿಐ ಆಗ್ರಹ


ಸುದ್ದಿಗೋಷ್ಠಿಯಲ್ಲಿ ಎಸ್‌ಡಿಪಿಐ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಮಹೇಶ್ ಮಾತನಾಡಿದರು.

ಚಾಮರಾಜನಗರ, ಮಾ.1–ರಾಜ್ಯದ ಜೊತೆಯಲ್ಲೇ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ರಾಜ್ಯ ಬಜೆಟ್‌ನಲ್ಲಿ ಆದ್ಯತೆ ನೀಡಬೇಕು ಎಂದು ಎಸ್‌ಡಿಪಿಐ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಮಹೇಶ್ ಆಗ್ರಹಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ವಿವಿಧ ಕ್ಷೇತ್ರಗಳಲ್ಲಿ ಪರಿಣತಿ ಪಡೆದಿರುವವರನ್ನು ಸೇರಿಸಿ ಕರ್ನಾಟಕ ಕಲ್ಯಾಣ ರಾಜ್ಯಕ್ಕಾಗಿ ಜನತಾ ಬಜೆಟ್ ಎಂಬ ಬೇಡಿಕೆಗಳ ಪುಸ್ತಕವನ್ನು ಎಸ್‌ಡಿಪಿಐ ಬಿಡುಗಡೆ ಮಾಡಿದ್ದು, ಪುಸ್ತಕದಲ್ಲಿರುವ ಜನಪರ ಬೇಡಿಕೆಗಳನ್ನು ಈಡೇರಿಸುವಂತೆ ಬೆಂಗಳೂರಿನಲ್ಲಿ ಸರ್ಕಾರಕ್ಕೆ ಹಕ್ಕೊತ್ತಾಯ ಮಂಡಿಸಿ ಬಜೆಟ್‌ನಲ್ಲಿ ಅಳವಡಿಸಿಕೊಳ್ಳುವಂತೆ ಸಿಎಂ, ಸಚಿವರು, ಶಾಸಕರಿಗೆ ಮನವಿ ಪತ್ರ ನೀಡಲಾಗಿದೆ ಎಂದರು.

ಜಿಲ್ಲೆಯಲ್ಲಿ ಆಕ್ಸಿಜನ್ ದುರ್ಘಟನೆಯ ಸಂತ್ರಸ್ತ ಕುಟುಂಬಸ್ಥರಲ್ಲಿ ಒಬ್ಬರಿಗೆ ಖಾಯಂ ಸರ್ಕಾರಿ ನೌಕರಿ ನೀಡುವ ಕುರಿತು ಸರ್ಕಾರ ಭರವಸೆಯನ್ನು ನೀಡಿತ್ತು. ಈಗ ಬಜೆಟ್‌ನಲ್ಲಿ ಖಾಯಂ ಸರ್ಕಾರಿ ನೌಕರಿಯನ್ನು ಘೋಷಣೆ ಮಾಡಬೇಕು. ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡ ನಿರ್ಮಾಣಕ್ಕೆ ವಿಶೇಷ ಅನುದಾನ ನೀಡಬೇಕು, ಜಿಲ್ಲಾ ಕೇಂದ್ರದಲ್ಲಿ ಉರ್ದು ಪ್ರೌಢಶಾಲೆ ಮಂಜೂರು ಮಾಡಬೇಕು ಎಂದರು.

ಸರ್ಕಾರಿ ಶಾಲೆಗಳ ಅಭಿವೃದ್ಧಿ, ಕುಡಿಯುವ ನೀರಿನ ಯೋಜನೆ, ಸುವರ್ಣಾವತಿ ಮತ್ತು ಚಿಕ್ಕಹೊಳೆ ಅಭಿವೃದ್ಧಿ ಹಾಗೂ ಜಿಲ್ಲಾ ಕೇಂದ್ರ ಸೇರಿದಂತೆ ಎಲ್ಲಾ ತಾಲೂಕು ಕೇಂದ್ರಗಳಿಗೂ ಸಮಗ್ರ ಅಭಿವೃದ್ಧಿಗೆ ವಿಶೇಷ ಅನುದಾನ ನೀಡಬೇಕು ಎಂದು ಆಗ್ರಹಿಸಿದರು.

ನಂತರ ಎಸ್‌ಡಿಪಿಐ ರಾಜ್ಯ ಸಮಿತಿ ಸದಸ್ಯ ಅಬ್ರಾರ್ ಅಹಮದ್ ಮಾತನಾಡಿ, ಅಲ್ಪಸಂಖ್ಯಾತರ ಜನಸಂಖ್ಯೆಗೆ ಅನುಗುಣವಾಗಿ ಬಜೆಟ್‌ನಲ್ಲಿ ಶೇ.14ರಷ್ಟು ಅನುದಾನವನ್ನು ನೀಡಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಎಸ್‌ಡಿಪಿಐ ಜಿಲ್ಲಾಧ್ಯಕ್ಷ ಖಲೀಲ್ ಉಲ್ಲಾ, ಉಪಾಧ್ಯಕ್ಷ ನಯಾಜ್ ಉಲ್ಲಾ, ಮಜರ್‌ಖಾನ್ ಇದ್ದರು.

ಗುಂಡ್ಲುಪೇಟೆ ಪುರಸಭೆಗೆ 79.86 ಲಕ್ಷ ಉಳಿತಾಯ ಬಜೆಟ್


ಗುಂಡ್ಲುಪೇಟೆ ಪುರಸಭೆಯಲ್ಲಿ ಜಿ.ಎಸ್.ಮಧುಸೂದನ್ ಬಜೆಟ್ ಮಂಡಿಸಿದರು. ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್, ಉಪಾಧ್ಯಕ್ಷ ಅಣ್ಣಯ್ಯಸ್ವಾಮಿ, ಮುಖ್ಯಾಧಿಕಾರಿ ವಸಂತಕುಮಾರಿ ಇದ್ದರು.

ಗುಂಡ್ಲುಪೇಟೆ, ಮಾ.1– ಇಲ್ಲಿನ ಪುರಸಭೆಯ 2025–26ನೇ ಸಾಲಿನ ಉಳಿತಾಯ ಬಜೆಟ್‌ನ್ನು ಪುರಸಭೆ ಅಧ್ಯಕ್ಷ ಜಿ.ಎಸ್.ಮಧುಸೂದನ್ ಮಂಡಿಸಿದರು.

ಶುಕ್ರವಾರ ಪುರಸಭೆಯ ಸಭಾಂಗಣದಲ್ಲಿ ಕ್ಷೇತ್ರದ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಉಪಸ್ಥಿತಿಯಲ್ಲಿ ಅಧ್ಯಕ್ಷ ಜಿ.ಎಸ್. ಮಧುಸೂದನ್ ಬಜೆಟ್ ಮಂಡಿಸಿ ಮಾತನಾಡಿ, ಪುರಸಭೆಯ ವಿವಿಧ ಮೂಲಗಳಿಂದ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಅನುದಾನಗಳು ಸೇರಿದಂತೆ 26 ಕೋಟಿ 58 ಲಕ್ಷದ 86 ಸಾವಿರ ರೂ. ಆಯವ್ಯಯ ಒಳಗೊಂಡಿದೆ. ಇದರಲ್ಲಿ ಅಂತಿಮವಾಗಿ 79 ಲಕ್ಷದ 86 ಸಾವಿರ ರೂ.ಗಳ ಉಳಿತಾಯ ಬಜೆಟ್ ಆಗಿದೆ ಎಂದು ಹೇಳಿದರು.

ಪಟ್ಟಣದಲ್ಲಿ ಸ್ವಚ್ಛತೆ, ಬೀದಿದೀಪಗಳು ಮತ್ತು ಪ್ಲಾಸ್ಟಿಕ್ ಹಾವಳಿಯನ್ನು ತಡೆಗಟ್ಟುವುದರೊಂದಿಗೆ ಉತ್ತಮ ರಸ್ತೆ ಮಾಡಲು ಆದ್ಯತೆ ನೀಡಲಾಗಿದೆ. ಪಟ್ಟಣದ ರಸ್ತೆ ಬದಿಯ ತಳ್ಳುಗಾಡಿಗಳ ತಿಂಡಿ–ತಿನಿಸು ಮಾರಾಟ ಮಾಡುವವರಿಗೆ ವಾಹನಗಳ ಪಾರ್ಕಿಂಗ್ ಸೇರಿದಂತೆ ಎಲ್ಲಾ ಸವಲತ್ತುಗಳು ಇರುವ ಪ್ರದೇಶವನ್ನು ಗುರ್ತಿಸಿ ಸ್ಥಳಾಂತರಿಸಲಾಗುವುದು. ಸರ್ಕಾರ ಹೋಟೆಲುಗಳ ಆಹಾರ ತಯಾರಿಕೆಯಲ್ಲಿ ಪ್ಲಾಸ್ಟಿಕ್ ಬಳಕೆ ನಿಷೇಧಿಸಿದ್ದು, ಸಾರ್ವಜನಿಕರು ಸಹಕಾರ ನೀಡಿದರೆ ತಾಲೂಕನ್ನು ಪ್ಲಾಸ್ಟಿಕ್ ಮುಕ್ತ ಮಾಡಲಾಗುವುದು. ಬೆಳೆಯುತ್ತಿರುವ ಪಟ್ಟಣದ ಪುರಸಭೆ ಕಚೇರಿಗೆ ನೂತನ ಕಟ್ಟಡ ನಿರ್ಮಾಣ ಅಗತ್ಯವಿದೆ. ಇದಕ್ಕಾಗಿ ಸರ್ಕಾರದಿಂದ 7.5 ಕೋಟಿ ರೂ.ಗಳ ಅನುದಾನ ಕೋರಲಾಗಿದೆ ಎಂದರು.

ಪುರಸಭೆ ಮುಖ್ಯಾಧಿಕಾರಿ ವಸಂತಕುಮಾರಿ ಮಾತನಾಡಿ, ಪಟ್ಟಣದ ಸಮಗ್ರ ಅಭಿವೃದ್ಧಿ ಹಾಗೂ ಮೂಲ ಸೌಕರ್ಯವನ್ನು ನೀಡುವ ದೃಷ್ಟಿಯಿಂದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಅವಿರತವಾಗಿ ಶ್ರಮಿಸುತ್ತಿದ್ದಾರೆ. ತೆರಿಗೆ ಸಂಗ್ರಹದಲ್ಲಿ ಗುಂಡ್ಲುಪೇಟೆ ಪುರಸಭೆ ಉತ್ತಮ ಸ್ಥಾನವನ್ನು ಪಡೆದಿದೆ ಎಂದರು. ವಿಪಕ್ಷ ನಾಯಕ ಪಿ.ಗಿರೀಶ್ ಮಾತನಾಡಿ, ಪಟ್ಟಣ ದಿನೇ ದಿನೆ ಬೆಳೆಯುತ್ತಿದ್ದು ಪಟ್ಟಣವನ್ನು ಮತ್ತಷ್ಟು ಮಾದರಿಯನ್ನಾಗಿಸಲು ಶಾಸಕರು ಸರ್ಕಾರದಿಂದ ಇನ್ನೂ ಹೆಚ್ಚಿನ ಅನುದಾನ ತಂದು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಸಭೆಯಲ್ಲಿ ಉಪಾಧ್ಯಕ್ಷ ಅಣ್ಣಯ್ಯಸ್ವಾಮಿ, ಸದಸ್ಯರಾದ ನಾಗೇಶ್, ಕುಮಾರ್, ರಾಜಗೋಪಾಲ, ಶಶಿಧರ(ದೀಪು), ಮಹದೇವಮ್ಮ, ನಿರ್ಮಲಾ, ಭಾಗ್ಯಲಕ್ಷ್ಮಿ, ಅನ್ನಪೂರ್ಣ, ಶ್ರೀನಿವಾಸ, ಇಂಜಿನಿಯರ್ ಮಂಜುನಾಥ್, ಬಿಲ್ ಕಲೆಕ್ಟರ್ ಪುಟ್ಟಸ್ವಾಮಿ, ಶಿವು, ರವಿ, ಗು.ಜಿ.ರಮೇಶ್ ಸೇರಿದಂತೆ ಸಿಬ್ಬಂದಿ ಭಾಗವಹಿಸಿದ್ದರು.

ಕೇಂದ್ರ ಸರ್ಕಾರದಿಂದಲೇ ಎಸ್ಸಿ, ಎಸ್ಟಿ ವರ್ಗಕ್ಕೆ ವಂಚನೆ: ಸಚಿವ ಡಾ.ಹೆಚ್‌ಸಿಎಂ ಆರೋಪ

ಚಾಮರಾಜನಗರ: ಕೇಂದ್ರ ಸರ್ಕಾರವೇ ಎಸ್‌ಸಿ,ಎಸ್ಟಿ ಸಮುದಾಯಕ್ಕೆ ವಂಚನೆ ಮಾಡಿದೆ ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಆರೋಪಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಎಸ್‌ಸಿಪಿ ಟಿಎಸ್‌ಪಿ ಯೋಜನೆಗಳಿಗೆ 12 ಲಕ್ಷ ಕೋಟಿ ಬದಲು ಕೇವಲ 60 ಸಾವಿರ ಕೋಟಿ ನೀಡಿದೆ. ಈ ಅನ್ಯಾಯದ ಬಗ್ಗೆ ರಾಜ್ಯ ಬಿಜೆಪಿ ನಾಯಕರು ಪ್ರಶ್ನಿಸಬೇಕು ಎಂದು ಆಗ್ರಹಿಸಿದರು.

ಕೇಂದ್ರ ಸರ್ಕಾರದಲ್ಲಿ 94 ಸಾವಿರ ಬ್ಯಾಕ್‌ಲಾಗ್ ಹುದ್ದೆಗಳು ಖಾಲಿ ಇವೆ. ಇದನ್ನೆಲ್ಲಾ ಪ್ರಶ್ನಿಸುವುದನ್ನು ಬಿಟ್ಟು ನಮ್ಮ ಮೇಲೆ ಸುಳ್ಳು ಆರೋಪ ಮಾಡ್ತಿದ್ದಾರೆ ಎಂದರು. ನಾವು ಎಸ್‌ಸಿಪಿ ಟಿಎಸ್‌ಪಿ ಕಾಯ್ದೆ ಮಾಡಿದ್ದೇವೆ. ಗ್ಯಾರಂಟಿ ಯೋಜನೆಗಳಿಗೆ ಸಾರ್ವಜನಿಕವಾಗಿ ಎಸ್‌ಸಿಪಿ ಟಿಎಸ್‌ಪಿ ಹಣ ಬಳಸಲು ಸಾಧ್ಯವಿಲ್ಲ, ಬಳಸೋದು ಇಲ್ಲ ಎಂದರು.

'ಅಣ್ಣ ಸಿಎಂ ಆಗಬೇಕೆಂಬ ಆಸೆ ಇದೆ' ಎಂಬ ಡಿ.ಕೆ.ಸುರೇಶ್ ಹೇಳಿಕೆ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಅದು ಅವರ ಆಸೆ, ಅವರನ್ನೇ ಕೇಳಿ, ಅದು ನನಗೆ ಗೊತ್ತಿಲ್ಲ ಎಂದರು. ನಾವು 140 ಜನ ಇದ್ದೇವೆ. ನಮ್ಮ ಸರ್ಕಾರದ ಭದ್ರವಾಗಿದೆ ಎಂದರು.



ಗ್ರಾಮೀಣ ಸಂಸ್ಕೃತಿಯ ಸೊಗಡು ಸೂಸುವ ಕ್ಯಾತಮಾರನಹಳ್ಳಿ 'ಹುಲಿಯಮ್ಮ' ಜಾತ್ರೆ

ಅನಾದಿ ಕಾಲದಲ್ಲಿ ಹಬ್ಬವು ಕೇವಲ ನಮ್ಮ ಗ್ರಾಮಕ್ಕೆ ಸೀಮಿತವಾಗಿತ್ತು. ಆಗ ನಮ್ಮ ನಾಯಕ ಜನಾಂಗ ಹಾಗೂ ದಲಿತರು ಸೇರಿ ಹಬ್ಬ ಆಚರಿಸುತ್ತಿದ್ದರು. ಆದರೀಗ ಮೈಸೂರು ಬೆಳೆದಂತೆ ಗ್ರಾಮವು ನಗರ ವ್ಯಾಪ್ತಿಗೆ ಸೇರಿತಲ್ಲದೆ, ನಮ್ಮ ಅಕ್ಕ ಪಕ್ಕದಲ್ಲಿಯೇ ಅನ್ಯ ಧರ್ಮಿಯರು ನೆಲೆಸಿದ್ದಾರೆ. ಆದರೂ, ನಮ್ಮ ಗ್ರಾಮದಲ್ಲಿ ಎರಡು ವರ್ಷಕ್ಕೊಮ್ಮೆ ಬಹಳ ವಿಜೃಂಭಣೆಯಿಂದ ನಡೆಯುವ ಈ ಹುಲಿಯಮ್ಮ ಜಾತ್ರೆಗೆ ಅನ್ಯ ಧರ್ಮಿಯರು ಸಹ ಸಂಪೂರ್ಣ ಸಹಕಾರ ನೀಡುವ ಮೂಲಕ ಸೌಹಾರ್ದತೆ ಮೆರೆದು, ಜಾತ್ರೆ ನಡೆಯುತ್ತಾ ಬರುತ್ತಿರುವುದು ಹೆಮ್ಮೆಯ ಸಂಗತಿ.

ಮಾರ್ಚ್ 3ರಿಂದ ಮಾರ್ಚ್ 12ರ ವರೆಗೆ ಉತ್ಸವ



ಕ್ಯಾತಮಾರನಹಳ್ಳಿಯಲ್ಲಿರುವ ಹುಲಿಯಮ್ಮ ದೇವಸ್ಥಾನ.

ಗ್ರಾಮೀಣ ಸಂಸ್ಕೃತಿ ಹಬ್ಬದ ಆಚರಣೆಗಳು ಸೌಹಾರ್ದತೆಯ ಸಂಕೇತವಾಗಿದ್ದು, ನವೆಂಬರ್, ಡಿಸೆಂಬರ್ ಮಾಸದಲ್ಲಿ ನಡೆಯುವ ಸುಗ್ಗಿಯ ನಂತರ ಹಬ್ಬಗಳ ಆಚರಣೆ ಹಿಂದೂ ಧರ್ಮದ ಸಂಪ್ರದಾಯ. ಭಾರತ ಹೆಚ್ಚಿನ ಭಾಗ ಹಳ್ಳಿಗಳಿಂದ ಕೂಡಿದ್ದು, ರೈತರು ವರ್ಷ ಪೂರ್ತಿ ಜಮೀನಿನಲ್ಲಿ ದುಡಿದು ತಮ್ಮ ಬೆಳೆ ಮನೆಗೆ ತಲುಪಿದ ನಂತರ ವಿಶ್ರಾಂತಿ ವೇಳೆ ಆಯಾ ಗ್ರಾಮೀಣ ಭಾಗಕ್ಕೆ ಸಂಬಂಧಿಸಿದ ದೇವರ ಹೆಸರಲ್ಲಿ ಹಬ್ಬಗಳನ್ನು ಆಚರಿಸಿ ಸಂಭ್ರಮಿಸುವುದು ವಾಡಿಕೆ. ಇಂತಹ ಹಬ್ಬಗಳು ಅಲ್ಲಿನ ಸ್ಥಳ ಮಹಿಮೆ, ಜನರ ಆಚಾರ, ವಿಚಾರ, ಉಡುಗೆ-ತೊಡುಗೆ ಸಂಪ್ರದಾಯಗಳನ್ನು ಬಿಂಬಿಸುತ್ತವಲ್ಲದೆ, ಹಬ್ಬದಂದು ಕೆಲವು ನಂಬಲಸಾಧ್ಯವಾದ ಪವಾಡಗಳು ನಡೆಯುವುದು ಹಬ್ಬಗಳಲ್ಲಿನ ವಿಶೇಷ.

ಇಂತಹ ಸಂಪ್ರದಾಯಬದ್ಧ ಹಬ್ಬ ಆಚರಣೆಯಲ್ಲಿ ಮೈಸೂರು ನಗರದ ಕ್ಯಾತಮಾರನಹಳ್ಳಿ ಜನರು ಇನ್ನೂ ತಮ್ಮ ಗ್ರಾಮೀಣ ಸೊಗಡನ್ನು ಉಳಿಸಿ ಬೆಳೆಸಿಕೊಂಡು ಬಂದಿದ್ದು, ಪ್ರತಿ 2 ವರ್ಷಕ್ಕೊಮ್ಮೆ ಗ್ರಾಮ ದೇವತೆ 'ಹುಲಿಯಮ್ಮ' ಹೆಸರಲ್ಲಿ ಹಬ್ಬವನ್ನು ಬಹಳ ವಿಜೃಂಭಣೆಯಿಂದ ಆಚರಿಸುವುದರ ಮೂಲಕ ಹುಲಿಯಮ್ಮ ಜಾತ್ರೆ ಮೈಸೂರು ಸುತ್ತಮುತ್ತಲಿನ ಹತ್ತಾರು ಹಳ್ಳಿಗಳಲ್ಲಿ ಮನೆಮಾತಾಗಿದೆ.

ಪ್ರಮುಖವಾಗಿ ನಾಯಕ ಜನಾಂಗ ಹಾಗೂ ದಲಿತರು ಒಟ್ಟಿಗೆ ಸೇರಿ ಆಚರಿಸುವ ಈ ಹಬ್ಬಕ್ಕೆ ಅರಸು, ಬ್ರಾಹ್ಮಣ, ಒಕ್ಕಲಿಗ, ವೀರಶೈವರು ಸೇರಿದಂತೆ ಇತರೆ ಎಲ್ಲಾ ಜನಾಂಗಗಳೂ ತಮ್ಮ ಸಹಕಾರ ನೀಡುತ್ತಾ ಬಂದಿದ್ದಾರೆ. ಹತ್ತು ದಿನ ನಡೆಯುವ ಈ ಜಾತ್ರೆ ಪ್ರತಿದಿನವೂ ಗ್ರಾಮೀಣ ಸೊಗಡನ್ನು ಬಿಂಬಿಸುವ ಸಾಂಸ್ಕೃತಿಕ ಕಾರ್ಯಕ್ರಮವನ್ನು ಒಳಗೊಂಡಿರುತ್ತದೆ. ಮೈಸೂರು ನಗರದ ಯಾವುದೇ ಬಡಾವಣೆಯಲ್ಲಿಲ್ಲದಷ್ಟು ದೇವಾಲಯಗಳು ಈ ಕ್ಯಾತಮಾರನಹಳ್ಳಿಯಲ್ಲಿದ್ದು, ಹುಲಿಯಮ್ಮ ದೇವಾಲಯ ಇಲ್ಲಿನ ಪ್ರಮುಖ ದೇವಾಲಯ, ಅಕ್ಕಪಕ್ಕದಲ್ಲಿಯೇ ಮಹದೇಶ್ವರ, ಗಣಪತಿ, ಸಿದ್ಧಪ್ಪಾಜಿ. ಚಾಮುಂಡಮ್ಮ, ಚಿಕ್ಕಮ್ಮ, ಭೈರವೇಶ್ವರ, ವೆಂಕಟರಮಣ ಸ್ವಾಮಿ ಹಾಗೂ ಯತ್ತಪ್ಪ (ಹುಲಿಯಮ್ಮನ ಮಗ) ದೇವಾಲಯಗಳಿದ್ದು, ಅಲಂಕೃತವಾಗಿ ಕಟ್ಟಲ್ಪಟ್ಟಿರುವ ಇಲ್ಲಿನ ದೇವಾಲಯಗಳು ಭಕ್ತರನ್ನು ಕೈಬೀಸಿ ಕರೆಯುವಂತಿದ್ದು, ನಿತ್ಯವೂ ಪೂಜೆ ಪುರಸ್ಕಾರ ನಡೆಯುತ್ತಲೇ ಇರುತ್ತವೆ. ಈ ಒಂಭತ್ತು ದೇವಾಲಯಗಳ ಮಧ್ಯ ದೊಡ್ಡ ಮೈದಾನವಿದ್ದು, ಸಾವಿರಾರು ಭಕ್ತರು ಹುಲಿಯಮ್ಮ ಜಾತ್ರೆಯಂದು ಕುಣಿಯಲು ಹಾಗೂ ಇತರ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಉತ್ತಮ ವೇದಿಕೆಯಾಗಿದೆ.

ಹುಲಿಯಮ್ಮ ಕ್ಯಾತಮಾರನಹಳ್ಳಿಗೆ ಬಂದ ಹಿನ್ನೆಲೆ: ಹುಲಿಯಮ್ಮ ಇಲ್ಲಿನ ಜನರ ಆರಾಧ್ಯ ದೈವ, ಮೈಸೂರು ನಗರ ಬೆಳೆಯುವುದಕ್ಕೆ ಮುಂಚೆ ಕ್ಯಾತಮಾರನ ಹಳ್ಳಿ ಒಂದು ಗ್ರಾಮವಾಗಿತ್ತು. ನೂರಾರು ವರ್ಷಗಳ ಹಿಂದೆ ಗ್ರಾಮಕ್ಕೆ ಬರಗಾಲ ಉಂಟಾದಾಗ ದವಸ ಧಾನ್ಯ ಹಾಗೂ ದನಗಳನ್ನು ತರಲು ದನಗಳ ಜಾತ್ರೆ ನಡೆಯುತ್ತಿದ್ದ ಹುಲಿಯೂರು ದುರ್ಗಕ್ಕೆ ತಮಟೆ, ವಾದ್ಯ ಸಮೇತ ಕುಣಿಯುತ್ತಾ ಹೋಗುತ್ತಾರಲ್ಲದೆ, ಅಲ್ಲಿ ಜಾತ್ರೆಯಲ್ಲಿ ತಾವೂ ಸಹ ತಮ್ಮ ವಾದ್ಯದೊಂದಿಗೆ ಅಲ್ಲಿನ ಪ್ರಮುಖ ದೇವತೆ ಹುಲಿಯಮ್ಮ ದೇವಿಯ ಬಳಿ ಕುಣಿಯುತ್ತಾರೆ. ತಮ್ಮ ಕೆಲಸದ ನಂತರ ಹುಲಿಯೂರು ದುರ್ಗದಿಂದ ವಾಪಸ್ ಬರುವಾಗ ಇವರ ಕುಣಿತ ಹಾಗೂ ದೈವಭಕ್ತಿಗೆ ಮನಸೋತ ಅಲ್ಲಿನ ಹುಲಿಯಮ್ಮ ಇವರನ್ನೇ ಹಿಂಬಾಲಿಸಿ ಬಂದು ಕ್ಯಾತಮಾರನಹಳ್ಳಿ ಗ್ರಾಮದಲ್ಲಿ ನೆಲೆಸಿದಳೆಂಬ ಪ್ರತೀತಿ ಇದೆ. ಆ ನಂತರ ದೇವಿಯು ಒಬ್ಬ ಮಹಿಳೆ ಮೈಮೇಲೆ ಬಂದು ತನಗೊಂದು ದೇವಾಲಯ ಕಟ್ಟಿಸಿ ಪೂಜಿಸಲು ಆಜ್ಞಾಪಿಸಿದಳೆಂದೂ, ಅದರಂತೆ ಪೂಜೆ ಪುರಸ್ಕಾರಗಳು ನಡೆಯುತ್ತಾ ಬಂದಿರುವುದಾಗಿ ಇಲ್ಲಿನ ಹಿರಿಯರು ಹೇಳುತ್ತಾರೆ.

ಎರಡು ವರ್ಷಕ್ಕೊಮ್ಮೆ ನಡೆಯುವ ಹುಲಿಯಮ್ಮ ಜಾತ್ರೆ ಈ ಬಾರಿ ಮಾ.3 ರಿಂದ 12ರ ತನಕ ಅಂದರೆ 10 ದಿನಗಳ ಕಾಲ ನಡೆಯುತ್ತದೆ. ಪ್ರತಿದಿನವೂ ಸಾಂಸ್ಕೃತಿಕ ಹಾಗೂ ದೈವೀ ಸ್ವರೂಪ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ. ಪ್ರತಿ ಕಾರ್ಯಕ್ರಮವೂ ವೈಶಿಷ್ಟ್ಯತೆಯಿಂದ ಕೂಡಿರುತ್ತದೆ.

ಮೊದಲನೇ ದಿನ ಮರ ಕಡಿದು ತರುವುದು: ಕ್ಯಾತಮಾರನಹಳ್ಳಿಯ ಹುಲಿಯಮ್ಮ ಜಾತ್ರೆಯಲ್ಲಿ 60 ರಿಂದ 70 ಅಡಿ ಎತ್ತರದ ಅಡಿಕೆ ಮರವನ್ನು ದೇವಾಲಯದ ಮುಂದೆ ನಿಲ್ಲಿಸುವುದು ವಾಡಿಕೆ, ಇದನ್ನು ನಿಶಾನಿ ಮರ ಎಂತಲೂ ಕರೆಯುತ್ತಾರೆ. ಅದು ಭಕ್ತರ ಆಕರ್ಷಣೀಯ ಕೇಂದ್ರಬಿಂದು.

ಈ ರೀತಿಯ ಎತ್ತರವಾದ ಅಡಿಕೆ ಮರವನ್ನು ಮೊದಲ ದಿನ ಅಂದರೆ ಮಾ.3 ರಂದು ನಾಯಕ ಹಾಗೂ ದಲಿತ ಜನಾಂಗ



ಹಾಲಿನ ನಾರಾಯಣ (ಲೋಲಪ್ಪ)
ಕ್ಯಾತಮಾರನಹಳ್ಳಿ ಗ್ರಾಮದ ಮುಖಂಡರು

ದವರೆಲ್ಲಾ ಸೇರಿ ಮೈಸೂರು ನಗರದ ರಾಮಾನುಜ ರಸ್ತೆ ಎಲೆ ತೋಟ (ಮಧುವನಕ್ಕೆ) ವಾದ್ಯ ಸಮೇತ ಸಾವಿರಾರು ಮಂದಿ ಬಂದು ತೋಟದಲ್ಲಿ ಎತ್ತರವಾದ ಮರಕ್ಕೆ ಪೂಜೆ ಸಲ್ಲಿಸುತ್ತಾರೆ. ಯಾವ ಮರ ದೇವಿ ಸ್ವರೂಪದಿಂದ ವಾಲುತ್ತದೆಯೋ ಅದನ್ನು ಗುರುತಿಸಿ ಅದು ಕೆಳಗೆ ಬೀಳದಂತೆ ಕಡಿದು ಎಲ್ಲರೂ ಹೊತ್ತುಕೊಂಡು ಕುಣಿಯುತ್ತಾ, ಹಾಡು ಹೇಳುತ್ತಾ, ಮೆರವಣಿಗೆಯಲ್ಲಿ ದೇವಾಲಯಕ್ಕೆ ತಂದು ಸಾಂಪ್ರದಾಯಿಕವಾಗಿ ಪೂಜೆ ಸಲ್ಲಿಸಿ ಮಲಗಿಸುತ್ತಾರೆ.

2ನೆಯ ದಿನ : ಮಂಗಳವಾರ ಗ್ರಾಮದ ಪ್ರತಿ ಮನೆಯ ಮಹಿಳೆಯರು ತಂಬಿಟ್ಟು ಆರತಿ ತರುತ್ತಾರೆ. ಈ ಕಾರ್ಯಕ್ರಮವನ್ನು ತಂಪು ಎಂತಲೂ ಕರೆಯುತ್ತಾರೆ. ದೇವಸ್ಥಾನದ ಬಳಿ ತಂದ ನಂತರ ಹುಲಿಯಮ್ಮನಿಗೆ ತಂಬಿಟ್ಟಿನ ಆರತಿ ಎತ್ತಿ ಪೂಜಿಸಿ ಹೋಗುತ್ತಾರೆ.

3ನೆಯ ದಿನ: ಬುಧವಾರ ಮರಿಸೊಳ್ಳು ಕಾರ್ಯಕ್ರಮವಿರುತ್ತದೆ. ಅಂದರೆ ಗ್ರಾಮದ ಪ್ರತಿ ಮನೆಯ ಪುಟ್ಟ ಹೆಣ್ಣು ಮಕ್ಕಳು ಹೊಸ ಹೊಸ ಉಡುಗೆ ತೊಡುಗೆ ತೊಟ್ಟು ಬೆಲ್ಲವನ್ನು ತಟ್ಟೆಯಲ್ಲಿಟ್ಟು ಅದರ ಕುಳಿಯಲ್ಲಿ ದೀಪ ಹಚ್ಚಿ ತಲೆಯ ಮೇಲೆ ಹೊತ್ತು ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮೂಲಕ ದೇವಸ್ಥಾನಕ್ಕೆ ಬರುತ್ತಾರೆ. ಈ ಕಾರ್ಯಕ್ರಮ ನೋಡುಗರ ಕಣ್ಮನಸೆಳೆಯುವಷ್ಟು ಆಕರ್ಷಣೀಯವಾಗಿರುತ್ತದೆ. ಇದನ್ನು ನೋಡಲು ಸಾವಿರಾರು ಜನ ಸೇರಿರುತ್ತಾರೆ. ಪೂಜೆ ನಂತರ ಬೆಲ್ಲವನ್ನು ದೇವಾಲದ ಬಾಗಿಲಿನಿಂದ ಭಕ್ತರ ಕಡೆ ಎಸೆಯುತ್ತಾರೆ. ಯಾರಿಗೆ ಆ ಬೆಲ್ಲದ ಚೂರು ಸಿಗುತ್ತದೆಯೋ ಅವರು ಪ್ರಸಾದ ಸಿಕ್ಕಿತೆಂದು ತಮ್ಮ ಮನೆಗಳಿಗೆ ಕೊಂಡೊಯ್ಯುತ್ತಾರೆ.

4ನೇ ದಿನ: ಗುರುವಾರ ಮಧುವನದಿಂದ ಹಬ್ಬದ ಮೊದಲ ದಿನವೇ ತಂದಿದ್ದ ಅಡಿಕೆ ಮರಕ್ಕೆ (ಈ ಮರವನ್ನು ಸಂಪ್ರದಾಯದಂತೆ ನಿಶಾನಿ ಮರ ಎಂತಲೇ ಕರೆಯುತ್ತಾರೆ) ವಿಶೇಷ ಪೂಜೆ ಸಲ್ಲಿಸಿ ಸುಣ್ಣ ಬಣ್ಣ ಬಳಿದು ದೇವಾಲಯದ ಮುಂಭಾಗದಲ್ಲಿ ಅಂದು ಮಧ್ಯಾಹ್ನದ ವೇಳೆಗೆ ನೆಟ್ಟಗೆ ನಿಲ್ಲಿಸುತ್ತಾರೆ. ಕಂಬಕ್ಕೆ ವಿಶೇಷ ದೀಪಾಲಂಕಾರವೂ ಆಗಿರುತ್ತದೆ. ಅದೇ ದಿನ ಸಾಯಂಕಾಲ ಹುಲಿಯಮ್ಮ ದೇವಿಗೆ ಕರಕಲು ಹಾಕುವ ಕಾರ್ಯಕ್ರಮವಿರುತ್ತದೆ. ಇದು ಕೂಡ ಹಬ್ಬದ ಪ್ರಮುಖ ಕಾರ್ಯಕ್ರಮಗಳಲ್ಲಿ ಒಂದಾಗಿದೆ.

5ನೇ ದಿನ: ಶುಕ್ರವಾರದಿಂದ ದೇವಾಲಯದ ಮುಂದೆ ತಮಟೆ ವಾದ್ಯದೊಂದಿಗೆ ಕಣಿತ ಪ್ರಾರಂಭವಾಗುತ್ತದೆ. ರಾತ್ರಿ 8 ಗಂಟೆಯಿಂದ 9ರ ತನಕ ಮಕ್ಕಳು ಕೋಲಾಟದೊಂದಿಗೆ ಕುಣಿಯುತ್ತಾರೆ. 9 ಗಂಟೆಯಿಂದ ರಾತ್ರಿ 12ರ ತನಕ ದೊಡ್ಡವರು ಕೋಲಾಟದೊಂದಿಗೆ ವಿವಿಧ ವೇಷ ಭೂಷಣ ಧರಿಸಿ ಕುಣಿಯುತ್ತಿರುತ್ತಾರೆ. ಈ ಕುಣಿತವನ್ನು ನೋಡಲು ಗ್ರಾಮಕ್ಕೆ ಬಂದಿರುವ ನೆಂಟರು ಹಾಗೂ ಗ್ರಾಮದ ಹೆಂಗಸರು, ಮಕ್ಕಳು ರಾತ್ರಿ 10 ಗಂಟೆ ತನಕ ಬಂದು ಹೋಗುತ್ತಾರೆ.

6ನೇ ದಿನ: ಶನಿವಾರವೂ ಇದೇ ಕುಣಿತದ ಕಾರ್ಯಕ್ರಮ ಮುಂದುವರೆಯುತ್ತದೆ.

7ನೇ ದಿನ: ಭಾನುವಾರ ಹುಲಿಯಮ್ಮ ದೇವಿಗೆ ಬಾಳೆಕಂಬದಿಂದ ಅಲಂಕಾರ ಮಾಡುತ್ತಾರೆ. ಈ ಕಾರ್ಯ ರಾತ್ರಿ 12ರಿಂದ ಬೆಳಗಿನ ಜಾವ ಗಂಟೆವರೆಗೂ ನಡೆಯುತ್ತಿರುತ್ತದೆ.

8ನೇ ದಿನ: ಸೋಮವಾರ ಹುಲಿಯಮ್ಮ ಜಾತ್ರೆಯ ಪ್ರಮುಖ ದಿನವಾಗಿದ್ದು, ಅಂದು ಬೆಳಗ್ಗೆ 10 ಗಂಟೆಗೆ ಗ್ರಾಮದ ಗಂಡಸರೆಲ್ಲರೂ (ಯುವಕರಾದಿಯಾಗಿ ವಾದ್ಯಮೇಳದಲ್ಲಿ ಕುಣಿಯುತ್ತಾ, ಹುಲಿಯಮ್ಮ ದೇವಿಯ ಸಂಬಂಧವಿರುವ ಕುರಬಾರಹಳ್ಳಿ ದೇವಾಲಯಕ್ಕೆ ಹೋಗಿ ಪೂಜೆ ಸಲ್ಲಿಸುತ್ತಾರೆ. ಅಲ್ಲಿ ಹೋಗಿದ್ದವರಿಗೆಲ್ಲಾ ಮಜ್ಜಿಗೆ, ಪಾನಕ ನೀಡಲಾಗುತ್ತದೆ. 3ಗಂಟೆಗೆ ಅಲ್ಲಿಂದ ವಾಪಸ್ ಬಂದ ನಂತರ, ಕ್ಯಾತಮಾರನಹಳ್ಳಿಗೆ ಸುಮಾರು 1 ಕಿ.ಮೀ. ಅಂತರದಲ್ಲಿರುವ ಕುಲದ ತೋಟಕ್ಕೆ ಎಲ್ಲರೂ ತೆರಳುತ್ತಾರೆ. ಅಲ್ಲಿ ಬ್ರಾಹ್ಮಣ, ಅರಸು, ವೀರಶೈವ ಸೇರಿದಂತೆ ಇತರ ಜನಾಂಗದ ಮುಖಂಡರೂ ಸೇರಿರುತ್ತಾರೆ.


ಕುಲದ ತೋಟ ಅಂದರೆ ಅದು ಹುಲಿಯಮ್ಮ ದೇವಿಯ ಆಸ್ತಿಯಾಗಿದ್ದು, ಜಾತ್ರೆಯ ಆಕರ್ಷಣೆಯ ನೋಟ ಇಲ್ಲಿಂದ ಪ್ರಾರಂಭವಾಗುತ್ತದೆ. ವಿವಿಧ ವೇಷಗಳನ್ನು ಧರಿಸಿಕೊಂಡು ಅಂದರೆ ಗಾಂಧಿ ತಾತ, ಕಳ್ಳ-ಪೊಲೀಸ್, ಗಂಡ-ಹೆಂಡತಿ ಹೀಗೆ ನಾನಾ ರೀತಿಯ ವೇಷಗಳನ್ನು ಧರಿಸಿಕೊಂಡು ವಾದ್ಯ ಮೇಳಗಳೊಂದಿಗೆ ಕುಣಿಯುತ್ತಾ ಮೆರವಣಿಗೆ ಬರುತ್ತಾರೆ. ಈ ಜಾತ್ರೆ ಮಿನಿ ದಸರಾ ಎಂದೇ ಕರೆಯಬಹುದಾಗಿದೆ. ಕಾಮಿಡಿ ವೇಷಧಾರಿಗಳು ಇದ್ದು, ಜನರನ್ನು ರಂಜಿಸುತ್ತಾರೆ. ಸುಮಾರು 5ರಿಂದ 6 ಗಂಟೆ ಸಮಯದಲ್ಲಿ ದೇವಾಲಯವನ್ನು ತಲುಪುತ್ತಾರೆ. ಹತ್ತಾರು ಹಳ್ಳಿಯ ಜನ ಅಂದು ಈ ಜಾತ್ರೆ ವೀಕ್ಷಿಸಲು ಆಗಮಿಸಿರುತ್ತಾರೆ. ನೆಂಟರಿಷ್ಟರಿಗೆ ಮಾಂಸದೂಟ ಬಡಿಸುವುದೇ ಈ ಹಬ್ಬದ ವಿಶೇಷ.

9ನೇ ದಿನ: ಮಂಗಳವಾರ ಬೆಳಗ್ಗೆ 10ರಿಂದ 2 ಗಂಟೆ ತನಕ ಹುಲಿವೇಷದಲ್ಲಿ ಕೆಲವರು ತಮ್ಮ ಹರಕೆ ತೀರಿಸುವ ಕಾರ್ಯ. ಮಧ್ಯಾಹ್ನ 2 ಗಂಟೆಯಿಂದ 5 ಗಂಟೆ ತನಕ ಕುಸ್ತಿ ಪಂದ್ಯಾವಳಿ ನಡೆಯುತ್ತದೆ. ಈ ಕಾರ್ಯಕ್ರಮಕ್ಕೆ ಗಣ್ಯರು, ಧಾರ್ಮಿಕ ಮುಖಂಡರು ಹಾಗೂ ರಾಜಕೀಯ ಮುಖಂಡರು ಆಗಮಿಸಿರುತ್ತಾರೆ. ಸಾಯಂಕಾಲ 6ರಿಂದ 10.30ರ ತನಕ ತಂಬಿಟ್ಟು ಆರತಿ ಇರುತ್ತದೆ.

10ನೇ ದಿನ: ಬುಧವಾರ ಹಬ್ಬದ ಕೊನೆಯ ದಿನವಾಗಿದ್ದು, ಅಂದು ಬೆಳಗ್ಗೆ 10.30ಗಂಟೆಗೆ ಕುಲದ ತೋಟಕ್ಕೆ ಗ್ರಾಮದಿಂದ ಮೆರವಣಿಗೆ ಹೋಗುತ್ತದೆ. ಅಲ್ಲಿಂದ ಕವಲುಗಡ್ಡಿ ಹಾಗೂ ಒನಕೆ ಪ್ರದರ್ಶನವಿರುತ್ತದೆ. ಜತೆಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುತ್ತವೆ. ಅಲ್ಲದೆ ಕೆಲವು ಭಕ್ತರು ತಮ್ಮ ಇಷ್ಟಾರ್ಥ ನೆರವೇರಲು ಬಾಯಿಬೀಗ ಹಾಕಿಸಿಕೊಂಡು ಹುಲಿಯಮ್ಮ ದೇವಿಗೆ ಹರಕೆ ತೀರಿಸುತ್ತಾರೆ. ಇವರಿಗೆ ಮಹದೇಶ್ವರ ಗುಡ್ಡಪ್ಪನವರು ಬಾಯಿಬೀಗ ಚುಚ್ಚುತ್ತಾರೆ. ಅಂದೇ ಸಂಜೆ ಗ್ರಾಮದಲ್ಲಿ ಪೌರಾಣಿಕ ನಾಟಕವಿದ್ದು ನಾಟಕದ ನಂತರ ಹಬ್ಬಕ್ಕೆ ತೆರೆ ಬೀಳುತ್ತದೆ.



ಕಳೆದ ವರ್ಷದ ಮೆರವಣಿಗೆ ಫೈಲ್ ಫೋಟೋ



ವಾರಭವಿಷ್ಯ

2.03.2025 ರಿಂದ 8.03.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಕುಂಭ, ಚಂದ್ರ-ಮೀನ, ಮೇಷ, ವೃಷಭ, ಮಿಥುನ, ಕುಜ-ಮಿಥುನ, ಬುಧ, ಮೀನ, ಗುರು-ವೃಷಭ, ಶುಕ್ರ-ಮೀನ, ಶನಿ-ಕುಂಭ, ರಾಹು-ಮೀನ ಮತ್ತು ಕೇತು-ಕನ್ಯಾ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಈ ವಾರದಲ್ಲಿ ಗ್ರಹಗತಿಗಳು ಅನುಕೂಲಕರವಾಗಿದೆ. ಕನಸು ನೋಡುತ್ತಾ ಕೂರಬೇಡಿ, ಯೋಜನೆಗಳತ್ತ ತೊಡಗಿಸಿಕೊಳ್ಳಿ. ಹೊಸ ವ್ಯಾಪಾರ, ಉದ್ಯಮ ಆರಂಭಿಸಲು ಶುಭ ಸಮಯವಾಗಿದೆ. ನಿವೇಶನ, ಗೃಹ ನಿರ್ಮಾಣಕ್ಕೆ ಸಾಲ ದೊರೆಯಲು ಬೃಹಸ್ಪತಿಯ ಅನುಗ್ರಹವಿದೆ. ಕಾರ್ಮಿಕ ವರ್ಗದವರಿಗೆ ಸರ್ಕಾರದಿಂದ ಸಹಾಯ ಧನ ದೊರೆಯುವ ಸಂಭವವಿದೆ. ವಿವಾಹಯೋಗ್ಯರಿಗೆ ಹರುಷದ ನಕ್ಷತ್ರ ಮಿನುಗಲಿದೆ.
ಶ್ರೀ ಸುಬ್ರಮಣ್ಯ ಸ್ತುತಿ. ಶುಭ ಸಂಖ್ಯೆ-1

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ವಾರದಾರಂಭಕ್ಕೆ ಮನೋಕಾರಕ ಚಂದ್ರ ಶುಭನಿದ್ದು ಮನೋವಾಂಛಿತ ಕೆಲಸ ಕಾರ್ಯಗಳು ಸುಗಮವಾಗಿ ಸಾಗುವುದು. ಮಾತೃಶ್ರೀಯವರ ಸಹಾಯದಿಂದ ಗಹನವಾದ ವಿಚಾರವೊಂದು ಸುಖಾಂತ್ಯವನ್ನು ಹೊಂದುವುದು. ಹೋಟೆಲ್, ಕೆಟರಿಂಗ್ ಉದ್ಯಮದವರಿಗೆ ಕೈತುಂಬಾ ಕೆಲಸ ದೊರೆತು ಧನಲಾಭವಾಗುವುದು. ಕೆಲವೊಮ್ಮೆ ಶತ್ರುಗಳಿಂದ ಉಪದ್ರವ ಉಂಟಾದೀತು. ನಿಮ್ಮವರೇ ದುಃಖಕ್ಕೆ ಕಾರಣರಾಗುವರು.
ಶ್ರೀ ದೇವೀ ದರ್ಶನ. ಶುಭ ಸಂಖ್ಯೆ-6

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಉದ್ಯೋಗ, ವ್ಯವಹಾರಗಳು ಉತ್ತಮ ಗತಿಯಲ್ಲಿ ಸಾಗುವುದು. ಸನ್ನದುಗಾರರಿಗೆ ದೊಡ್ಡ ಕಕ್ಷಿಗಾರರು ಸಿಗುವರು. ಷೇರು ವ್ಯವಹಾರಗಳನ್ನು ತುಂಬಾ ಎಚ್ಚರಿಕೆಯಿಂದ ಮಾಡಿ. ವಾರ ಮಧ್ಯಾನಂತರ ಹಲವು ಮೂಲಗಳಿಂದ ಧನ ಸಂಪಾದನೆಯಾದರೂ ಸುಖವನ್ನು ಅನುಭವಿಸಲಾರಿರಿ. ಹಾಗೆಯೇ ಸಾಲ ಕೊಟ್ಟು ವಿಶ್ವಾಸ ಕಳೆದುಕೊಳ್ಳಬೇಡಿ. ಮಾನಸಿಕ ಅಸ್ಥಿರತೆ, ಸಣ್ಣಪುಟ್ಟ ಆರೋಗ್ಯ ಸಮಸ್ಯೆ ಕಾಡಬಹುದು.
ಶ್ರೀ ಲಕ್ಷ್ಮೀನಾರಾಯಣ ಸೇವೆ. ಶುಭ ಸಂಖ್ಯೆ-7

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ವಾರದಾರಂಭಕ್ಕೆ ಯಂತ್ರ, ವಾಹನಗಳಿಂದ ಕಿರಿಕಿರಿ, ರಿಪೇರಿ ಖರ್ಚುಗಳು. ಉದ್ಯಮಪತಿಗಳಿಗೆ ಹಿನ್ನಡೆ, ತೆರಿಗೆ ಅಧಿಕಾರಿಗಳ ಕಿರುಕುಳ. ಅನವಶ್ಯಕ ಖರ್ಚುಗಳು ಎದುರಾಗುವುದು. ವಾರದ ಉತ್ತರಾರ್ಧಕ್ಕೆ ನಿಮ್ಮ ರಾಶ್ಯಾಧಿಪತಿ ಚಂದ್ರನ ಕೃಪೆಯಿಂದ ಅಂದುಕೊಂಡ ಕೆಲಸಗಳು ಸುಗಮವಾಗಿ ಸಾಗುವುದು. ಹೆಂಗಳೆಯರ ಸ್ನೇಹದಿಂದ ಮಾನಸಿಕ ಉಲ್ಲಾಸ. ಲಘು ಪ್ರವಾಸಗಳು ಉಂಟಾಗಲಿದೆ.
ಶ್ರೀ ದುರ್ಗಾ ಪರಮೇಶ್ವರಿಗೆ ನಿಂಬೇ ದೀಪ ಅರ್ಪಣೆ. ಶುಭ ಸಂಖ್ಯೆ-9

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಅಶುಭ ಶನಿದೇವನ ಪ್ರಭಾವದಿಂದ ಹಲವು ಪ್ರಯತ್ನಗಳ ನಂತರ ಧನ ಸಂಪಾದನೆಯಾದರೂ ದೈಹಿಕ, ಮಾನಸಿಕ ಸುಖವನ್ನು ಅನುಭವಿಸಲಾರಿರಿ. ಎಲ್ಲರಲ್ಲಿಯೂ ವಿರೋಧವನ್ನು ಅನುಭವಿಸಬೇಕಾದೀತು. ಯತ್ನ ಕಾರ್ಯಗಳು ಆಮೆ ಗತಿಯಲ್ಲಿ ಸಾಗುವುದು. ವಾರಾಂತ್ಯಕ್ಕೆ ಚಂದ್ರನ ಶುಭ ಸಂಚಾರದಿಂದ ಶುಭ ವಾರ್ತೆ ಬರುವುದು. ನಿಮ್ಮ ಹಿತೈಷಿಗಳ ಸಹಾಯದಿಂದ ತೊಡಕೊಂದರಿಂದ ಪಾರಾಗುವಿರಿ.
ಶ್ರೀ ಸೂರ್ಯ ನಾರಾಯಣ ಸ್ತುತಿ. ಶುಭ ಸಂಖ್ಯೆ-4

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಸಮಾಜದ ಪ್ರತಿಷ್ಠಿತ ವ್ಯಕ್ತಿಗಳ ಭೇಟಿಯಿಂದ ವಾರಕ್ಕೆ ಸ್ವಾಗತ. ನಿರುದ್ಯೋಗಿಗಳಿಗೆ ಸಂತಸದ ಸುದ್ದಿ ಬರುವುದು. ಪಿತ್ರಾರ್ಜಿತ ಆಸ್ತಿ ವಿಚಾರಗಳು ಇತ್ಯರ್ಥಗೊಳ್ಳುವುದು. ಪುಸ್ತಕ ಪ್ರಕಾಶಕರಿಗೆ ಹೆಚ್ಚಿನ ಆರ್ಡರ್ ದೊರಕಲಿದೆ. ಬ್ಯಾಂಕ್ ಸಾಲದ ಪ್ರಯತ್ನಗಳು ಫಲಪ್ರದವಾಗುವುದು. ವಾಹನ ರಿಪೇರಿ ಖರ್ಚುಗಳು ಎದುರಾಗುವುದು. ಮಠ-ಮಾನ್ಯಗಳ ಗುರುಜನರ ಆಶೀರ್ವಾದದೊಂದಿಗೆ ವಾರಕ್ಕೆ ತೆರೆ.
ಶ್ರೀ ಅಷ್ಟಾಕ್ಷರೀ ಮಂತ್ರ ಜಪಿಸಿ. ಶುಭ ಸಂಖ್ಯೆ-7

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ವಾರದ ಆದಿಗೆ ಒತ್ತಡ ಭರಿತ ದಿನಗಳನ್ನು ಅನುಭವಿಸುವಿರಿ. ನೂತನ ವ್ಯಾಪಾರ ಆರಂಭಿಸಲು ಸ್ವಲ್ಪ ಸಮಯ ಕಾಯಬೇಕು. ದೈವ ಕೃಪೆಯಿಂದ ಆದಾಯ-ವೆಚ್ಚಗಳು ಸಮವಾಗಿರುತ್ತದೆ. ದುಂದು ವೆಚ್ಚಕ್ಕೆ ಕಡಿವಾಣ ಹಾಕಿ, ಅನ್ಯಥಾ ಸಾಲ ಮಾಡಬೇಕಾದ ಪರಿಸ್ಥಿತಿ ಎದುರಾಗುವುದು. ವಾರದ ಉತ್ತರಾರ್ಧಕ್ಕೆ ಕುಟುಂಬ ವಿಚಾರದಲ್ಲಿ ಉಂಟಾಗಿದ್ದ ವಿವಾದಗಳು ದೂರವಾಗುತ್ತವೆ. ಮನೆ ದೇವರ ದರ್ಶನದಿಂದ ಮಾನಸಿಕ ಶಾಂತಿ.
ಶ್ರೀ ಚಾಮುಂಡೇಶ್ವರಿ ಉಪಾಸನೆ. ಶುಭ ಸಂಖ್ಯೆ-5

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ

ಬೃಹತ್ ವಸ್ತು, ವ್ಯಾಪಾರಗಳಲ್ಲಿ ಅಧಿಕ ಧನಲಾಭ. ಸಾಲಗಳಿಂದಲೂ, ಅನಾರೋಗ್ಯದಿಂದಲೂ ಮುಕ್ತಿ. ಕಾರ್ಯ ಸಾಧನೆಗಾಗಿ ಅಧಿಕ ತಿರುಗಾಟಗಳು ಉಂಟಾದರೂ ಅಂತ್ಯದಲ್ಲಿ ಉತ್ತಮ ಫಲವನ್ನು ಹೊಂದುವಿರಿ. ಬಂಧು-ಮಿತ್ರರ ಸಹಕಾರ ದೊರಕುವುದು. ಪಂಚಮ ರಾಹು ಇರುವ ಕಾರಣ ಅಪರಿಚಿತ ಜನರಿಂದ ಮೋಸ ಹೋಗುವ ಸಾಧ್ಯತೆ ಇರುತ್ತದೆ. ಸಾರಾಸಗಟಾಗಿ ಯಾರನ್ನೂ ನಂಬದಿರಿ.
ಶ್ರೀ ಯೋಗನರಸಿಂಹ ದರ್ಶನ. ಶುಭ ಸಂಖ್ಯೆ-3

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

'ಮುಟ್ಟಿದ್ದೆಲ್ಲಾ ಚಿನ್ನ' ಅಲ್ಲದೇ ಹೋದರೂ ಕೈ ಹಾಕಿದ ಮಹತ್ತರವಾದ ಕೆಲಸ ಕಾರ್ಯಗಳಲ್ಲಿ ಸಫಲತೆಯನ್ನು ಹೊಂದುವಿರಿ. ಮನೆಯಲ್ಲಿ ಹರುಷದ ವಾತಾವರಣ, ವ್ಯಾಪಾರದ ವಿಸ್ತರಣೆಯಂತಹ ಶುಭ ಫಲಗಳನ್ನು ಕಾಣುವಿರಿ. ಸಹೋದರರೊಂದಿಗೆ ಭಿನ್ನಾಭಿಪ್ರಾಯಗಳು ಉಂಟಾಗಿ ಮಾನಸಿಕ ಅಶಾಂತಿ. ವಾರಾಂತ್ಯಕ್ಕೆ ಮನೆಗೆ ಬೆಲೆ ಬಾಳುವ ವಸ್ತು ಬರುವುದು.
ಶ್ರೀ ಗುರುರಾಯರ ಪೂಜೆ. ಶುಭ ಸಂಖ್ಯೆ-2

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ವಾರದಾರಂಭಕ್ಕೆ ಸುಖಮಯವಾದ ಜೀವನ, ಬಂಧು-ಮಿತ್ರರ ಸಮಾಗಮ. ವೈಯಕ್ತಿಕ ವಿಷಯದಲ್ಲಿ ಎದುರಾಗುವ ವಿಘ್ನಗಳನ್ನು ಸಮರ್ಥವಾಗಿ ಎದುರಿಸುವಿರಿ. ಐಟಿ-ಬಿಟಿ ಅಭ್ಯರ್ಥಿಗಳಿಗೆ ವಿದೇಶಿ ಉದ್ಯೋಗದ ಸಂದರ್ಶನಕ್ಕೆ ಕರೆ ಬರಬಹುದು. ನ್ಯಾಯಾಲಯ ವಿಷಯಗಳಲ್ಲಿ ಹಿನ್ನಡೆಯನ್ನು ಎದುರಿಸಬೇಕಾಗುವುದು. ರಾಜಕಾರಣಿಗಳಿಗೆ ಅಪಪ್ರಚಾರದ ಕಿರಿಕಿರಿ.
ಶ್ರೀ ಶಿವಪಂಚಾಕ್ಷರಿ ಜಪಿಸಿ. ಶುಭ ಸಂಖ್ಯೆ-8

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಈ ವಾರದಲ್ಲಿ ಉದ್ಯೋಗ ವ್ಯವಹಾರಗಳಲ್ಲಿ ಹೆಚ್ಚಿನ ಆಸಕ್ತಿ ತೋರಿ ಅಧಿಕ ಲಾಭ ಗಳಿಸುವಿರಿ. ಆಡಿಟರುಗಳಿಗೆ ಉತ್ತಮ ಕಕ್ಷಿದಾರರ ಸಂಪರ್ಕದಿಂದ ಧನಾಗಮ. ಸಾಮಾಜಿಕ ಗೌರವಕ್ಕೆ ಪಾತ್ರರಾಗುವಿರಿ. ಮಗನಿಗೆ ನೌಕರಿ ದೊರೆಯುವ ಸಾಧ್ಯತೆ. ಉದ್ಯಮಪತಿಗಳಿಗೆ ನೌಕರ ವರ್ಗದವರ ಅಸಹಕಾರದಿಂದ ನಷ್ಟ, ಅನ್ಯ ಸ್ತ್ರೀಯರನ್ನು ಗೌರವದಿಂದ ಕಾಣಿ. ಜನ್ಮ ಶನಿಯ ಪರಿಣಾಮ ಆರೋಗ್ಯ ಸಮಸ್ಯೆ.
ಶ್ರೀ ಮಾರುತಿ ದರ್ಶನ. ಶುಭ ಸಂಖ್ಯೆ-2

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವಾರದಾರಂಭಕ್ಕೆ ಶುಭ ಚಂದ್ರನ ನಿಮ್ಮ ರಾಶಿ ಪ್ರವೇಶದಿಂದ ಉಲ್ಲಾಸ, ಸಂತಸ, ಸುವಸ್ತ್ರ, ಸುಭೋಜನಗಳನ್ನು ನೀಡಲಿದ್ದಾನೆ. ಗೃಹಕೃತ್ಯಗಳಿಗೆ ಮಿತ್ರ ಜನರ ಸಹಾಯ ಒದಗುವುದು. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಪ್ರತಿಫಲ ದೊರಕುವುದು. ರೈತಾಪಿ ಜನರಿಗೆ ಉತ್ತಮ ದವಸ-ಧಾನ್ಯ ದೊರೆತು ಬೆಲೆಯೂ ದೊರಕುವುದು. ನಿಮಗೆ ಸಂಬಂಧಪಡದ ವಿಚಾರಗಳಲ್ಲಿ ತಲೆ ಹಾಕಬೇಡಿ. ವಾಹನ ಡ್ರೈವ್ ಮಾಡುವಾಗ ನೀವೂ ಕ್ಷೇಮವಾಗಿರಿ. ಇತರರೂ ಕ್ಷೇಮವಾಗಿರಲಿ. ಶ್ರೀ ಗುರ್ವಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-1

ಕಸಬಾ ಪಿಎಸಿಎಸ್ ಅಧ್ಯಕ್ಷ-ಉಪಾಧ್ಯಕ್ಷರ ಚುನಾವಣೆ

ಡಣಾಯಕನಪುರ ಮಲ್ಲಣ್ಣ ಅಧ್ಯಕ್ಷ, ಟಿ.ಸಿ.ಫಣೀಶ್ ಕುಮಾರ್ ಉಪಾಧ್ಯಕ್ಷ



ಕಸಬಾ ಪಿಎಸಿಎಸ್ ಅಧ್ಯಕ್ಷರಾಗಿ ಡಣಾಯಕನಪುರ ಮಲ್ಲಣ್ಣ, ಉಪಾಧ್ಯಕ್ಷರಾಗಿ ಟಿ.ಸಿ.ಫಣೀಶ್ ಕುಮಾರ್ ಅವಿರೋಧವಾಗಿ ಆಯ್ಕೆಯಾದರು.

ತಿ.ನರಸೀಪುರ, ಮಾ.1– ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಮೂರನೇ ಬಾರಿ ಆಯ್ಕೆಯಾಗುವ ಮೂಲಕ ಡಣಾಯಕನ ಪುರ ಮಲ್ಲಣ್ಣ ಹ್ಯಾಟ್ರಿಕ್ ಸಾಧನೆ ಮಾಡಿದ್ದಾರೆ.

ಸಹಕಾರ ಸಂಘದ ಕಚೇರಿಯಲ್ಲಿ ಶನಿವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಮಲ್ಲಣ್ಣ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಟಿ.ಸಿ.ಫಣೀಶ್ ಕುಮಾರ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಘೋಷಿಸಿದರು.

ನಿರ್ದೇಶಕರಾದ ಮಹಾಲಿಂಗಪ್ಪ, ಬಿ.ಸುಂದರ ಸ್ವಾಮಿ, ಎನ್.ಶೇಖರ್, ನಾಗಮ್ಮ, ಎಂ.ನಾಗರತ್ನ, ಎಂ.ಮಹದೇವಯ್ಯ, ಪ್ರಕಾಶ್ ಕುಮಾರ್, ಬಿ.ರಾಘ ವೇಂದ್ರ, ಬಿ.ಎಂ.ಮಹದೇವಸ್ವಾಮಿ ಹಾಗೂ ಬಸವ ರಾಜು ಚುನಾವಣಾ ಸಭೆಯಲ್ಲಿ ಹಾಜರಿದ್ದು ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರು.

ಫೆ.16 ರಂದು ಆಡಳಿತ ಮಂಡಳಿ ನಿರ್ದೇಶಕರ ಆಯ್ಕೆಗಾಗಿ ಚುನಾವಣೆ ನಡೆದು 12 ಸ್ಥಾನಗಳ ಪೈಕಿ 11 ಸ್ಥಾನದಲ್ಲಿ ಮಲ್ಲಣ್ಣ ಬಣದ ಅಭ್ಯರ್ಥಿಗಳು ಜಯ ಸಾಧಿಸಿದ್ದರೆ, ಪಿ.ಸ್ವಾಮಿನಾಥ್ ಬಣಕ್ಕೆ ಹೀನಾಯ ಸೋಲುಂಟಾಗಿತ್ತು ಸ್ವಾಮಿನಾಥ್ ಬಣದಿಂದ ಸಾಲಗಾರರಲ್ಲದ ಕ್ಷೇತ್ರದಿಂದ ಬಸವರಾಜು ಮಾತ್ರ ಗೆಲುವು ಸಾಧಿಸಿದ್ದರು. ಶನಿವಾರ ಸಹಕಾರ ಸಂಘದ ಕಚೇರಿಯಲ್ಲಿ ಅಧ್ಯಕ್ಷ–ಉಪಾಧ್ಯಕ್ಷರ ಚುನಾವಣೆ ನಡೆದು ಮಲ್ಲಣ್ಣ ಅವಿರೋಧವಾಗಿ ಆಯ್ಕೆಯಾಗುವ ಮೂಲಕ ಹ್ಯಾಟ್ರಿಕ್ ಗೆಲುವು ಸಾಧಿಸಿದರು.

ನೂತನ ಅಧ್ಯಕ್ಷ ಡಣಾಯಕನಪುರ ಮಲ್ಲಣ್ಣ ಮಾತ ನಾಡಿ, ಎಲ್ಲಾ ನಿರ್ದೇಶಕರು ನನ್ನ ಮೇಲೆ ವಿಶ್ವಾಸ ವಿಟ್ಟು ಕಳೆದ 15 ವರ್ಷಗಳಿಂದ ಗೆಲ್ಲಿಸುತ್ತಾ ಬಂದಿದ್ದೀರಿ. ನಿಮ್ಮ ನಂಬಿಕೆಯನ್ನು ಹುಸಿಗೊಳಿಸದೆ ಯಾವುದೇ ಕಪ್ಪು ಚುಕ್ಕೆ ಇಲ್ಲದಂತೆ ಸಹಕಾರ ಸಂಘದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ ಎಂದರು.

2015ರಲ್ಲಿ ಮೊದಲ ಬಾರಿಗೆ ಅಧ್ಯಕ್ಷನಾದ ವೇಳೆ ಸಂಘ ತೀವ್ರ ನಷ್ಟಕ್ಕೆ ಸಿಲುಕಿ ಮುಚ್ಚುವ ಸ್ಥಿತಿಯಲ್ಲಿತ್ತು. 85 ಲಕ್ಷ ರೂ. ಸುಸ್ತಿ ಸಾಲ ಹಾಗೂ 45 ಲಕ್ಷ ರೂ. ನಷ್ಟದಲ್ಲಿತ್ತು. ಮಹಿಳಾ ಸಂಘಕ್ಕೆ ನೀಡಿದ್ದ ಸಾಲ ವಸೂಲಾಗದೇ ಅಲ್ಲಿಯೂ 40 ಲಕ್ಷ ನಷ್ಟವಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಎಲ್ಲವನ್ನೂ ಸರಿದೂಗಿಸಿ ಸಂಘವನ್ನು ಸುಸ್ಥಿತಿಗೆ ತರಲು ಕಷ್ಟಪಟ್ಟಿದ್ದೇನೆ. ನಬಾರ್ಡ್‌ನಿಂದ ಅನುದಾನ ತಂದು 10 ಮಳಿಗೆಗಳನ್ನು ನಿರ್ಮಾಣ ಮಾಡಿದ್ದೇನೆ. ಡಿಸಿಸಿ ಬ್ಯಾಂಕ್‌ನಲ್ಲಿ 10 ಲಕ್ಷ ರೂ. ಠೇವಣಿ ಇಡಲಾಗಿದೆ. ಈಗಲೂ ಸಹ ರೈತರಿಂದ 18 ಲಕ್ಷ ರೂ. ಸಾಲ ಸಂಘಕ್ಕೆ ಬರಬೇಕಿದೆ ಎಂದ ಅವರು ಇಷ್ಟು ವರ್ಷಗಳ ಕಾಲ ಅಧ್ಯಕ್ಷನಾಗಿ ಸಂಘದ ನಷ್ಟ ಸರಿದೂಗಿಸಲು ಶ್ರಮ ವಹಿಸಿದ್ದೇನೆ. ಮುಂದೆ ಕಸಬಾ ಸಂಘವನ್ನು ತಾಲೂಕಿನಲ್ಲಿಯೇ ಮಾದರಿ ಸಂಘ ಮಾಡಲು ನಿರ್ದೇಶಕರ ಸಹಕಾರ ಬಯಸುತ್ತೇನೆ. ಮೊದಲ 2 ಅವಧಿಯಲ್ಲಿ ಅಧ್ಯಕ್ಷನಾಗಿದ್ದ ವೇಳೆ ಸಂಘದ ನಿರ್ದೇಶಕರು ಸಂಘದ ಅಭಿವೃದ್ಧಿಗೆ ನನ್ನೊಂದಿಗೆ ಕೈ ಜೋಡಿಸಿದ್ದಾರೆ. ಈ ಬಾರಿ ಮತ್ತೊಮ್ಮೆ ಅವಿರೋಧವಾಗಿ ಆಯ್ಕೆ ಮಾಡಿದ್ದಾರೆ. ಅವರ ನಿರೀಕ್ಷೆ ಹುಸಿಗೊಳಿಸದೇ ಕರ್ತವ್ಯ ನಿರ್ವಹಿಸಿ ಸಂಘವನ್ನು ಮಾದರಿ ಸಂಘ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಈ ವೇಳೆ ಪುರಸಭೆ ಸದಸ್ಯ ಕಿರಣ್, ಶಿವಪ್ರಸಾದ್, ಫ್ಯಾನ್ಸಿ ಮೋಹನ್ ಕುಮಾರ್, ಮೂಗೂರು ಎಂ.ಜಯಣ್ಣ, ಮಾಜಿ ತಾಪಂ ಸದಸ್ಯ ಎಂ.ಚಂದ್ರಶೇಖರ್, ಕಿರಗ ಸೂರು ಗ್ರಾಪಂ ಅಧ್ಯಕ್ಷ ನಿಂಗರಾಜು, ಬಜ್ಜಿ ನಿಂಗಪ್ಪ, ಸಾಲೂರು ಸ್ವಾಮಿ, ಸಿ.ಮಹದೇವ, ಮಂಟೇಲಿಂಗಪ್ಪ, ನಾಗರಾಜು ತಾತಪ್ಪ ಲಕ್ಷ್ಮಣ, ಅಕ್ಕಿ ನಾಗಪ್ಪ, ನಾಗೇಂದ್ರ ಪ್ರಸಾದ್, ಮನ್ನೇಹುಂಡಿ ಪರಶಿವ, ಗುರುಪ್ರಸಾದ್, ನೂತನ್, ಕಾವೇರಿಪುರ ಗೋವಿಂದರಾಜು ಇನ್ನಿತರರಿದ್ದರು.

ವಿದ್ಯಾವಿಕಾಸ ಬಿ.ಎಡ್ ಕಾಲೇಜಲ್ಲಿ ವಿಜ್ಞಾನ ದಿನಾಚರಣೆ



ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಮೈಸೂರು, ಮಾ.1– ವಿಜ್ಞಾನ ಮತ್ತು ನಾವೀನ್ಯತೆಯಲ್ಲಿ ಜಾಗತಿಕ ನಾಯಕತ್ವಕ್ಕಾಗಿ ಭಾರತೀಯ ಯುವಕರನ್ನು ಸಬಲೀಕರಣಗೊಳಿಸುವುದು ಮುಖ್ಯ ಎಂದು ಜೆಎಸ್‌ಎಸ್ ಕಾಲೇಜು ಎಎಸ್‌ಇಎಚ್‌ಆರ್ ಅಸೋಸಿಯೇಟ್ ಜೀವಶಾಸ್ತ್ರ ಪ್ರಾಧ್ಯಾಪಕ ಡಾ.ಕಾಂತೇಶ ಎಂ.ಬಸವಲಿಂಗಪ್ಪ ತಿಳಿಸಿದರು.

ತಾಲೂಕಿನ ನಾಡನಹಳ್ಳಿ ವಿದ್ಯಾವಿಕಾಸ ಬಿ.ಎಡ್ ಕಾಲೇಜಿನಲ್ಲಿ ನಡೆದ ವಿಜ್ಞಾನ ದಿನಾಚರಣೆಯಲ್ಲಿ ಮಾತನಾಡಿದ ಅವರು, ದೇಶದಲ್ಲಿ ವಿಜ್ಞಾನ ಕ್ಷೇತ್ರವನ್ನು ಯುವ ಪೀಳಿಗೆಗೆ ಹೆಚ್ಚು ಆಕರ್ಷಕವೆನಿಸುವಂತೆ ಮಾಡುವಲ್ಲಿ ನಾವು ಪ್ರಯತ್ನಿಸಿಲ್ಲ. ಆದ್ದರಿಂದ ನಮ್ಮಲ್ಲಿ ಮುಕ್ತ ಮನಸ್ಸಿನಿಂದ, ಶೈಕ್ಷಣಿಕ ವಿಚಾರಗಳನ್ನು ಚರ್ಚಿಸುವ, ಪ್ರಶ್ನಿಸುವ ಸಂಶೋಧನಾ ವಿದ್ಯಾರ್ಥಿಗಳು ಹೆಚ್ಚಾಗಬೇಕು ಎಂದು ಕಿವಿಮಾತು ಹೇಳಿದರು. ಈ ವೇಳೆ ಬಿ.ಎಡ್ ಪ್ರಶಿಕ್ಷಣಾರ್ಥಿಗಳು ತಯಾರಿಸಿದ ವಿವಿಧ ವಿಜ್ಞಾನ ಮಾದರಿಗಳನ್ನು ವೀಕ್ಷಿಸಿದರು. ಕಾಲೇಜು ಪ್ರಾಂಶುಪಾಲ ಡಾ.ರಾಜಗೋಪಾಲ್, ಸಹ ಪ್ರಾಧ್ಯಾಪಕರಾದ ಎನ್.ಜಗದೀಶ, ಅನಂತ ರಾಮು, ಎಂ.ಎನ್ ದಿನೇಶ್, ಪ್ರಸನ್ನ, ಶಿವಕುಮಾರ್, ಶಿಲ್ಪಾ, ವಸಂತಕುಮಾರಿ ಹಾಜರಿದ್ದರು.

ಚುಂಚನಹಳ್ಳಿಯಲ್ಲಿ ಹಳೆಗನ್ನಡ ಶಾಸನ ಪತ್ತೆ



ಶಾಸನದೊಂದಿಗೆ ಎನ್‌ಎಸ್‌ಎಸ್ ಶಿಬಿರಾರ್ಥಿಗಳು.

ನಂಜನಗೂಡು, ಮಾ.1– ಮೈಸೂರು ಮಹಾರಾಜ ಕಾಲೇಜಿನ ಎನ್‌ಎಸ್‌ಎಸ್ ಶಿಬಿರಾರ್ಥಿಗಳು ತಾಲೂಕಿನ ಚುಂಚನಹಳ್ಳಿಯಲ್ಲಿ ಹಳೆಗನ್ನಡದ ಶಾಸನ ಪತ್ತೆ ಹಚ್ಚಿದ್ದಾರೆ.

ಚುಂಚನಹಳ್ಳಿಯಲ್ಲಿ ಮೈಸೂರು ಮಹಾರಾಜ ಕಾಲೇಜು ವತಿಯಿಂದ ರಾಷ್ಟ್ರೀಯ ಸೇವಾ ಯೋಜನೆ, ಎನ್‌ಎಸ್‌ಎಸ್ ವಿಶೇಷ ವಾರ್ಷಿಕ ಶಿಬಿರ ಹಮ್ಮಿಕೊಳ್ಳಲಾಗಿದ್ದು, ಗ್ರಾಮದ ಹೊರವಲಯದ ಶ್ರೀಮಹದೇಶ್ವರಸ್ವಾಮಿ ದೇವಾಲಯದ ಬಳಿ ಎನ್‌ಎಸ್‌ಎಸ್ ಶಿಬಿರಾರ್ಥಿಗಳು ಶ್ರಮದಾನ ಮಾಡುವ ಸಂದರ್ಭ ಶಾಸನ ಪತ್ತೆಯಾಗಿದ್ದು, ಎನ್‌ಎಸ್‌ಎಸ್ ಶಿಬಿರದ ಅಧಿಕಾರಿಗಳಾದ ಡಾ.ಎಸ್.ಕೃಷ್ಣಪ್ಪ ಮತ್ತು ಡಾ.ಪಿ.ಎಸ್.ಮಧುಸೂದನ್ ಪರಿಶೀಲಿಸಿದ್ದಾರೆ.

ಮಹದೇಶ್ವರ ದೇವಾಲಯ ಸಮೀಪದ ಜಮೀನಿನೊಂದರಲ್ಲಿ ಚಪ್ಪಡಿ ಕಲ್ಲಿನ ಆಕಾರದಲ್ಲಿ ಶಾಸನ ಪತ್ತೆಯಾಗಿದೆ. ಇದು 5 ಅಡಿ ಉದ್ದ, 3 ಅಡಿ ಅಗಲವಾಗಿದ್ದು, ಶಾಸನದ ಮೇಲಿನ ಭಾಗದಲ್ಲಿ ಲಿಂಗದ ಚಿತ್ರ ಕೆತ್ತಲಾಗಿದೆ. ಶಾಸನ 25 ಸಾಲಿನಿಂದ ಕೂಡಿದ್ದು, ಹಳಗನ್ನಡದಲ್ಲಿದೆ. ಕೆಲವು ಕಡೆ ಅಕ್ಷರಗಳು ಅಳಿಸಿ ಹೋಗಿವೆ ಎಂದು ಕಾಲೇಜಿನ ಶಿಬಿರಾಧಿಕಾರಿ ಕೃಷ್ಣಪ್ಪ ಮತ್ತು ಮಧುಸೂಧನ್ ತಿಳಿಸಿದ್ದಾರೆ.

ಲಿಪಿ ಆಧಾರದ ಮೇಲೆ ಇದನ್ನು ಕ್ರಿಶ 15 ಅಥವಾ 17ನೇ ಶತಮಾನದ ಉಮ್ಮತ್ತೂರು ಪಾಳೇಗಾರರು ಅಥವಾ ಮೈಸೂರು ಮಹಾರಾಜರ ಕಾಲದ ಶಾಸನವೆಂದು ಶಂಕಿಸಲಾಗಿದೆ. ಅಲ್ಲದೇ ಭೂಮಿ ಅಥವಾ ಗ್ರಾಮವನ್ನು ದಾನವಾಗಿ ನೀಡಿರುವ ಶಾಸನವಾಗಿದೆ ಎಂದು ಹೇಳಬಹುದಾಗಿದೆ.

ಪುರಾತತ್ವ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಶಾಸನ ಓದಿ ಶಾಸನದ ಮಹತ್ವ ಮತ್ತು ಚುಂಚನಹಳ್ಳಿ ಗ್ರಾಮದ ಇತಿಹಾಸ ತಿಳಿಸಬೇಕು. ಈ ಶಾಸನ ಸಂರಕ್ಷಣೆ ಮಾಡಬೇಕು ಎಂದು ಮಹಾರಾಜ ಕಾಲೇಜಿನ ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಮಾನವಿ ಮಾಡಿದ್ದಾರೆ.

ಈ ವೇಳೆ ಮಹಾರಾಜ ಕಾಲೇಜಿನ ಎನ್‌ಎಸ್‌ಎಸ್ ಶಿಬಿರಾಧಿಕಾರಿಗಳಾದ ಡಾ.ಎಸ್.ಕೃಷ್ಣಪ್ಪ, ಡಾ.ಪಿ.ಎಸ್.ಮಧುಸೂದನ್, ಶಿಬಿರಾರ್ಥಿಗಳಾದ ಭಾರ್ಗವ್, ಭಾಗ್ಯ, ವನಜಾಕ್ಷಿ, ಮೋಹನ್ ಸೇರಿದಂತೆ 80ಕ್ಕೂ ಹೆಚ್ಚು ಶಿಬಿರಾರ್ಥಿಗಳು ಭಾಗವಹಿಸಿದ್ದರು.

ಕೆ.ಆರ್.ನಗರ ಸರ್ಕಾರಿ ಕಾಲೇಜಲ್ಲಿ ವಸ್ತು ಪ್ರದರ್ಶನ



ಕೆ.ಆರ್.ನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ವಸ್ತು ಪ್ರದರ್ಶನ ನಡೆಯಿತು.

ಕೆ.ಆರ್.ನಗರ, ಮಾ.1– ಸಾಧನೆಯ ಕಿಚ್ಚು ಬಂದಾಗ ವ್ಯಕ್ತಿಯ ಬೆಳವಣಿಗೆ ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳು ಅಪಮಾನಗಳನ್ನು ಫಲಿತಾಂಶವನ್ನಾಗಿ ಮಾರ್ಪಡಿಸುವ ಶಕ್ತಿ, ಧೈರ್ಯ ಹೊಂದಬೇಕು ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಬಿ.ಎಸ್.ಜಯ ತಿಳಿಸಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ಅಪರಾಧಶಾಸ್ತ್ರ ಮತ್ತು ನ್ಯಾಯ ವಿಜ್ಞಾನ ವಿಭಾಗದ ವತಿಯಿಂದ ಆಯೋಜಿಸಿದ್ದ ವಸ್ತು ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ಅವರು ವಿಜ್ಞಾನ ಮಾದರಿಗಳು ಅನ್ವಯಿಕವಾಗಿರಬೇಕು. ಸಮಾಜಕ್ಕೆ ಅನುಕೂಲವಾಗಿರುವಂತಹ ಸಾಧನೆಯನ್ನು ವಿದ್ಯಾರ್ಥಿಗಳು ಮಾಡಬೇಕು ಎಂದರು.

ವಿಜ್ಞಾನದಲ್ಲಿ ಮುಂದುವರೆದಾಗ ಮಾತ್ರ ದೇಶ ಪ್ರಗತಿ ಕಾಣಲು ಸಾಧ್ಯ. ಆದ್ದರಿಂದ ವಿದ್ಯಾರ್ಥಿಗಳು ಶಾಲಾ ಕಾಲೇಜು ಹಂತದಲ್ಲೇ ವಿಜ್ಞಾನದತ್ತ ಆಕರ್ಷಿತರಾಗಿ ಜೀವನದಲ್ಲಿ ಸಾಧನೆ ಮಾಡುವ ಮೂಲಕ ದೇಶವನ್ನು ಅಗ್ರಸ್ಥಾನದತ್ತ ಕೊಂಡೊಯ್ಯಬೇಕೆಂದು ನುಡಿದರು. ಕಾಲೇಜು ದಿಸೆಗಳಲ್ಲಿ ವಿದ್ಯಾರ್ಥಿಗಳು ಸಾಧನೆಯತ್ತ ಗಮನ ಹರಿಸಿದಾಗ ಮಾತ್ರ ಮುಂದಿನ ಭವಿಷ್ಯ ಉತ್ತಮಗೊಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಆ ನಿಟ್ಟಿನಲ್ಲಿ ಹೋಗಬೇಕು. ಈ ದಿನಗಳು ವಿದ್ಯಾರ್ಥಿಗಳಿಗೆ ಅಮೂಲಾಗ್ರ ದಿನಗಳಾಗಿರುವುದರಿಂದ ಪ್ರತಿಯೊಬ್ಬ ವಿದ್ಯಾರ್ಥಿ ಇದನ್ನು ವ್ಯರ್ಥ ಮಾಡಬಾರದೆಂದು ತಿಳಿಸಿದರು.

ರಾಷ್ಟ್ರೀಯ ವಿಜ್ಞಾನ ದಿನದ ಪ್ರಯುಕ್ತ ಸರ್ಕಾರದ ಆದೇಶದಂತೆ ವಿದ್ಯಾರ್ಥಿಗಳಿಗೆ ಮತ್ತು ಉಪನ್ಯಾಸಕರಿಗೆ ಪ್ರತಿಜ್ಞಾ ವಿಧಿ ಭೋದಿಲಾಯಿತು. ನಂತರ ವಸ್ತು ಪ್ರದರ್ಶನದಲ್ಲಿ ವಿದ್ಯಾರ್ಥಿಗಳು ಪ್ರದರ್ಶಿಸಿದ ಮಾದರಿಗಳನ್ನು ವೀಕ್ಷಿಸಿ ಅದರ ಉಪಯುಕ್ತ ಮಾಹಿತಿಗಳನ್ನು ತಿಳಿಯಲಾಯಿತು.

ಕಾಲೇಜಿನ ಉಪನ್ಯಾಸಕರಾದ ದಯಾನಂದ್, ಶಿವಲಿಂಗಯ್ಯ, ತಿಪ್ಪೇಸ್ವಾಮಿ, ವರದರಾಜು, ಧನಂಜಯ, ಜಯರೂಪ, ಮಹೇಶ್ವರಿ, ಸಾಗರ್, ಅಪರಾಧಶಾಸ್ತ್ರ ವಿಭಾಗದ ಮುಖ್ಯಸ್ಥೆ ಸುಪ್ರಿತಾ.ಸಿ., ಪ್ರದೀಪ್, ಪವಿತ್ರ. ಎಂ ಹಾಗೂ ಕಾಲೇಜಿನ ಸಿಬ್ಬಂದಿ ಭಾಗವಹಿಸಿದ್ದರು.

ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ವಿಜ್ಞಾನ ದಿನಾಚರಣೆ ಸಹಕಾರಿ



ಕಾರ್ಯಕ್ರಮವನ್ನು ಷಡಕ್ಷರ ಸ್ವಾಮೀಜಿ ಉದ್ಘಾಟಿಸಿದರು.

ಸರಗೂರು, ಮಾ.1– ವಿದ್ಯಾರ್ಥಿಗಳಲ್ಲಿ ಅಡಗಿರುವ ಸುಪ್ತ ಪ್ರತಿಭೆ ಹೊರತಂದು ಅವರ ಜ್ಞಾನಾರ್ಜನೆಗೆ ವಿಜ್ಞಾನ ದಿನಾಚರಣೆ ಸಹಕಾರಿ ಎಂದು ದಡದಹಳ್ಳಿ ಮಠದ ಷಡಕ್ಷರ ಸ್ವಾಮೀಜಿ ತಿಳಿಸಿದರು.

ಪಟ್ಟಣದ ಶ್ರೀದೇವರಾಜಸ್ವಾಮಿ ನಿರಂತರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ವಿಜ್ಞಾನದ ಮಾದರಿಗಳ ವಸ್ತು ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ಅವರು, ಈ ವಸ್ತು ಪ್ರದರ್ಶನದಲ್ಲಿ ವಿದ್ಯಾರ್ಥಿಗಳು ವಿಭಿನ್ನ ರೀತಿಯ 35ಕ್ಕಿಂತ ಹೆಚ್ಚು ಮಾದರಿಗಳನ್ನು ತಯಾರಿಸಿ ಪ್ರದರ್ಶನಕ್ಕೆ ಇಟ್ಟಿರುವುದು ಶ್ಲಾಘನೀಯ ಎಂದರು.

ಮುಖ್ಯಶಿಕ್ಷಕಿ ಅನ್ನಪೂರ್ಣ ಮಾತನಾಡಿ, ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ವಿಜ್ಞಾನ ಮಾದರಿಗಳ ಪ್ರದರ್ಶನ ಸಹಕಾರಿ ಎಂದರು.

ಶಾಲಾಭಿವೃದ್ಧಿ ಸಮಿತಿ ಕಾರ್ಯದರ್ಶಿ ಗುರುಸ್ವಾಮಿ ಮಾತನಾಡಿ, ರಾಷ್ಟ್ರೀಯ ವಿಜ್ಞಾನ ದಿನಾಚರಣೆಯಿಂದ ಜಗತ್ತಿನ ವಿಸ್ಮಯಗಳನ್ನು ಅರಿತುಕೊಳ್ಳಲು ಮಕ್ಕಳಿಗೆ ಸಹಕಾರಿಯಾಗಲಿದೆ ಎಂದರು.

ನಿರಂತರ ಕೋಚಿಂಗ್ ಸೆಂಟರ್‌ನ ಪ್ರಕಾಶ್, ಎಸ್‌ಡಿವಿಎಂ ಸಂಸ್ಥೆ ವಿಜ್ಞಾನ ಶಿಕ್ಷಕಿ ಕೃಷ್ಣವೇಣಿ ತೀರ್ಪುಗಾರರಾಗಿ ಕಾರ್ಯ ನಿರ್ವಹಿಸಿದ್ದರು. ಈ ವೇಳೆ ಸಹ ಶಿಕ್ಷಕರಾದ ಸುಲೋಚನ, ನಾಗಮ್ಮ, ಅಯ್ಯಮ್ಮ, ಪುಟ್ಟಮ್ಮ, ಅಂಬಿಕ, ರುಕ್ಮಿಣಿ, ಲೀಲಾವತಿ, ಯಶಸ್ವಿನಿ, ಮಹಾಲಕ್ಷ್ಮಿ, ಶಾಲಿನಿ, ಶಾಲಾ ಸಿಬ್ಬಂದಿ ವರ್ಗ ಮತ್ತು ಮಕ್ಕಳು ಅತ್ಯಂತ ಉತ್ಸುಕತೆಯಿಂದ ಭಾಗವಹಿಸಿದ್ದರು.

ತಿ.ನರಸೀಪುರ ಅದ್ಭುತ ಪರಂಪರೆ, ಸಂಸ್ಕೃತಿ ಕ್ಷೇತ್ರ

ಸಂಸದ ಯದುವೀರ್ ಬಣ್ಣನೆ



ಕಾರ್ಯಕ್ರಮವನ್ನು ಸಂಸದ ಯದುವೀರ್ ಉದ್ಘಾಟಿಸಿದರು.

ತಿ.ನರಸೀಪುರ, ಮಾ.1– ತಿ.ನರಸೀಪುರ ಅದ್ಭುತ ಪರಂಪರೆ, ಸಂಸ್ಕೃತಿ ಹೊಂದಿರುವ ಪವಿತ್ರ ಕ್ಷೇತ್ರವಾಗಿದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಬಣ್ಣಿಸಿದರು.

ತಾಲೂಕಿನ ಬಿಲಿಗೆರೆಹುಂಡಿ ಗ್ರಾಮದ ಗುರುಮಲ್ಲೇಶ್ವರ ದಾಸೋಹ ಮಠಕ್ಕೆ ಭೇಟಿ ನೀಡಿ ಗದ್ದುಗೆಗೆ ಪೂಜೆ ನೆರವೇರಿಸಿ ಮಾತನಾಡಿದ ಅವರು, ಕಾವೇರಿ–ಕಪಿಲಾ–ಸ್ಫಟಿಕ ಸರೋವರ ಸಂಗಮ ಕ್ಷೇತ್ರವಾಗಿರುವ ತಿ.ನರಸೀಪುರ ಕ್ಷೇತ್ರ ಪರಂಪರೆ, ಸಂಸ್ಕೃತಿಯೊಂದಿಗೆ ಐತಿಹಾಸಿಕ ದೇವಾಲಯಗಳ ತವರೂರಾಗಿದೆ. ಗುಂಜಾ ನರಸಿಂಹಸ್ವಾಮಿ, ಅಗಸ್ತ್ಯೇಶ್ವರ ಹಾಗೂ ಮುಡುಕುತೊರೆ ಮಲ್ಲಿಕಾರ್ಜುನ ಸ್ವಾಮಿ ದೇವಾಲಯಗಳ ಪವಿತ್ರ ಕ್ಷೇತ್ರವಾಗಿದ್ದು, ಅರಮನೆಗೆ ಹತ್ತಿರವಾದ ಕ್ಷೇತ್ರವೂ ಆಗಿದೆ ಎಂದರು.

ಮಠಗಳಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮಗಳು ಸಂಸ್ಕೃತಿ ಸಂರಕ್ಷಣೆ ಮತ್ತು ಉಳಿವಿಗಾಗಿ ಹೆಚ್ಚಾಗಿ ನಡೆಯುವ ಅವಶ್ಯಕತೆ ಇದೆ. ಮಠದ ಮೂಲಕ ಜನರಿಗೆ ಅನ್ನ, ಅಕ್ಷರ, ಆರೋಗ್ಯದಂತಹ ಸೇವೆಗಳು ದೊರೆಯುತ್ತಿರುವುದು ಶ್ಲಾಘನೀಯ. ಇನ್ನೂ ದೊಡ್ಡ ಮಟ್ಟದಲ್ಲಿ ಜನರ ಸೇವೆ ಮಾಡಬಹುದೆಂಬ ಭಾವನೆ ನನ್ನದಾಗಿದೆ. ಮಠ ಇನ್ನೂ ದೊಡ್ಡ ಮಟ್ಟದಲ್ಲಿ ಅಭಿವೃದ್ಧಿಯಾಗಿ ಜನರ ಸೇವೆಗೆ ಸಮರ್ಪಿಸಿಕೊಳ್ಳುವಂತಾಗಲಿ ಎಂದು ಆಶಿಸಿದರು.

ಪ್ರಧಾನಿ ಮೋದಿ ಅವರ ವಿಸ್ತೃತ ಭಾರತಕ್ಕೆ ನಾವೆಲ್ಲರೂ ಕೈ ಜೋಡಿಸಬೇಕಿದೆ. ಭಾರತೀಯ ಪರಂಪರೆ ಆಧಾರದ ಮೇಲೆ ವಿಸ್ತೃತ ಭಾರತವನ್ನು ನಾವು ಸಾಧಿಸುತ್ತೇವೆ ಎಂಬ ಆಸೆ ಪ್ರಧಾನಿಯವರದ್ದಾಗಿದೆ. ನಮ್ಮ ಭಾರತೀಯ ಪರಂಪರೆ ಹಿಂದಿನಿಂದಲೂ ಉಳಿದು ಬೆಳೆದುಕೊಂಡು ಬಂದಿದೆ. ಮಠಗಳ ಮೂಲಕ ಪರಂಪರೆ ರಕ್ಷಣೆಯಾಗಬೇಕಿದೆ. ಪ್ರಾಚೀನ ಕಾಲದಿಂದಲೂ ಪರಂಪರೆ ಉಳಿದಿರುವ ಏಕೈಕ ದೇಶ ಭಾರತವಾಗಿದ್ದು, ಬೇರಾವ ದೇಶದಲ್ಲೂ ಪರಂಪರೆ ಉಳಿದಿಲ್ಲ. ಅದಕ್ಕಾಗಿ ಪರಂಪರೆ ರಕ್ಷಣೆ ಎಲ್ಲರ ಕರ್ತವ್ಯವಾಗಿದೆ ಎಂದರು.

ಈ ವೇಳೆ ಪಟ್ಟದ ಮಠದ ಗುರುಸ್ವಾಮಿಗಳು, ಡೈರಿ ಅಧ್ಯಕ್ಷ ಮಹದೇವಸ್ವಾಮಿ, ಪುರಸಭಾ ಸದಸ್ಯ ಎಸ್.ಕೆ.ಕಿರಣ್, ಕಿರಗಸೂರು ಗ್ರಾಪಂ ಸದಸ್ಯ ಮಹದೇವಸ್ವಾಮಿ, ಶಿವರಾಜ್, ವಕೀಲ ಶಂಭುಲಿಂಗಸ್ವಾಮಿ, ಜ್ಞಾನೇಂದ್ರಮೂರ್ತಿ, ಗುತ್ತಿಗೆದಾರ ಮಂಟೇಲಿಂಗಪ್ಪ, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸೋಮಶೇಖರಪ್ಪ, ವೀರಶೈವ ಮಹಾಸಭಾ ನಿರ್ದೇಶಕ ತೊಂಟೇಶ್, ಉಪನ್ಯಾಸಕ ಮಾದಪ್ಪ ಮಹಾಲಿಂಗಸ್ವಾಮಿ, ಕಸಬಾ ಪಿಎಸಿಎಸ್ ನಿರ್ದೇಶಕ ಸುಂದರಸ್ವಾಮಿ, ಯುವ ಘಟಕದ ಅಧ್ಯಕ್ಷ ಕೈಯ್ಯಂಬಳ್ಳಿ ಅಶೋಕ್, ಕೆಇಬಿ ನಿವೃತ್ತ ನೌಕರ ಸಿದ್ದಲಿಂಗಸ್ವಾಮಿ ಹಾಜರಿದ್ದರು.

ಆಟೋ ಚಾಲಕರಿಗೆ ಸಮವಸ್ತ್ರ ವಿತರಣೆ



ಹೆಚ್.ಡಿ.ಕೋಟೆ ತಾಲೂಕಿನ ಹೊಮ್ಮರಗಳ್ಳಿ ಗ್ರಾಮದ ಶ್ರೀದುರ್ಗಾ ಪರಮೇಶ್ವರಿ ಆಟೋ ಚಾಲಕರ ಸಂಘದ ಸದಸ್ಯರಿಗೆ ಹೆಚ್.ಡಿ.ಕೋಟೆ ಠಾಣೆ ಸರ್ಕಲ್ ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್ ಮಾರ್ಗದರ್ಶನದಲ್ಲಿ ಹಂಪಾಪುರ ಉಪ ಪೊಲೀಸ್ ಠಾಣೆ ಮುಖ್ಯಪೇದೆ ಸುರೇಶ್, ಪೇದೆ ಅಭಿಷೇಕ್ ಸಮವಸ್ತ್ರ ವಿತರಿಸಿದರು.

ಹಳಿಯೂರು ಗ್ರಾಪಂ: 1.61 ಕೋಟಿ ಆದಾಯ ನಿರೀಕ್ಷೆ



ಬಜೆಟ್ ಅನ್ನು ಅಧ್ಯಕ್ಷೆ ರೇಖಾ ಮಂಡಿಸಿದರು.

ಚುಂಚನಕಟ್ಟೆ, ಮಾ.1– ಇಲ್ಲಿನ ಹಳಿಯೂರು ಗ್ರಾಪಂನಿಂದ 1.61 ಕೋಟಿ ರೂ. ಆದಾಯ ನಿರೀಕ್ಷಿಸಲಾಗಿದೆ ಎಂದು ಗ್ರಾಪಂ ಅಧ್ಯಕ್ಷೆ ರೇಖಾ ತಿಳಿಸಿದರು.

ಸಾಲಿಗ್ರಾಮ ತಾಲೂಕಿನ ಹಳಿಯೂರು ಗ್ರಾಪಂ ಕಚೇರಿಯಲ್ಲಿ ಶನಿವಾರ ನಡೆದ 2025–26ನೇ ಸಾಲಿನ ಬಜೆಟ್ ಮಂಡಿಸಿ ಮಾತನಾಡಿದ ಅವರು, ಅಂದಾಜು 2.58 ಕೋಟಿ ರೂ.ಗಳ ಬಜೆಟ್ ಇದಾಗಿದ್ದು, ಈ ಸಾಲಿನಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆಗೆ 11 ಲಕ್ಷ ರೂ., ರಸ್ತೆ ಸಂಪರ್ಕಕ್ಕಾಗಿ 16.92 ಲಕ್ಷ ರೂ., ವಿದ್ಯುತ್ತೀಕರಣಕ್ಕಾಗಿ 11.92 ಲಕ್ಷ ರೂ.ಗಳಂತೆ ಖರ್ಚು ಮಾಡಲಾಗಿದೆ ಎಂದು ಸಭೆಗೆ ತಿಳಿಸಿದರು.

ಸಭೆಯಲ್ಲಿ ಗ್ರಾಪಂ ಉಪಾಧ್ಯಕ್ಷ ನೂತನ್, ಸದಸ್ಯರಾದ ಮಹೇಶ್, ರಾಜೇಶ್ವರಿ, ಲಕ್ಷ್ಮಿ, ಕೃಷ್ಣಮೂರ್ತಿ, ಕೃಷ್ಣ, ಮಂಜುಳಾ, ಮಲ್ಲೇಶಚಾರಿ, ದಿನೇಶ, ಮಹಮ್ಮದ್ ಸಾದಿಕ್, ಮನೋಹರ, ಪ್ರಸಾದ್, ಹೇಮಲತಾ, ಪಿಡಿಓ ಚಿದಾನಂದ್, ಕಾರ್ಯದರ್ಶಿ ಸುನೀಲ್, ಎಸ್‌ಡಿಎ ಮಂಜುನಾಯಕ, ಬಿಲ್ ಕಲೆಕ್ಟರ್ ರಂಗಸ್ವಾಮಿ, ಡಿಇಓ ಹರೀಶ್ ಸೇರಿದಂತೆ ಮತ್ತಿತರರಿದ್ದರು.

ರಾಗಿ ಖರೀದಿ ಕೇಂದ್ರ ತೆರೆಯಲು ವಿಳಂಬ

ರಸ್ತೆ ತಡೆದು ರೈತ ಸಂಘ, ದಸಂಸದಿಂದ ಪ್ರತಿಭಟನೆ



ರಸ್ತೆ ತಡೆದು ರೈತ ಸಂಘ ಮತ್ತು ದಸಂಸ ಕಾರ್ಯಕರ್ತರು ಪ್ರತಿಭಟನೆ ಮಾಡಿದರು.

ಹುಣಸೂರು, ಮಾ.1– ರಾಗಿ ಖರೀದಿ ಕೇಂದ್ರ ತೆರೆಯಲು ವಿಳಂಬ ಮಾಡುತ್ತಿರುವ ಸರ್ಕಾರದ ಕ್ರಮ ಖಂಡಿಸಿ ರೈತ ಸಂಘ ಹಾಗೂ ದಸಂಸ ಕಾರ್ಯಕರ್ತರು ರಸ್ತೆ ತಡೆದು ಶನಿವಾರ ಪ್ರತಿಭಟನೆ ನಡೆಸಿದರು.

ನಗರದ ಉಪವಿಭಾಗಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ನಗರದಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ 275 ಅನ್ನು ತಡೆದು ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು. ಇದರಿಂದ ವಾಹನ ಸವಾರರು ಪರದಾಡುವಂತಾಗಿ ನೂರಾರು ವಾಹನಗಳು ರಸ್ತೆಯಲ್ಲಿ ಸಾಲುಗಟ್ಟಿ ನಿಂತಿದ್ದವು.

ರೈತ ಸಂಘದ ಜಿಲ್ಲಾಧ್ಯಕ್ಷ ಕುಮಾರ್ ಮಾತನಾಡಿ, ಮೈಸೂರು ಭಾಗದಲ್ಲಿ ರಾಗಿ ಬೆಳೆದು ಎರಡ್ಮೂರು ತಿಂಗಳಾದರೂ ಸಕಾಲಕ್ಕೆ ಸರ್ಕಾರದಿಂದ ರಾಗಿ ಖರೀದಿ ಕೇಂದ್ರ ತೆರೆದಿಲ್ಲ. ಇದರಿಂದ ರೈತರು ಕಷ್ಟಪಟ್ಟು ಬೆಳೆದ ರಾಗಿ ದಲ್ಲಾಳಿಗಳ ಪಾಲಾಗುತ್ತಿದೆ. ಸರ್ಕಾರದ ವಿಳಂಬ ನೀತಿ ಖಂಡಿಸಿ ರೈತ ಸಂಘ ಹೋರಾಟ ಮಾಡುತ್ತಿದ್ದು, ಹಲವು ಬಾರಿ ಮನವಿ ಮಾಡಿದ್ದರೂ ರೈತರ ಮನವಿ ಲೆಕ್ಕಿಸದೇ ಅನ್ಯಾಯವೆಸಗಿ ದಲ್ಲಾಳಿಗಳಿಗೆ ಅನುಕೂಲ ಮಾಡಿಕೊಡುತ್ತಿರುವ ಸರ್ಕಾರ ಹಾಗೂ ಅಧಿಕಾರಿಗಳ ವಿರುದ್ಧ ನಿರಂತರವಾಗಿ ಹೋರಾಟ ಮಾಡಬೇಕಾದ ಅನಿವಾರ್ಯತೆ ಎದುರಾಗಿದೆ ಎಂದರು.

ರೈತರ ಬೆಳೆಗೆ ಸರ್ಕಾರ ವೈಜ್ಞಾನಿಕ ಬೆಲೆ ನೀಡುತ್ತಿಲ್ಲ. ಪರಿಣಾಮ ರೈತರು ತಾವು ಬೆಳೆದ ಬೆಳೆಯನ್ನು ಹರಾಜು ಹಾಕುವ ಪರಿಸ್ಥಿತಿಯಲ್ಲಿದ್ದಾರೆ. ಹೀಗಾಗಿ ಸರ್ಕಾರ ಖರೀದಿ ಕೇಂದ್ರವನ್ನಾದರೂ ತೆರೆದರೆ ರೈತರಿಗೆ ಅನುಕೂಲವಾಗುತ್ತದೆ. ಆದ್ದರಿಂದ ರಾಗಿ ಖರೀದಿ ಕೇಂದ್ರ ಶೀಘ್ರ ತೆರೆಯಬೇಕು. ಅಲ್ಲದೇ ವರ್ಷಪೂರ್ತಿ ರಾಗಿ ಖರೀದಿ ಕೇಂದ್ರ ತೆರೆಯಲು ಕ್ರಮ ಕೈಗೊಳ್ಳಬೇಕು. ಖರೀದಿ ಕೇಂದ್ರದಲ್ಲಿ ಅಧಿಕಾರಿಗಳು ದಲ್ಲಾಳಿಗಳ ಜೊತೆ ಶಾಮೀಲಾಗಿದ್ದು, ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಮತ್ತು ಖರೀದಿ ಕೇಂದ್ರದಲ್ಲಿರುವ ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ಒತ್ತಾಯಿಸಿದರು.


ರಾಗಿ ಖರೀದಿ ಕೇಂದ್ರಕ್ಕೆ ರೈತರನ್ನು ನಿರ್ಬಂಧಿಸಿರುವ ಕ್ರಮ ಸರಿಯಲ್ಲ. ರೈತರು ಬೆಳೆದ ಎಲ್ಲಾ ರಾಗಿಯನ್ನು ಮಾರಾಟ ಮಾಡಲು ಸರ್ಕಾರವು ಅನುವು ಮಾಡಿಕೊಡುವುದು ಸೇರಿದಂತೆ ಇನ್ನಿತರ ಹಕ್ಕೋತ್ತಾಯಗಳನ್ನು ಸರ್ಕಾರ ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು.

ನಮ್ಮ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಉಪವಿಭಾಗಾಧಿಕಾರಿಗಳ ಕಚೇರಿ ಎದುರು ಪ್ರತಿಭಟನೆ ನಡೆಸುತ್ತಿದ್ದರೂ ಅವರು ಕೇಂದ್ರ ಸ್ಥಾನದಲ್ಲಿದ್ದು ಮನವಿ ಸ್ವೀಕರಿಸಲು ಆಗಮಿಸದಿರುವುದರಿಂದ ಬೀದಿಗಿಳಿದು ಹೋರಾಟ ಮಾಡುತ್ತಿದ್ದೇವೆ. ಅವರು ಸ್ಥಳಕ್ಕಾಗಮಿಸಿ ನಮ್ಮ ಮನವಿ ಸ್ವೀಕರಿಸುವವರೆಗೂ ಪ್ರತಿಭಟನೆ ನಿಲ್ಲಿಸುವುದಿಲ್ಲ ಎಂದು ಪ್ರತಿಭಟನಾಕಾರರು ಪಟ್ಟು ಹಿಡಿದರು.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಡಿವೈಎಸ್‌ಪಿ ಗೋಪಾಲಕೃಷ್ಣ ಮತ್ತು ಸಿಬ್ಬಂದಿ ಪ್ರತಿಭಟನಾಕಾರರ ಮನವೊಲಿಸಿ ರಸ್ತೆ ತಡೆ ತೆರವುಗೊಳಿಸಲು ಪ್ರಯತ್ನಿಸಿದರಾದರೂ ಇದಕ್ಕೆ ಒಪ್ಪದಿದ್ದಾಗ ಪ್ರತಿಭಟನಾಕಾರರನ್ನು ಬಂಧಿಸಿ ಕರೆದೊಯ್ದು, ನಂತರ ಬಿಡುಗಡೆಗೊಳಿಸಿದರು.

ಪ್ರತಿಭಟನೆಯಲ್ಲಿ ರೈತ ಸಂಘದ ತಾಲೂಕು ಅಧ್ಯಕ್ಷ ಚಿಕ್ಕಣ್ಣ, ರಾಜ್ಯ ಮಹಿಳಾ ಕಾರ್ಯದರ್ಶಿ ನೇತ್ರಾವತಿ, ಜಿಲ್ಲಾ ಉಪಾಧ್ಯಕ್ಷ ಆಲಿಜಾನ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಮೇಗೌಡ, ಜಿಲ್ಲಾ ಖಜಾಂಚಿ ಈಶ್ವರ, ಜಿಲ್ಲಾ ಉಪಾಧ್ಯಕ್ಷ ಪ್ರಕಾಶ್ ಅರಸ್, ಜಿಲ್ಲಾ ಪದಾಧಿಕಾರಿ ಬಸವರಾಜೇಗೌಡ, ಹೆಚ್.ಡಿ.ಕೋಟೆ ರೈತ ಸಂಘದ ಅಧ್ಯಕ್ಷ ಮಹದೇವನಾಯಕ, ಕೆ.ಆರ್.ನಗರ ರೈತ ಸಂಘದ ಅಧ್ಯಕ್ಷ ಮಲ್ಲೇಶ್, ದಸಂಸ ಮುಖಂಡ ರಾಮಕೃಷ್ಣ, ಸಿದ್ದೇಶ್, ಪ್ರಕಾಶ್, ರಾಜು, ನಾರಾಯಣ್, ಗಿರೀಶ್, ರವಿನಾಯಕ್, ಟಿ.ಎಂ. ಮೌನೇಶ್, ಶಿವರಾಜ್ ಇನ್ನಿತರರಿದ್ದರು.

ಮೂಗೂರು ಪಿಎಸಿಎಸ್‌ಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ತಿ.ನರಸೀಪುರ, ಮಾ.1– ತಾಲೂಕಿನ ಮೂಗೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಜಗದೀಶಮೂರ್ತಿ, ಉಪಾಧ್ಯಕ್ಷರಾಗಿ ಎಂ.ಬಿ.ಪರಶಿವಮೂರ್ತಿ ಶನಿವಾರ ಅವಿರೋಧವಾಗಿ ಆಯ್ಕೆಗೊಂಡರು.

ಸಂಘದ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಜಗದೀಶಮೂರ್ತಿ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಎಂ.ಬಿ.ಪರಶಿವಮೂರ್ತಿ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಹೆಚ್.ಎನ್.ಸುಮ ಘೋಷಿಸಿದರು. ಚುನಾವಣೆಯಲ್ಲಿ ಸಂಘದ 12 ಮಂದಿ ನಿರ್ದೇಶಕರು ಭಾಗವಹಿಸಿದ್ದರು. ಸಿಇಓ ನಂದೀಶ್ ಸಂಘದ ನಿರ್ದೇಶಕರಿಗೆ ಪ್ರಮಾಣ ಪತ್ರ ವಿತರಿಸಿದರು.

ನೂತನ ಅಧ್ಯಕ್ಷ ಜಗದೀಶಮೂರ್ತಿ ಮಾತನಾಡಿ, ನಾನು ಅವಿರೋಧವಾಗಿ ಆಯ್ಕೆಯಾಗಲು ಸಹಕಾರ ನೀಡಿದ ನಿರ್ದೇಶಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಂಘದ ಅಭಿವೃದ್ಧಿ ಹಾಗೂ ರೈತರಿಗೆ ಸರ್ಕಾರದ ಸಾಲ ಸೌಲಭ್ಯ ಕೊಡಿಸಲು ಶ್ರಮಿಸುತ್ತೇನೆ ಎಂದರು.

ಸಂಘದ ನಿರ್ದೇಶಕರಾದ ಎಂ.ಎನ್. ನಿಜಗುಣ, ಎಂ.ಬಿ.ಮಹೇಂದ್ರಕುಮಾರ್, ರಮೇಶ ನಾಯಕ, ಎಂ.ಕೆ.ಶರತ್ ಕುಮಾರ, ಎಂ.ಶಿವಸ್ವಾಮಿ, ಕಮಲಮ್ಮ, ರಾಧ, ತವಸಾರಯ್ಯ, ಎಂ.ಶಿವಮೂರ್ತಿ, ಎಸ್.ಸತೀಶ್, ಗ್ರಾಪಂ ಅಧ್ಯಕ್ಷ ಎಂ.ಡಿ.ಲೋಕೇಶ್, ಸದಸ್ಯ ಪುಟ್ಟಮಾದಯ್ಯ, ಮುಖಂಡರಾದ ಚೇತನ್, ಗುರುಮಲ್ಲಯ್ಯ ಇತರರಿದ್ದರು.

ಈ ಬಾರಿ ಬೇಸಿಗೆಯಲ್ಲಿ ಮೈಸೂರಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗದು

• ಉಸ್ತುವಾರಿ ಸಚಿವರಿಗೆ ಅಧಿಕಾರಿಗಳ ಮಾಹಿತಿ • ಜಾನುವಾರುಗಳ ಮೇವಿಗೂ ಕೊರತೆ ಆಗದಂತೆ ಎಚ್ಚರ ವಹಿಸಲು ಸಚಿವರ ಸೂಚನೆ



ಮೈಸೂರು ಜಿ.ಪಂ ಸಭಾಂಗಣದಲ್ಲಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕುಡಿಯುವ ನೀರಿನ ಸರಬರಾಜು ಸಂಬಂಧ ಸಭೆ ನಡೆಸಿದರು.

ಬರೀ 15 ನಿಮಿಷದಲ್ಲಿ ಸಭೆ ಅಂತ್ಯ!

ಬೇಸಿಗೆ ಹಿನ್ನೆಲೆಯಲ್ಲಿ ಕುಡಿಯುವ ನೀರಿನ ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ಎಚ್ಚರ ವಹಿಸಲು ಕರೆದಿದ್ದ ಸಭೆ ಕೇವಲ 15 ನಿಮಿಷದಲ್ಲಿ ಮುಗಿಯಿತು. ಮಧ್ಯಾಹ್ನ 12 ಗಂಟೆಗೆ ಆರಂಭವಾಗಬೇಕಾಗಿದ್ದ ಸಭೆಗೆ ಅಧಿಕಾರಿಗಳು ಬೆಳಗ್ಗೆ 11 ಗಂಟೆಗೆ ಆಗಮಿಸಿದ್ದರು. ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಬಿ–ಖಾತಾ ಕಾರ್ಯಕ್ರಮದಿಂದ ಬರುವುದು ಮಧ್ಯಾಹ್ನ 1.48 ಗಂಟೆ ಆಗಿತ್ತು. ಬಳಿಕ ಸಭೆಯಲ್ಲಿ ಅಧಿಕಾರಿಗಳಿಂದ ಮಾಹಿತಿ ಪಡೆದ ಸಚಿವರು, ಕೆಲ ಸಲಹೆ ಸೂಚನೆ ನೀಡಿದರು. ಬೇಸಿಗೆಯಲ್ಲಿ ಜನರಿಗೆ ಕುಡಿಯುವ ನೀರು, ಜಾನುವಾರುಗಳಿಗೆ ಮೇವಿನ ಕೊರತೆ ಉಂಟಾಗದಂತೆ ನೋಡಿಕೊಳ್ಳುವಂತೆ ಸೂಚಿಸಿ, ಚಾಮರಾಜನಗರದತ್ತ ತೆರಳಿದರು.

ಮೈಸೂರು, ಮಾ.1(ಎಂಟಿವೈ)– ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಹಾಗೂ ಸಾಂಕ್ರಾಮಿಕ ರೋಗ ಹರಡದಂತೆ ಅಗತ್ಯ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೂಚಿಸಿದ್ದಾರೆ.

ಮೈಸೂರಿನ ಜಿಲ್ಲಾ ಪಂಚಾಯತ್ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಶನಿವಾರ ಮೈಸೂರು ಜಿಲ್ಲೆಯಲ್ಲಿ ಮುಂಬರುವ ಬೇಸಿಗೆಯಲ್ಲಿ ಕುಡಿಯುವ ನೀರು ಮತ್ತು ಜಾನುವಾರುಗಳ ಮೇವಿನ ಲಭ್ಯತೆ ಕುರಿತ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬೇಸಿಗೆ ಆರಂಭವಾಗುತ್ತಿದ್ದು, ಜಿಲ್ಲೆಯಲ್ಲಿ ಎಲ್ಲಿಯೂ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಕಟ್ಟೆಚ್ಚರ ವಹಿಸಬೇಕು. ನೀರಿನ ಅಭಾವ ಉಂಟಾಗುವ ಗ್ರಾಮಗಳನ್ನು ಗುರುತಿಸಿ ಪಟ್ಟಿ ಮಾಡಿ, ನೀರಿನ ಪೂರೈಕೆಗೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ಸಲಹೆ ನೀಡಿದರು.

ಕಳೆದ ಬಾರಿ ಉತ್ತಮ ಮಳೆ ಆಗಿರುವುದರಿಂದ ಜಿಲ್ಲೆಯ ಜಲಾಶಯಗಳಲ್ಲಿ ಅಗತ್ಯ ಪ್ರಮಾಣದ ನೀರು ಲಭ್ಯವಿದೆ. ಕೃಷಿ ಚಟುವಟಿಕೆಗೆ ನೀರು ಬಳಕೆ ಮಾಡಿದ್ದರೂ ಜಲಾಶಯಗಳು ಎರಡು ಬಾರಿ ತುಂಬಿದ್ದರಿಂದ ಈ ಬಾರಿ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹುಶಃ ಉದ್ಭವಿಸುವುದಿಲ್ಲ. ಆದರೂ, ನೀರಿನ ಮೂಲಗಳ ಮಾಹಿತಿ, ನೀರಿನ ಪೂರೈಕೆ ವ್ಯತ್ಯಯವಾದರೆ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದರು.

ಜಾನುವಾರುಗಳಿಗೆ ಮೇವಿನ ಕೊರತೆ ಉಂಟಾಗಬಾರದು. ಬೇಸಿಗೆಯಲ್ಲಿ ಶುದ್ಧ ಕುಡಿಯುವ ನೀರು ದೊರೆಯುವಂತೆ ನೋಡಿಕೊಳ್ಳಬೇಕು. ಮಲಿನ ನೀರು ಸರಬರಾಜಾದರೆ ಕೆಲ ಸಾಂಕ್ರಾಮಿಕ ರೋಗದ ಭೀತಿ ಇದೆ. ಬೋರ್‌ವೆಲ್‌ಗಳ ಫ್ಲಾಟ್‌ಫಾರಂನಲ್ಲಿ ಕಲುಷಿತ ನೀರು ನಿಲ್ಲದಂತೆ ಕಟ್ಟೆಚ್ಚರ ವಹಿಸಬೇಕು. ಜಲಾಶಯಗಳಲ್ಲಿ ನೀರಿನ ಲಭ್ಯತೆ ಪ್ರಮಾಣಕ್ಕೆ ಅನುಗುಣವಾಗಿ ನೀರು ಪೂರೈಕೆಗೆ ಕ್ರಮ ಕೈಗೊಳ್ಳಬೇಕು. ಮುನ್ನೆಚ್ಚರಿಕಾ ಕ್ರಮವಾಗಿ ಕೆಟ್ಟಿರುವ ಬೋರ್‌ವೆಲ್‌ಗಳ ದುರಸ್ತಿಗೆ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಮಾತನಾಡಿ, ಜಿಲ್ಲೆಯಲ್ಲಿ 837 ಮಿಲಿ ಮೀಟರ್ ವಾಡಿಕೆ ಮಳೆ ಆಗಬೇಕಾಗಿತ್ತು. ಆದರೆ, ವಾಡಿಕೆಗಿಂತ ಹೆಚ್ಚಾಗಿ ಮಳೆಯಾಗಿದೆ. 965 ಮಿಲಿ ಮೀಟರ್ ಮಳೆ ಆಗಿದೆ. ಜಿಲ್ಲೆಯ ಜಲಾಶಯಗಳಲ್ಲಿ ಅಗತ್ಯ ಪ್ರಮಾಣದ ನೀರು ಸಂಗ್ರಹವಿದ್ದು, ಮೇ ಅಂತ್ಯದವರೆಗೆ ಕುಡಿಯುವ ನೀರಿಗೆ ಯಾವುದೇ ತೊಂದರೆಯಾಗುವುದಿಲ್ಲ. ಗ್ರಾಮೀಣ ಕುಡಿಯುವ ನೀರಿನ ಇಲಾಖೆ ಬೇಸಿಗೆ ಕೊನೆಯಲ್ಲಿ 94 ಗ್ರಾಮಗಳಲ್ಲಿ ನೀರಿನ ಕೊರತೆ ಆಗಬಹುದು ಎಂದು ಪಟ್ಟಿ ಮಾಡಿಕೊಂಡಿದೆ. ನಗರ ಪ್ರದೇಶದಲ್ಲಿ ನೀರಿನ ಕೊರತೆ ಉಂಟಾಗುವುದಿಲ್ಲ ಎಂದರು.

90 ಟಿಎಂಸಿ ನೀರು: ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯಗಳಲ್ಲಿ ಒಟ್ಟು 90 ಟಿಎಂಸಿ ನೀರು ಲಭ್ಯತೆ ಇದ್ದು, ಬೇಸಿಗೆ ಬೆಳೆಗೆ ನೀರು ಬಿಟ್ಟರೂ ಮೇ ಅಂತ್ಯದವರೆಗೂ ಕುಡಿಯುವ ನೀರು ಪೂರೈಕೆಗೆ ಯಾವುದೇ ಸಮಸ್ಯೆ ಉಂಟಾಗುವುದಿಲ್ಲ ಎಂದು ನೀರಾವರಿ ಇಲಾಖೆ ಅಧಿಕಾರಿಗಳೂ ಸ್ಪಷ್ಟನೆ ನೀಡಿದರು.

29 ಗ್ರಾಮಗಳಲ್ಲಿ ನೀರಿನ ಸಮಸ್ಯೆ: ಕಳೆದ ವರ್ಷ ಮೈಸೂರು, ನಂಜನಗೂಡು ಹಾಗೂ ಪಿರಿಯಾಪಟ್ಟಣ ತಾಲೂಕು ಹೊರತುಪಡಿಸಿ ಜಿಲ್ಲೆಯ 6 ತಾಲೂಕುಗಳ 29 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿತ್ತು. ಇಲ್ಲೆಲ್ಲಾ 31 ಬೋರ್‌ವೆಲ್‌ಗಳನ್ನು ಬಾಡಿಗೆಗೆ ಪಡೆಯಲಾಗಿತ್ತು ಎಂದು ಗ್ರಾಮೀಣ ನೀರು ಸರಬರಾಜು ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದರು.

ಮೈಸೂರಿನ ಹೂಟಗಳ್ಳಿ ನಗರ ಸಭೆಯ 6 ವಾರ್ಡ್, ಪಿರಿಯಾಪಟ್ಟಣದಲ್ಲಿ 7 ವಾರ್ಡ್ ಹಾಗೂ ಬೋಗಾದಿಯ 1 ವಾರ್ಡ್ ಸೇರಿದಂತೆ 14 ವಾರ್ಡ್‌ಗಳಲ್ಲಿ ನೀರಿನ ಬವಣೆ ಉಂಟಾಗಿತ್ತು. ಹೂಟಗಳ್ಳಿ ಹಾಗೂ ಬೋಗಾದಿಯಲ್ಲಿ ತಲಾ ಒಂದೊಂದು ಹಾಗೂ ಪಿರಿಯಾಪಟ್ಟಣ ಸ್ಥಳೀಯ ಸಂಸ್ಥೆ 2 ಟ್ಯಾಂಕರ್‌ನಲ್ಲಿ ನೀರು ಸರಬರಾಜು ಮಾಡಲಾಗಿತ್ತು. ಒಂದು ಖಾಸಗಿ ಬೋರ್‌ವೆಲ್ ಬಾಡಿಗೆಗೆ ಪಡೆದು ನೀರು ಪೂರೈಸಲಾಗಿತ್ತು ಎಂದು ವಿವರಿಸಿದರು.

ಬಳಿಕ ಸಚಿವ ಡಾ.ಮಹದೇವಪ್ಪ ಮಾತನಾಡಿ, ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲು ಸ್ಥಳೀಯ ಶಾಸಕರ ಅಧ್ಯಕ್ಷತೆಯ ಸಭೆಯಲ್ಲಿ ಅನುಮೋದನೆ ಆಗಿರಬೇಕು. ನೀರು ಸರಬರಾಜು ಟ್ಯಾಂಕರ್‌ಗೆ ಜಿಪಿಎಸ್ ಅಳವಡಿಸಬೇಕು ಎಂದು ಸೂಚನೆ ನೀಡಿದರು.

ಸಭೆಯಲ್ಲಿ ಜಿ.ಪಂ. ಸಿಇಓ ಎಸ್.ಹುಕೇಶ್ ಕುಮಾರ್, ಮೈಸೂರು ಮಹಾನಗರ ಪಾಲಿಕೆಯ ಆಯುಕ್ತ ಶೇಖ್ ಆಶಿಫ್ ತನ್ವೀರ್, ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಪತ್ನಿ ಕುಡಿಯಲು ಹಣ ಕೊಡದ್ದಕ್ಕೆ ತನ್ನ ಮನೆಗೆ ಬೆಂಕಿ ಹಚ್ಚಿದ ಮಾಜಿ ಯೋಧ




ಮೈಸೂರು, ಮಾ.1(ಎಂಕೆ)– ಕುಡಿಯಲು ಕಾಸು ಕೊಡದಿದ್ದಕ್ಕೆ ಮಾಜಿ ಯೋಧನೋರ್ವ ತನ್ನ ಮನೆಗೇ ಬೆಂಕಿ ಇಟ್ಟ ವಿಚಿತ್ರ ಘಟನೆ ಶನಿವಾರ ನಡೆದಿದೆ.

ಮೈಸೂರಿನ ಅಗ್ರಹಾರ ಸಮೀಪದ ಮಧುವನ ಬಡಾವಣೆಯಲ್ಲಿನ ಮನೆಯೊಂದರಲ್ಲಿ ಅವಘಡ ಸಂಭವಿಸಿದ್ದು, ಹೆಂಡತಿ ಮದ್ಯಪಾನ ಮಾಡಲು ಹಣ ಕೊಡದಿದ್ದಕ್ಕೆ ಸಿಟ್ಟಿಗೆದ್ದ ಮಾಜಿ ಯೋಧ, ಕುಡಿತದ ಅಮಲಿನಲ್ಲಿ ಮನೆಯ ರೂಂನಲ್ಲಿದ್ದ ಹಾಸಿಗೆ, ದಿಂಬು ಇನ್ನಿತರೆ ಬಟ್ಟೆಗಳಿಗೆ ಬೆಂಕಿ ಹಚ್ಚಿದ್ದಾನೆ ಎನ್ನಲಾಗಿದೆ.

ಬೆಂಕಿ ಹೆಚ್ಚಾಗಿ ಆವರಿಸುತ್ತಿದ್ದಂತೆ ನೆರೆ–ಹೊರೆಯವರು ನೀರು ಹಾಯಿಸಿ ಬೆಂಕಿ ನಂದಿಸುವ ಪ್ರಯತ್ನ ಮಾಡಿದ್ದಾರೆ. ನಂತರ ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಸರಸ್ವತಿಪುರಂ ಅಗ್ನಿಶಾಮಕ ಸಿಬ್ಬಂದಿ 30 ನಿಮಿಷಕ್ಕೂ ಹೆಚ್ಚು ಕಾಲ ಕಾರ್ಯಾಚರಣೆ ನಡೆಸಿ, ಬೆಂಕಿ ನಂದಿಸಿದ್ದಾರೆ. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯವಾಗಿಲ್ಲ. ಗಂಡ–ಹೆಂಡತಿ ನಡುವೆ ಜಗಳವಾಗಿದ್ದು, ಹಣ ಕೊಡಲಿಲ್ಲ ಎಂಬ ವಿಚಾರಕ್ಕೆ ಬೆಂಕಿ ಹಚ್ಚಲಾಗಿದೆ ಎಂಬ ಮಾಹಿತಿ ಇದೆ ಎಂದು ಅಗ್ನಿಶಾಮಕ ಸಿಬ್ಬಂದಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಕಬಿನಿ ಎರಡು, ಮೂರನೇ ಹಂತದ ಯೋಜನೆಯಲ್ಲಿ ಮೈಸೂರಿಗೆ 120 ಎಂಎಲ್‌ಡಿ ನೀರು ಪೂರೈಕೆಗೆ 150 ಕೋಟಿ ಬಿಡುಗಡೆ ಮಾಡಿ

ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಲಕ್ಷ್ಮಣ್, ರಾಜೀವ್ ಮನವಿ



ಮೈಸೂರಿನ ಕಬಿನಿ 2 ಮತ್ತು 3ನೇ ಹಂತದ ಯೋಜನೆಗೆ 150 ಕೋಟಿ ಬಿಡುಗಡೆ ಮಾಡುವಂತೆ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಬೆಂಗಳೂರಿನಲ್ಲಿ ಶನಿವಾರ ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಮನವಿ ಮಾಡಿದರು.

ಮೈಸೂರು, ಮಾ.1(ಬಿಎಲ್‌ಯು)– ಕಬಿನಿ 2 ಮತ್ತು 3ನೇ ಹಂತದ ಯೋಜನೆಯಲ್ಲಿ 120 ಎಂಎಲ್‌ಡಿ ಕುಡಿಯುವ ನೀರು ಸರಬರಾಜಿಗೆ ಅನುವಾಗುವಂತೆ 150 ಕೋಟಿ ಅನುದಾನ ನೀಡುವಂತೆ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಹಾಗೂ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಲ್ಲಿ ಮನವಿ ಮಾಡಿದ್ದಾರೆ.

ಈ ಸಂಬಂಧ ಬೆಂಗಳೂರಿನಲ್ಲಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ ಇಬ್ಬರು ನಾಯಕರು, ಕಬಿನಿ 2 ಮತ್ತು 3ನೇ ಹಂತದ ಯೋಜನೆ ಸಾಕಾರಗೊಂಡರೆ ನಗರ ವ್ಯಾಪ್ತಿ ಹಾಗೂ ಜಿಲ್ಲೆಯ ಬಹುಗ್ರಾಮಗಳಿಗೆ ಸಮರ್ಪಕ ಕುಡಿಯುವ ನೀರು ಸರಬರಾಜು ಮಾಡಬಹುದು ಎಂದು ಸಿದ್ದರಾಮಯ್ಯ ಅವರಿಗೆ ಮನದಟ್ಟು ಮಾಡಿಕೊಟ್ಟರು.

ಕೇಂದ್ರದ ಯುಪಿಎ ಸರ್ಕಾರ ಅಧಿಕಾರದಲ್ಲಿದ್ದಾಗ ಕಬಿನಿ ಕುಡಿಯುವ ನೀರಿನ ಸರಬರಾಜು ಯೋಜನೆಗೆ 110 ಕೋಟಿ ಅನುದಾನ ನೀಡಿತ್ತು. ಇದರಿಂದ ಕಬಿನಿ 1ನೇ ಹಂತದಲ್ಲಿ 60 ಎಂಎಲ್‌ಡಿ, 2ನೇ ಹಂತದಲ್ಲಿ 60 ಎಂಎಲ್‌ಡಿ ಮತ್ತು 3ನೇ ಹಂತದಲ್ಲಿ 60 ಎಂಎಲ್‌ಡಿ ಸೇರಿದಂತೆ ಒಟ್ಟು 180 ಎಂಎಲ್‌ಡಿ ನೀರು ಸರಬರಾಜು ಮಾಡಲಾಗುತ್ತಿದೆ.

ಕಬಿನಿ ಎರಡನೇ ಹಂತದಲ್ಲಿ 80 ಎಂಎಲ್‌ಡಿ ಬದಲು ನಮಗೆ 30 ಎಂಎಲ್‌ಡಿ ಮಾತ್ರ ಹೆಚ್ಚುವರಿಯಾಗಿ ದೊರೆಯುತ್ತಿದೆ. ಈ ಯೋಜನೆಯಿಂದ ನಗರ ವ್ಯಾಪ್ತಿ ಹೊರತುಪಡಿಸಿ ಹೊರವಲಯದಲ್ಲಿರುವ ಬಡಾವಣೆಗಳಿಗೆ ನೀರು ಸರಬರಾಜು ಮಾಡಲು ಸಾಧ್ಯವಾಗುತ್ತಿಲ್ಲ. ಆದ ಕಾರಣ 80 ಎಂಎಲ್‌ಡಿ ನೀರನ್ನು ಪಂಪ್ ಮಾಡುವ 2 ಮೋಟಾರ್‌ಗಳನ್ನು ಅಳವಡಿಸಿ ಅದಕ್ಕೆ ಬೇಕಾದ ಇತರೆ ಸೌಕರ್ಯ ಕಲ್ಪಿಸಿದರೆ ಮೈಸೂರು ನಗರಾಭಿವೃದ್ಧಿ ವ್ಯಾಪ್ತಿಯ ಒಟ್ಟು 382 ಚದರ ಕಿಲೋಮೀಟರ್ ಪ್ರದೇಶಗಳಿಗೆ ನೀರು ಸರಬರಾಜು ಮಾಡಬಹುದು. ಜೊತೆಗೆ ಮೈಸೂರು ಜಿಲ್ಲೆಯ ವರುಣ, ಚಾಮುಂಡೇಶ್ವರಿ, ನಂಜನಗೂಡು ಹಾಗೂ ಹೆಚ್.ಡಿ.ಕೋಟೆ, ವರುಣ ಕ್ಷೇತ್ರದ ಬಹು ಗ್ರಾಮಗಳಿಗೆ ಹಾಗೂ ಮೈಸೂರು ನಗರದ ಶ್ರೀರಾಂಪುರ, ಕಡಕೊಳ, ಬೋಗಾದಿ ವ್ಯಾಪ್ತಿಯಲ್ಲಿ ಕುಡಿಯುವ ನೀರು ಸರಬರಾಜು ಮಾಡಬಹುದು.

ಈ ಹಿನ್ನೆಲೆ ಕಬಿನಿ 2ನೇ ಹಾಗೂ 3ನೇ ಹಂತದಲ್ಲಿ 120 ಎಂಎಲ್‌ಡಿ ನೀರು ಸರಬರಾಜು ಯೋಜನೆಗೆ ಅಗತ್ಯವಿರುವ 150 ಕೋಟಿ ರೂಪಾಯಿ ಬಿಡುಗಡೆ ಮಾಡಿದರೆ ಮೈಸೂರಿನ ಎಲ್ಲರಿಗೂ ಸಮರ್ಪಕ ಕುಡಿಯುವ ನೀರು ಸರಬರಾಜು ಮಾಡಬಹುದು ಎಂದು ಲಕ್ಷ್ಮಣ್ ಹಾಗೂ ರಾಜೀವ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದ್ದಾರೆ.

ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ನಿಂದ ವಿದ್ಯಾರ್ಥಿವೇತನ



ಮೈಸೂರಿನ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಶೋರೂಮಿನಲ್ಲಿ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಿಸಲಾಯಿತು. ಕಾರ್ಯಕ್ರಮವನ್ನು ಶಾಸಕ ಟಿ.ಎಸ್.ಶ್ರೀವತ್ಸ ಉದ್ಘಾಟಿಸಿದರು. ಅಪರಾಧ–ಸಂಚಾರ ಉಪ ಪೊಲೀಸ್ ಆಯುಕ್ತೆ ಎಸ್.ಜಾಹ್ನವಿ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಬಿ.ರಂಗೇಗೌಡ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ಬಿ.ಬಸವರಾಜು, ಮಲಬಾರ್ ಗೋಲ್ಡ್ & ಡೈಮಂಡ್ಸ್‌ನ ಇತರ ನಿರ್ವಹಣಾ ತಂಡದ ಸದಸ್ಯರು ಉಪಸ್ಥಿತರಿದ್ದರು.

ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ಮಾದರಿ ಕಾಲೇಜು ವಿದ್ಯಾರ್ಥಿಗಳಿಗೆ 'ಪದವಿ ಅಕ್ಷಯ ದಾಸೋಹ'

• ಕುವೆಂಪುನಗರ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳಿಗೆ ಊಟ ಬಡಿಸಿ ಶಾಸಕ ಟಿ.ಎಸ್.ಶ್ರೀವತ್ಸ ಚಾಲನೆ • ಗ್ರಾಮೀಣ ಪ್ರದೇಶದ ಹಾಸ್ಟೆಲ್ ವಿದ್ಯಾರ್ಥಿನಿಯರಿಗೆ ಮೊದಲ ಹಂತದಲ್ಲಿ ದಾಸೋಹ



ಮೈಸೂರಿನ ಕುವೆಂಪುನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪದವಿ ಅಕ್ಷಯ ದಾಸೋಹ ಯೋಜನೆಗೆ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಶನಿವಾರ ಚಾಲನೆ ನೀಡಿದರು.

ಮೈಸೂರು, ಮಾ.1(ಎಂಟಿವೈ)– ಶಾಲಾ ಮಕ್ಕಳಿಗೆ ನೀಡುವ ಮಧ್ಯಾಹ್ನದ ಬಿಸಿಯೂಟ ಮಾದರಿಯಲ್ಲಿ ಮೈಸೂರಿನ ಕುವೆಂಪುನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳಿಗೆ 'ಪದವಿ ಅಕ್ಷಯ ದಾಸೋಹ' ಕಾರ್ಯಕ್ರಮ ಆರಂಭಿಸಲಾಗಿದ್ದು, ಶನಿವಾರ ಮಕ್ಕಳಿಗೆ ಊಟ ಬಡಿಸುವ ಮೂಲಕ ಶಾಸಕ ಟಿ.ಎಸ್. ಶ್ರೀವತ್ಸ ದಾಸೋಹ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಕುವೆಂಪುನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವ್ಯಾಸಂಗ ಮಾಡುವ ಗ್ರಾಮೀಣ ಪ್ರದೇಶ ಹಾಗೂ ಹಾಸ್ಟೆಲ್‌ಗಳಲ್ಲಿ ವಾಸ್ತವ್ಯ ಹೂಡಿರುವ 80 ವಿದ್ಯಾರ್ಥಿನಿಯರಿಗೆ ಮೊದಲ ಹಂತದಲ್ಲಿ ದಾಸೋಹದ ವ್ಯವಸ್ಥೆ ಕಲ್ಪಿಸಲು ಕಾಲೇಜು ಅಭಿವೃದ್ಧಿ ಮಂಡಳಿ ಸದಸ್ಯರು, ಕಾಲೇಜಿನ ಪ್ರಾಂಶುಪಾಲರು, ಪ್ರಾಧ್ಯಾಪಕರು, ಅಧ್ಯಾಪಕೇತರರು ಆರ್ಥಿಕ ನೆರವು ನೀಡಿ ಇಸ್ಕಾನ್ ಸಂಸ್ಥೆಯ ಅಕ್ಷಯ ಪಾತ್ರೆ ಯೋಜನೆಯೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು, ಮಧ್ಯಾಹ್ನದ ಊಟ ಸರಬರಾಜಿಗೆ ಕ್ರಮ ಕೈಗೊಳ್ಳಲಾಗಿದೆ.

ಕಾಲೇಜು ಅಭಿವೃದ್ಧಿ ಮಂಡಳಿ ಅಧ್ಯಕ್ಷರೂ ಆದ ಶಾಸಕ ಟಿ.ಎಸ್.ಶ್ರೀವತ್ಸ ಮಕ್ಕಳಿಗೆ ದಾಸೋಹ ಬಡಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಕಾಲೇಜಿನ ಅಧ್ಯಾಪಕ, ಅಧ್ಯಾಪಕೇತರರು ದೇಣಿಗೆ ನೀಡಿ ಕಾಲೇಜಿನ ಗ್ರಾಮೀಣ ಹಾಗೂ ಹಾಸ್ಟೆಲ್‌ಗಳಲ್ಲಿ ವಾಸವಿರುವ 80 ಹೆಣ್ಣು ಮಕ್ಕಳಿಗೆ ದಾಸೋಹದ ವ್ಯವಸ್ಥೆ ಮಾಡಿರುವುದು ಶ್ಲಾಘನೀಯ. ಸರ್ಕಾರಿ ಪದವಿ ಕಾಲೇಜಿನಲ್ಲಿ ವೈಯಕ್ತಿಕವಾಗಿ ದೇಣಿಗೆ ನೀಡಿ, ಇಸ್ಕಾನ್ ಜೊತೆ ಒಪ್ಪಂದ ಮಾಡಿಕೊಂಡು ಮಧ್ಯಾಹ್ನದ ಊಟ ಪೂರೈಸುತ್ತಿರುವುದು ರಾಜ್ಯದಲ್ಲಿಯೇ ಇದೇ ಮೊದಲಾಗಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಎಲ್ಲಾ ಕಾಲೇಜುಗಳಲ್ಲಿ ವಿದ್ಯಾರ್ಥಿನಿಯರೇ ಹೆಚ್ಚಿನ ಸಂಖ್ಯೆಯಲ್ಲಿರುತ್ತಾರೆ. ಆದರೆ ಈ ಕಾಲೇಜಿನಲ್ಲಿ ವಿದ್ಯಾರ್ಥಿನಿಯರ ಸಂಖ್ಯೆ ಕಡಿಮೆ ಇದೆ. ಈ ಕಾಲೇಜಿಗೆ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳಿಂದ ಬರುವ ವಿದ್ಯಾರ್ಥಿಗಳೇ ಹೆಚ್ಚಾಗಿದ್ದಾರೆ. ಕೊಠಡಿಗಳ ಕೊರತೆ ಇರುವುದರಿಂದ ಸಾಕಷ್ಟು ಮಂದಿ ವಿದ್ಯಾರ್ಥಿಗಳು ಉಪಾಹಾರ ಮಾಡದೇ ಕಾಲೇಜಿಗೆ ಬರುತ್ತಾರೆ. ಹಲವು ವಿದ್ಯಾರ್ಥಿಗಳು ಮಧ್ಯಾಹ್ನದ ಊಟ ಮಾಡುವುದಿಲ್ಲ. ಇದನ್ನು ಅರಿತ ಪ್ರಾಂಶುಪಾಲ ಡಾ.ಪುಟ್ಟರಾಜು ಅವರು ತಮ್ಮ ಕಾಲೇಜಿನ ಅಧ್ಯಾಪಕರು, ಅಧ್ಯಾಪಕೇತರರ ಬಳಿ ಸಮಾಲೋಚಿಸಿ, ವೈಯಕ್ತಿಕ ದೇಣಿಗೆ ಮೂಲಕ ಮಧ್ಯಾಹ್ನದ ಊಟ ಯೋಜನೆ ಆರಂಭಿಸಬಹುದೇ ಎಂದು ಕೇಳಿದರು. ಇದಕ್ಕೆ ಎಲ್ಲರೂ ಸಮ್ಮತಿಸಿದರು. ನಂತರ ಸಿಡಿಸಿ ಸಭೆಯಲ್ಲಿ ವಿಷಯ ಪ್ರಸ್ತಾಪಿಸಿದರು. ಅಲ್ಲಿಯೂ ಒಪ್ಪಿಗೆ ಸಿಕ್ಕಿತು. ಇದರಿಂದ ಇಂದಿನಿಂದ ಮೊದಲ ಹಂತದಲ್ಲಿ 80 ವಿದ್ಯಾರ್ಥಿನಿಯರಿಗೆ ದಾಸೋಹದ ವ್ಯವಸ್ಥೆ ಆರಂಭಿಸಲಾಗಿದೆ ಎಂದರು.

ಇಸ್ಕಾನ್‌ನ ಅಕ್ಷಯ ಫೌಂಡೇಷನ್ ಈಗಾಗಲೇ ರಾಜ್ಯದ ವಿವಿಧೆಡೆ ಶಾಲೆಗಳಿಗೆ ಮಧ್ಯಾಹ್ನದ ಊಟ ಪೂರೈಸುತ್ತಿರುವುದರಿಂದ ಅವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಈ ಸೆಮಿಸ್ಟರ್‌ಗೆ ಆಗುವಷ್ಟು ಹಣವನ್ನು ಪಾವತಿಸಿದ್ದು, ಮಧ್ಯಾಹ್ನ ಒಂದು ಗಂಟೆಗೆ ಊಟ ಪೂರೈಸಲಿದ್ದಾರೆ. ಸರದಿಯಂತೆ ಪ್ರಾಧ್ಯಾಪಕರ ಉಸ್ತುವಾರಿಯಲ್ಲಿ ತರಗತಿ ಪ್ರತಿನಿಧಿಗಳ ನೇತೃತ್ವದಲ್ಲಿ ಆಯ್ದ ವಿದ್ಯಾರ್ಥಿನಿಯರಿಗೆ ಊಟ ವಿತರಿಸಲಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಪ್ರಾಂಶುಪಾಲ ಡಾ.ಪುಟ್ಟರಾಜು, ಸಿಡಿಸಿ ಸದಸ್ಯರಾದ ಲಖನ್ ನಾಯಕ್, ಜಗದೀಶ್, ಡಾ.ಅಶ್ವಿನಿ, ರಮೇಶ್, ಲಿಂಗಣ್ಣ ಮಾತನಾಡಿದರು. ಐಕ್ಯೂಎಸಿ ಸಂಚಾಲಕ ಮುರಳಿ, ಪತ್ರಾಂಕಿತ ವ್ಯವಸ್ಥಾಪಕ ಎಂ. ವಿದ್ಯಾರಣ್ಯ, ಲಯನ್ ವಿಶ್ವನಾಥ್, ಮನೋಜ್ ಇದ್ದರು. ರಚನಾ ಪ್ರಾರ್ಥಿಸಿದರು. ಡಾ.ಪಿ.ಬೆಟ್ಟೇಗೌಡ ಸ್ವಾಗತಿಸಿದರು. ಡಾ.ಗುರುಸ್ವಾಮಿ ನಿರೂಪಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಶಭಾಷ್ ಬಡ್ಡಿಮಗ್ನೆ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಡ್ರ್ಯಾಗನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಬಡಾಸ್ ರವಿಕುಮಾರ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
1990's (ಕ)	4 ಪ್ರದರ್ಶನಗಳು
ಗಾಯಿತ್ರಿ	
ಛಾವಾ (ಹಿಂ)	4 ಪ್ರದರ್ಶನಗಳು
ರಾಜಕಮಲ್	
ಶಬ್ದಂ(ತ)	4 ಪ್ರದರ್ಶನಗಳು
ಸಂಗಂ	
ಅಪಾಯವಿದೆ ಎಚ್ಚರಿಕೆ + FIR (ಕ)	2+2 ಪ್ರದರ್ಶನಗಳು
ಲಿಡೋ	
1990's (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
FORST (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ವಿದ್ದಾಮುಯರ್ಚಿ (ತ): ಬೆ.6.55ಕ್ಕೆ, ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.24ಕ್ಕೆ.
ಸ್ಕ್ರೀನ್ 2	ಅಧಿಪತ್ರ (ಕ): ಬೆ.10.10ಕ್ಕೆ, ನೋಡಿದವರು ಏನಂತಾರೆ (ಕ): ಮ.1.15ಕ್ಕೆ, ರುದ್ರ ಗರುಡ ಪುರಾಣ (ಕ): ಸಂ.4.10ಕ್ಕೆ, ಬಡಾಸ್ ರವಿಕುಮಾರ್ (ಹಿಂ): ರಾ.7.10ಕ್ಕೆ, ನರೇ ಅನೀಂಟೆ ಮೂನನ್‌ಮಕ್ಕಲ್ (ಮ): ರಾ.10.10ಕ್ಕೆ.
ಸ್ಕ್ರೀನ್ 3	ಮಿ.ರಾಣಿ (ಕ): ಬೆ.10.30ಕ್ಕೆ, ಲವಯಪಾ (ಹಿಂ): ಮ.1.15ಕ್ಕೆ, ರಾ.7.05ಕ್ಕೆ, ರಾ.10ಕ್ಕೆ, ಭಗೀರಥ (ಕ): ಸಂ.4.10ಕ್ಕೆ.
ಸ್ಕ್ರೀನ್ 4	ಅನ್‌ಲಾಕ್ ರಾಘವ (ಕ): ಬೆ.10.25ಕ್ಕೆ, ಸ್ಕೈಫೋರ್ಸ್ (ಹಿಂ): ಮ.1.20ಕ್ಕೆ, ಥಂಡೆಲ್ (ತೆ): ಸಂ.4.15ಕ್ಕೆ, ರಾ.7.20ಕ್ಕೆ, ರಾ.10.25ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ರಾಯಲ್ (ಕ): ಬೆ.10.40ಕ್ಕೆ, ರುದ್ರ ಗರುಡ ಪುರಾಣ (ಕ): ಮ.1.30ಕ್ಕೆ, ಸಂ.6.45ಕ್ಕೆ, ಮ್ಯಾಕ್ಸ್ (ಕ): ಸಂ.4.15ಕ್ಕೆ, ಕುಜಂತೈಗಲ್ ಮುನ್ನೇತ್ರ ಕಳಗಂ (ತ): ರಾ.9.30ಕ್ಕೆ.
ಸ್ಕ್ರೀನ್ 2	ಫಾರೆಸ್ಟ್ (ಕ): ಮ.1.05ಕ್ಕೆ, ಮ.3.50ಕ್ಕೆ, ರಾಯಲ್ (ಕ): ಸಂ.6.35ಕ್ಕೆ, ಸ್ಕೈ ಫೋರ್ಸ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.11ಕ್ಕೆ, ರಾ.7.05ಕ್ಕೆ, ರಾಯಲ್ (ಕ): ಮ.1.25ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ಸಂ.4.15ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಭೂ ಮಂತರ್ (ಕ): ಮ.1.30ಕ್ಕೆ, ಸಂ.6.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಇಂದು ಶ್ರೀ ಮಹಾಗಣಪತಿ ದೇವಸ್ಥಾನದ ವಾರ್ಷಿಕೋತ್ಸವ

ಮೈಸೂರು, ಮಾ.1– ಮೈಸೂರಿನ ಬಿಎಂಶ್ರೀ ನಗರದಲ್ಲಿರುವ ಶ್ರೀ ಮಹಾಗಣಪತಿ ದೇವಸ್ಥಾನದ 28ನೇ ವಾರ್ಷಿಕೋತ್ಸವ ನಾಳೆ (ಮಾ.2) ನಡೆಯಲಿದೆ. ದೇವಸ್ಥಾನದಲ್ಲಿ ಪ್ರಧಾನ ಅರ್ಚಕರಾದ ಕೃಷ್ಣಪ್ರಸಾದ್ ನೇತೃತ್ವದಲ್ಲಿ ಗಣಪತಿ ಪೂಜೆ, ಪುಣ್ಯಾಹ, ಕಳಸ ಪ್ರತಿಷ್ಠಾಪನೆ, ಹೋಮಗಳು ನಡೆಯಲಿವೆ.

ಅಂದು ಬೆಳಗ್ಗೆ 8 ಗಂಟೆಗೆ ಗಂಗಾ ಪೂಜೆ, ಗೋ ಪೂಜೆ, ಮೂಲ ದೇವರ ಪ್ರಾರ್ಥನೆ, ಗಣಪತಿ ಹೋಮ, 8.30ಕ್ಕೆ ಪುಣ್ಯಾಹ, ಸ್ಥಳ ಶುದ್ಧಿ, ಋತ್ವಿಗ್ವರಣ, ಕಳಸ ಸ್ಥಾಪನೆ, 9 ಗಂಟೆಗೆ ಮಹಾ ಗಣಪತಿ ಹೋಮ, ಶ್ರೀ ಸತ್ಯನಾರಾಯಣ ಹೋಮ, ನವಗ್ರಹ ಹೋಮ, ಆಂಜನೇಯ ಹೋಮ, ಸುಬ್ರಹ್ಮಣ್ಯ ಹೋಮ ಮತ್ತು ಕಲಾ ಹೋಮ ನಡೆಯಲಿದೆ.

11 ಗಂಟೆಗೆ ಪೂರ್ಣಾಹುತಿ, 11.30ಕ್ಕೆ ಕಲಶಾಭಿಷೇಕ, ಮಧ್ಯಾಹ್ನ 12.30ಕ್ಕೆ ಮಹಾಮಂಗಳಾರತಿ, ಆಶೀರ್ವಾದ, ತೀರ್ಥಪ್ರಸಾದ ವಿನಿಯೋಗ ನಡೆಯಲಿದೆ.

ಸಂಜೆ 6ಕ್ಕೆ ಮೈಸೂರಿನ ಮೇಟಗಳ್ಳಿ ಸುಗುಣ ಮಾಲತಿ ಅವರ ಮಾತೆಯ ಮಡಿಲು ಭಜನಾ ಮಂಡಳಿಯಿಂದ ಸುಭಾಷಿಣಿ ನಾಗರಾಜ್ ಅವರ ಅಧ್ಯಕ್ಷತೆಯಲ್ಲಿ ಭಜನಾ ಕಾರ್ಯಕ್ರಮ ನಡೆಯಲಿದೆ ಎಂದು ಬಿಎಂಶ್ರೀ ನಗರದ ಶ್ರೀ ಮಹಾ ಗಣಪತಿ ಸೇವಾ ಟ್ರಸ್ಟ್ ಪ್ರಕಟಣೆ ತಿಳಿಸಿದೆ.

ವಿಜ್ಞಾನ ದಿನಾಚರಣೆ



ಮೈಸೂರಿನ ಶ್ರೀ ಛಾಯಾದೇವಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ರಾಷ್ಟ್ರೀಯ ವಿಜ್ಞಾನ ದಿನ ಆಚರಿಸಲಾಯಿತು. ಡಾ. ಲಕ್ಷ್ಮಿ ನಾರಾಯಣ್ ಶ್ರೇನಾಯ್ (ಸಹಾಯಕ ನಿರ್ದೇಶಕರು, ಸರ್ಕಾರಿ ಆಯುರ್ವೇದ ಸಂಶೋಧನಾ ಸಂಸ್ಥೆ, ಮೈಸೂರು), ಕಾಲೇಜು ಪ್ರಾಂಶುಪಾಲ ಡಾ॥ ಅಂತೋಣಿ ಪಾಲ್ ರಾಜ್ ಮತ್ತಿತರರು ಉಪಸ್ಥಿತರಿದ್ದರು.

ಇಂಪೀರಿಯಲ್ ಸಿಟಿ
ಮೆಗಾ ರೆಸಿಡೆನ್ಸಿಯಲ್ ವಿಲ್ಲಾ ಟೌನ್‌ಶಿಪ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
MUDA LIMITS
ಇಲವಾಲ ಸ್ಯಾಟ್‌ಲೈಟ್ ಬಸ್ ನಿಲ್ದಾಣದಿಂದ ಕೇವಲ 4 ಕಿ.ಮೀ
ಬುಕಿಂಗ್ ಪ್ರಾರಂಭವಾಗಿದೆ
ಕೇವಲ ₹749/ ಪ್ರತಿ ಚದರ ಅಡಿ
ಸುಲಭ 4 ಕಂತುಗಳ ಸೌಲಭ್ಯವಿದೆ
30x40 | 30x50 | 40x60 | 50x80
ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು
ಹೈಲ್ಯಾಂಡ್ ಪ್ರಾಪರ್ಟೀಸ್ 95133 01854 88840 71010
ಕಾಳಿದಾಸ ರಸ್ತೆ, ವಿಜಯನಗರ 1ನೇ ಹಂತ, ಮೈಸೂರು

ಸೈಟುಗಳು ಮಾರಾಟಕ್ಕಿದೆ
9 ಮತ್ತು 11A ಖಾತೆಯ ಸೈಟುಗಳು ಮಾರಾಟಕ್ಕೆ ಲಭ್ಯವಿದೆ.
ಮೈಸೂರು-ಮಡಿಕೇರಿ ರಸ್ತೆ.
ಕೇವಲ 13 ಲಕ್ಷದಿಂದ.
ಕರೆಮಾಡಿ: 74833 38488

ಮೈಸೂರು ಮಿತ್ರ — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಬೇಕಾಗಿದ್ದಾರೆ
ಸೇಲ್ಸ್ ಎಕ್ಸಿಕ್ಯೂಟೀವ್ 2 ವರ್ಷ ಅನುಭವ
ಸೇವ ಸಲಹೆಗಾರ 1 ವರ್ಷ ಅನುಭವ
ಪುರುಷ ಅಭ್ಯರ್ಥಿಗಳಿಗೆ ಮಾತ್ರ
9739599888

Aquaguard & Kent Water Purifier Sales & Service
9901200444
#319, Near Mega Medical Store, Kuvempunagar

ಬೇಕಾಗಿದ್ದಾರೆ
ಸರ್ವಿಸ್ ಅಪಾರ್ಟ್ಮೆಂಟ್‌ನಲ್ಲಿ ಕೆಲಸ ಮಾಡಲು ಫ್ರಂಟ್ ಡೆಸ್ಕ್ ಮ್ಯಾನೇಜರ್ ಬೇಕಾಗಿದ್ದಾರೆ.
ಹೋಟೆಲ್ ಇಂಡಸ್ಟ್ರಿನಲ್ಲಿ 1 ರಿಂದ 3 ವರ್ಷ ಅನುಭವವುಳ್ಳವರಾಗಿರಬೇಕು
ಕೂಡಲೇ ಸಂಪರ್ಕಿಸಿ: 9591408287, 9742884632

WAREHOUSE FOR RENT
at Kadakola Industrial Area
From 1000 sqft to 10000sqft
9916448665
9008752813
Brokers Welcome



ONLY ONE WAY TAXI CHARGE
MYSORE to BANGALORE City drop or Pick up
BANGALORE to MYSORE Airport drop or Pick up MYSURU
9611177599

PUBLIC NOTICE
My client Smt. Mangalamma is intending to avail a loan from State Bank of India, RACPC Mysore for construction of building in the Schedule property. One Gift deed dated 09-04-2014 executed by Smt. Mangalamma to her daughter Smt. Rajani N registered before Sub Registrar Mysore South doc. No. MYS-1-00196-2014-15 CD MYSD219 and khata dated 31.5.2014 issued by MCC, Mysore to Smt. N.Rajani in respect of Schedule property are reportedly lost and a police complaint at K.R. Police Station, Mysuru, was lodged in this connection on 27.02.2025. Schedule property bearing House No.563/A1 New No.F11/1A (old No.563/A F 11/1) situated at 2nd Ramachandra Agrahara, Khille Mohalla, Mysore measuring East to West 14 feet North to South $33^1/_4$ feet with RCC building bounded on the: East By: House of Ambu Subramanyapadhya West By: House of Kapanipathiraya North By: Road South By: House of Mangalamma.
Therefore this notice is given to the public. If anybody has the custody of the said documents and have got any claim, right, title or interest over the Schedule property, the same may be lodged with the undersigned with the supporting documents within 7 days from the date of publication of this notice.
Sd/- B.M. Shivaswamy
Advocate, #1127/2A,1st Cross Vani Vilas Road (Behind RTO) Chamarajapuram Mysuru-570005, Mobile: 9448505433
E-mail: bmsswamy@gmail.com
Place: Mysuru, Date: 27.02.2025

ಪತ್ರಿಕಾ ಪ್ರಕಟಣೆ
ನವದೆಹಲಿ, ಭಾರಾಕುಂಭ ರಸ್ತೆ, ಹ್ಯಾಲಿ ರಸ್ತೆ, ಮನೆ ನಂ.16 ರಲ್ಲಿ ವಾಸವಾಗಿರುವ ಹಾಗೂ ಮಹಾರಾಷ್ಟ್ರ ರಾಜ್ಯ, ಪಾಟ್ನ, ನರೇಶ್ ನಿವಾಸ್ ರಸ್ತೆ, ರಾಜ್ ಬನ್ಸಿ ನಗರ, ಮನೆ ನಂ.04 ರಲ್ಲಿ ವಾಸವಾಗಿರುವ ಶ್ರೀ.ನರೇನ್ ಕುಮಾರ್ ರವರ ಮಕ್ಕಳುಗಳಾದ ಒಂದನೇ ಮಗನಾದ ಸುಮಾರು 57 ವರ್ಷ ವಯಸ್ಸಿನ ಶ್ರೀ ರಾಜ್ ಕುಮಾರ್ ಹಾಗೂ 2ನೇ ಮಗನಾದ ಸುಮಾರು 55 ವರ್ಷ ವಯಸ್ಸಿನ ಶ್ರೀ ಮನೋಜ್ ಕುಮಾರ್ ಇವರುಗಳು, ಅವರಿಗೆ ಸೇರಿದ ಷೆಡ್ಯೂಲ್ ಸ್ವತ್ತಾದ ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಬೆಳವಾಡಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 20/1 ರಲ್ಲಿ ವಿಸ್ತೀರ್ಣ 2 ಎಕರೆ 02 ಗುಂಟೆ ಜಮೀನನ್ನು ಮಾರಾಟ ಮಾಡಲು ಇಚ್ಚಿಸಿರುತ್ತಾರೆ. ಈ ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ನಮ್ಮ ಕಕ್ಷಿದಾರರು ಖರೀದಿಸಲು ಇಚ್ಚಿಸಿರುತ್ತಾರೆ. ಆದ್ದರಿಂದ, ಈ ಕೆಳಕಂಡ ಷೆಡ್ಯೂಲ್ ಸ್ವತ್ತಿಗೆ ಬೇರೆ ಯಾರಿಗಾದರೂ ಹಕ್ಕು ಬಾಧ್ಯತೆ, ಭೋಗ್ಯ, ದಾನ, ಕರಾರು, ಸಾಮಾನ್ಯ ಅಧಿಕಾರ ಪತ್ರ, ವ್ಯವಸ್ಥಾ ಪತ್ರ, ಅಥವಾ ಪರಾಭಾರೆ ಆಗಿದ್ದ ಪಕ್ಷದಲ್ಲಿ ಜೊತೆಗೆ ಜೀವನಾಂಶ, ಮೈನರ್ ಹಕ್ಕುಗಳು, ಸಿವಿಲ್, ರೆವಿನ್ಯೂ, ಕ್ರಿಮಿನಲ್, ಕೋರ್ಟ್ ಅಟ್ಯಾಚ್‌ಮೆಂಟ್, ಡಿಕ್ರಿ, ಇನ್ಯಾವುದೇ ಜಪ್ತಿಗಳಿಗೆ ಈಡಾಗಿದ್ದ ಪಕ್ಷದಲ್ಲಿ ಈ ಕೆಳಕಂಡ ವಿಳಾಸಕ್ಕೆ ಈ ಪ್ರಕಟಣೆ ಕೊಟ್ಟ 07 ದಿನಗಳೊಳಗೆ ಸೂಕ್ತ ದಾಖಲಾತಿಗಳೊಂದಿಗೆ ಖುದ್ದಾಗಿ ಅಥವಾ ನೀವೇ ಬಂದು ಭೇಟಿಯಾಗಬೇಕೆಂದು ಈ ಮೂಲಕ ಸೂಚಿಸಲಾಗಿದೆ. ಒಂದು ವೇಳೆ ಯಾರಿಂದಲೂ, ಯಾವುದೇ ರೀತಿಯ ತಂಟೆ, ತಕರಾರುಗಳು ಮೇಲೆ ಹೇಳಿದ ಅವಧಿಯಲ್ಲಿ ಬರದಿದ್ದ ಪಕ್ಷದಲ್ಲಿ ಷೆಡ್ಯೂಲ್ ಸ್ವತ್ತಿಗೆ ಯಾರಿಂದಲೂ ಯಾವ ರೀತಿಯ ಹಕ್ಕು ಬಾಧ್ಯತೆ, ಹಿತಾಸಕ್ತಿ ಇರುವುದಿಲ್ಲವೆಂದು ಪರಿಗಣಿಸಿ, ನಂತರ ಬರುವ ಯಾವುದೇ ಆಕ್ಷೇಪಣೆಗಳಿಗೆ ನಮ್ಮ ಕಕ್ಷಿದಾರರು ಬಾಧ್ಯಸ್ಥರಾಗಿರುವುದಿಲ್ಲವೆಂದು ತಿಳಿಯತಕ್ಕದ್ದು.
ಷೆಡ್ಯೂಲ್ ಸ್ವತ್ತಿನ ವಿವರ
ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಬೆಳವಾಡಿ ಗ್ರಾಮಕ್ಕೆ ಸೇರಿದ ಸರ್ವೆ ನಂ.20/1 ರಲ್ಲಿ ವಿಸ್ತೀರ್ಣ 2 ಎಕರೆ 02 ಗುಂಟೆ ಜಮೀನಿಗೆ ಚೆಕ್ಕುಬಂದಿ:– ಪೂರ್ವಕ್ಕೆ: ಬೋರಯ್ಯ ಬಿನ್ ಸಾಕಮ್ಮ ರವರ ಸ್ವತ್ತು ; ಪಶ್ಚಿಮಕ್ಕೆ: ಜಬ್ಬರ್ ರವರ ಸ್ವತ್ತು ; ಉತ್ತರಕ್ಕೆ : ಅನಪೊನಿಕರ್ ರವರ ಸ್ವತ್ತು ; ದಕ್ಷಿಣಕ್ಕೆ ಶಂಕರಯ್ಯ & ಪುಟ್ಟಣ್ಣ ರವರ ಸ್ವತ್ತು. ಈ ಮಧ್ಯೆ ಇರುವ ಖುಷ್ಕಿ ಜಮೀನಿನ ಒಟ್ಟು ವಿಸ್ತೀರ್ಣ 2 ಎಕರೆ 02 ಗುಂಟೆ ಜಮೀನು ಈ ಪ್ರಕಟಣೆಗೆ ಒಳಪಟ್ಟ ಸ್ವತ್ತಾಗಿರುತ್ತದೆ.
Sd/- K.S. Nagaraju, Advocate
Office: #379, Krishna Vilasa Road, Devaraj Mohalla, Mysuru.
Mob: 9880885076
Date: 17-2-2025

ಕೃಷಿ ಭೂಮಿ ಮಾರಾಟಕ್ಕೆ ಇದೆ
38 ಗುಂಟೆ,
ಸ್ಥಳ: ಹೊಸೂರು. ಇಂದಿರಾನಗರ. ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.
ಭೂಮಿಯ ವಿಶೇಷತೆಗಳು:
ಹೆದ್ದಾರಿಯ ಸಮೀಪ. ಸುಲಭ ಪ್ರವೇಶ
ಕಾವೇರಿ ನೀರಿನ ಚಾನೆಲ್‌ಗೆ ಸಮೀಪ.
ನಿರಂತರ ನೀರಿನ ಲಭ್ಯತೆ.
ಕೃಷಿ ಮತ್ತು ಅಭಿವೃದ್ಧಿ ಉದ್ದೇಶಗಳಿಗೆ ಸೂಕ್ತವಾದ ಭೂಮಿ ಉತ್ತಮ ಸಂಪರ್ಕ ಮತ್ತು ನೀರಿನ ಸಂಪತ್ತಿನೊಂದಿಗೆ ಕೃಷಿಗೆ ಅನುಕೂಲಕರ ಮತ್ತು ಹೂಡಿಕೆಗೆ ಉಪಯುಕ್ತ ಭೂಮಿ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ಸುನಿಲ್ : 9731615627
ಮಹೇಶ್: 9880171959
Whatsapp Only: 9964694773

WANTED
Teachers fluent in English for an English medium Christian School in Mandya (City)
-B.Sc, B.Ed (CBZ)
-PUC, D.Ed
-B.A, B.PEd
Salaries : 26000, 23000 respectively
Contact Principal
6360801993, 6360011505

ಸಾಲ / LOANS
* HOUSE / SITE PURCHASE
* CONSTRUCTION LOAN
* MORTGAGE LOAN
(MUDA, Corporation, Revenue, 11A and 11B Property)
Mob: 7760598705

2.5 BHK HOME INTERIORS @ ₹ 2.5 Lakh*
Home Space Mart
*T&C Apply
91089 23123

FESTIVAL OFFER
Buy your Dream Luxury Residential Plot only @ 2400/- per sqft., 2 adjacent 30x40 & 40x40 sites. Located next to the Serene Varuna Lake Ready for construction.
For more details, contact:
9731749500

ಸಾರ್ವಜನಿಕ ಪ್ರಕಟಣೆ
ನನ್ನ ಕಕ್ಷಿದಾರರಾದ ರಾಜಶೇಖರ ಬಿ.ಕೆ. ಬಿನ್ ಬಿ.ಎಸ್.ಕೃಷ್ಣಮೂರ್ತಿ #2230/5, (ಹೊಸ ನಂಬರ್ 959) ಬಸವರಾಜ ಸರ್ಕಲ್ ಹತ್ತಿರ, ವಿಜಯನಗರ 3ನೇ ಹಂತ, ಮೈಸೂರು ರವರು ಈ ಕೆಳಗಿನ ಷೆಡ್ಯೂಲ್‌ನಲ್ಲಿ ವಿವರಿಸಲಾಗಿರುವ ಸ್ವತ್ತನ್ನು, ಅದರ ಮಾಲೀಕರಾದ ಶಿವಬೀರ ಬಿನ್ ಮರಿಬೀರೆಗೌಡ, ಬಿರೇಗೌಡನಹುಂಡಿ ಗ್ರಾಮ, ಕಡಕೊಳ ಅಂಚೆ, ಜಯಪುರ ಹೋಬಳಿ, ಮೈಸೂರು ಇವರಿಂದ ಖರೀದಿಸಲು ಇಚ್ಛಿಸಿದ್ದು. ಷೆಡ್ಯೂಲ್ ಸ್ವತ್ತು ಇವರ ಸಂಪೂರ್ಣ ಮಾಲೀಕತ್ವಕ್ಕೆ ಒಳಪಟ್ಟಿದ್ದು, ಅವರ ವಿನಃ ಬೇರೆ ಯಾರಿಗೂ ಯಾವುದೇ ರೀತಿಯಾದ ಹಕ್ಕು–ಬಾಧ್ಯತೆಗಳು ಇರುವುದಿಲ್ಲ, ನನ್ನ ಕಕ್ಷಿದಾರರಿಗೆ ಕ್ರಯದ ಕರಾರುಪತ್ರ ಬರೆದು ಕೊಟ್ಟಿರುವುದೇ ವಿನಃ ಷೆಡ್ಯೂಲ್ ಸ್ವತ್ತನ್ನು ಯಾವ ರೀತಿಯಲ್ಲೂ ಆಧಾರ, ಕರಾರು, ಒಪ್ಪಂದ ಮಾಡಿಕೊಂಡಿಲ್ಲವೆಂದು ಹಾಗೂ ಷೆಡ್ಯೂಲ್ ಸ್ವತ್ತು ಯಾವ ವಿಧವಾದ ಸಾಲ ವಗೈರೆಗಳಿಗೆ ಒಳಪಟ್ಟಿರುವುದಿಲ್ಲ ಮತ್ತು ಯಾವುದೇ ತಂಟೆ ತಕರಾರುಗಳಿಗೆ ನ್ಯಾಯಾಲಯದ ಅಟ್ಯಾಚ್‌ಮೆಂಟ್, ಡಿಕ್ರಿ, ವಗೈರೆ ಏನೂ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ಬಗ್ಗೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು–ಬಾಧ್ಯತೆ, ತಕರಾರುಗಳಿದ್ದಲ್ಲಿ ಈ ದಿನದಿಂದ ಹತ್ತು (10) ದಿವಸದೊಳಗೆ ಈ ಕೆಳಕಂಡ ವಿಳಾಸಕ್ಕೆ ತಮ್ಮ ತಕರಾರುಗಳನ್ನು, ದಾಖಲಾತಿಗಳೊಂದಿಗೆ ತಿಳಿಸುವುದು, ತಪ್ಪಿದಲ್ಲಿ ಈ ಷೆಡ್ಯೂಲ್ ಸ್ವತ್ತಿನ ಬಗ್ಗೆ ಯಾರಿಗೂ ಯಾವುದೇ ರೀತಿಯ ಹಕ್ಕು–ಬಾಧ್ಯತೆ ಹಾಗೂ ತಂಟೆ–ತಕರಾರುಗಳಿಲ್ಲವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಮೇಲೆ ತಿಳಿಸಿರುವ ಕ್ರಯದ ಕರಾರಿನಂತೆ ವಹಿವಾಟನ್ನು ಮುಂದುವರಿಸುತ್ತಾರೆ.
ಷೆಡ್ಯೂಲ್ ಸ್ವತ್ತಿನ ವಿವರ
ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಕಡಕೊಳ (ಬಿರೇಗೌಡನಹುಂಡಿ) ಗ್ರಾಮದ ಸ. ನಂ. 154/7 ರಲ್ಲಿರುವ 1 ಎಕರೆ ಜಮೀನಿನ ಪೈಕಿ 20 ಗುಂಟೆ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ: ಸ.ನಂ. 154/8 ರ ಮಂಜುರವರ ಜಮೀನು ; ಪಶ್ಚಿಮಕ್ಕೆ: ಕಾಳೇಗೌಡರ ಜಮೀನು ; ಉತ್ತರಕ್ಕೆ : ಶಿವಬೀರರವರ ಉಳಿಕೆ 20 ಗುಂಟೆ ಜಮೀನು ; ದಕ್ಷಿಣಕ್ಕೆ: ಕೃಷ್ಣಪ್ಪರವರ ಜಮೀನು
ಸಹಿ/– ಮಹದೇವಸ್ವಾಮಿ ಎಂ, ಬಿ.ಕಾಂ., ಎಲ್.ಎಲ್.ಬಿ., ವಕೀಲರು, KAR 667/2022
#2843, 4ನೇ 'ಎ' ಅಡ್ಡರಸ್ತೆ, 2ನೇ ಮುಖ್ಯ ರಸ್ತೆ, ಜಯನಗರ, ಮೈಸೂರು–570 014.
Mob: 8618041923
ಸ್ಥಳ: ಮೈಸೂರು. ದಿ: 02–03–2025

ಮೈಸೂರು ಮತ್ತು ಚಾಮರಾಜನಗರ ಡೈರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ.ನಿ. ಮೈಸೂರು
"ಹಳೇ ಡೈರಿ ಸಂಕೀರ್ಣ" ಮಲೆಮಹದೇಶ್ವರ ರಸ್ತೆ, ಸಿದ್ದಾರ್ಥನಗರ, ಮೈಸೂರು
ಪತ್ರಿಕಾ ಪ್ರಕಟಣೆ
ಮೈಸೂರು ಮತ್ತು ಚಾಮರಾಜನಗರ ಡೈರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ.ನಿ. ಮೈಸೂರು ಈ ಸಂಘದ ಆಡಳಿತ ಮಂಡಳಿಗೆ ಚುನಾವಣಾ ದಿನಾಂಕದಿಂದ ಮುಂದಿನ 05 ವರ್ಷಗಳ ಅವಧಿಗೆ ಚುನಾವಣೆಯನ್ನು ದಿನಾಂಕ: 16.03.2025 ರಂದು ಭಾನುವಾರ ಬೆಳಿಗ್ಗೆ 9:00 ಗಂಟೆಯಿಂದ ಸಂಜೆ 4:00 ಗಂಟೆಯವರೆಗೆ "ಸಂಘದ ಕಚೇರಿ ಆವರಣ" ಇಲ್ಲಿ ನಡೆಸಲು ನಿಗದಿಪಡಿಸಲಾಗಿರುತ್ತದೆ. ಚುನಾವಣೆಯಲ್ಲಿ ಸ್ಪರ್ಧಿಸಲು ಇಚ್ಛಿಸುವವರು ಭರ್ತಿ ಮಾಡಿದ ನಾಮಪತ್ರಗಳನ್ನು ದಿನಾಂಕ: 02.03.2025 ರಿಂದ 08.03.2025 ರವರೆಗೆ ಬೆಳಿಗ್ಗೆ 11:00 ಗಂಟೆಯಿಂದ ಮಧ್ಯಾಹ್ನ 2:00 ವರೆಗೆ ಸಂಘದ ಕಚೇರಿಯಲ್ಲಿ ರಿಟರ್ನಿಂಗ್ ಆಫೀಸರ್‌ರವರಿಗೆ ಸಲ್ಲಿಸುವುದು ಹಾಗೂ ನಾಮಪತ್ರಗಳ ಪರಿಶೀಲನೆಯನ್ನು ದಿನಾಂಕ: 09.03.2025 ರಂದು ಬೆಳಿಗ್ಗೆ 11:00 ಗಂಟೆಗೆ ನಡೆಸಲಾಗುವುದು. ಚುನಾವಣಾ ವೇಳಾ ಪಟ್ಟಿಯನ್ನು ಎಲ್ಲಾ ಅರ್ಹ ಸದಸ್ಯರುಗಳಿಗೆ ಅಂಚೆ ಮೂಲಕ ಈಗಾಗಲೇ ರವಾನಿಸಲಾಗಿದ್ದು, ಹೆಚ್ಚಿನ ವಿವರಗಳಿಗಾಗಿ ಸಂಘದ ಕಾರ್ಯದರ್ಶಿಯವರಿಗೆ ಹಾಗೂ ರಿಟರ್ನಿಂಗ್‌ಅಧಿಕಾರಿಯನ್ನು ಸಂಪರ್ಕಿಸಲು ಕೋರಲಾಗಿದೆ.
ಸಹಿ/–,
ರಿಟರ್ನಿಂಗ್ ಆಫೀಸರ್
ಮೈಸೂರು ಮತ್ತು ಚಾಮರಾಜನಗರ ಡೈರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ.ನಿ. ಮೈಸೂರು

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ನಂಜನಗೂಡು
ಹುಲ್ಲಹಳ್ಳಿ ರಸ್ತೆ, ನಂಜನಗೂಡು–571301
ಇ–ಮೇಲ್: apmcnanjanagud@rediffmail.com,
ದೂರವಾಣಿ:08221–226309
ಸಂ.ಕೃಉಮಾಸ(ನಂ)/494/2024–25 ದಿನಾಂಕ: 25.02.2025
ತಿದ್ದುಪಡಿ ಪ್ರಕಟಣೆ
ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ ಕೃಉಮಾಸ(ನಂ) 482/2024–25 ದಿನಾಂಕ 13.02.2025 ರಲ್ಲಿ ಈ ಸಮಿತಿಯ ನಂಜನಗೂಡು ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿನ 8 ಸಂಖ್ಯೆ ಸಣ್ಣಂಗಡಿ ಮಳಿಗೆಗಳನ್ನು ನಿಯಮ 13 ರಡಿ ಲೈಸನ್ಸ್ ಪಡೆದ ಅರ್ಹ ಪೇಟೆ ಕಾರ್ಯಕರ್ತರಿಗೆ ಜೇಷ್ಠತೆಯ ಆಧಾರದ ಮೇಲೆ ಮಳಿಗೆಗಳನ್ನು ಟೆಂಡರ್ ಮೂಲಕ ಹಂಚಿಕೆ ಮಾಡಲು ಅರ್ಜಿ ಅಹ್ವಾನಿಸಿದ್ದು ಅದರಲ್ಲಿ ಮಳಿಗೆ ಸಂಖ್ಯೆ 07 ನ್ನು ಮಳಿಗೆ ಸಂಖ್ಯೆ 08 ಎಂದು ತಿದ್ದಿಕೊಳ್ಳತಕ್ಕದ್ದು. ಉಳಿದಂತೆ ಷರತ್ತು ಮತ್ತು ನಿಭಂದನೆಗಳು ಮುಂದುವರೆಯುತ್ತದೆ.
ಸಹಿ/– (ಮಹೇಶ.ಬಿ) ಕಾರ್ಯದರ್ಶಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ನಂಜನಗೂಡು
ಸಹಿ/– (ಶಿವಕುಮಾರ್ ಕಾಸ್ನೂರು) ಆಡಳಿತಾಧಿಕಾರಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ನಂಜನಗೂಡು

FULLY DEVELOPED DTCP APPROVED SITES AVAILABLE
@ ~~999~~ NOW 899
90% BANK LOAN AVAILABLE
9620997711 / 9620907711

JOB OPPORTUNITY FOR FEMALES
Qualification : Any Graduates Can apply
Role : DATA ENTRY AND PROCESS EXECUTIVE
(Fluent English) Work from office
(GENEAID INDIA PRIVATE LIMITED)
#742, E&F Block, Kuvempunagar, Mysuru-570023
E-mail:info@geneaid.in
9986380009, 7760811113

FOR SALE
North East Corner Site measuring 2580 sqft., in Vijaynagar 2nd Stage, Mysore,
Brokers Excuse
Contact: 9342831000

PRAKRUTHI PROPERTIES
FOR SALE
30x40 @ 20 lakhs Near RT Nagar Including Registration
Apartments @ Ramakrishna Nagar
20x30 New 2BHK House, As Per your Plan With Interiors @ Just 36 Lakh in Bogadi Including Registration
95386 90359, 90359 90359

OFFICE SPACE FOR RENT
1600 sq.ft.,
each on 2nd & 3rd floors
25 mtrs from Devaraj Urs Road, with lift & toilet
Call : 98440 10639

SITE FOR SALE
30x40, East Facing in J cube Palacia, gated community includes club house, swimming pool ext., near Bangalore Mysore Expressway road, just 100 mtrs from Manipal Hospital.
Ph: 8884616461 / 7975269652

SITE FOR SALE
25x40, W/F,
YESH MEGA CITY
After Yelwala, NH 275, Mysore- Hunsur Main Road.
Call : 73384 45412



ಗೌರವಾನ್ವಿತ 6ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು
ಪಿ ಅಂಡ್ ಎಸ್.ಸಿ. ಸಂಖ್ಯೆ 16/2025
ಅರ್ಜಿದಾರರುಗಳು: ಮಹದೇವಪ್ರಸಾದ್ ಎನ್. ಬಿನ್ ನಾಗೇಶ, ವಯಸ್ಸು ಸುಮಾರು 22 ವರ್ಷ. ವಾಸ: ರಾಂಪುರ ಗ್ರಾಮ. ಚಿಕ್ಕಯ್ಯನಛತ್ರ ಹೋಬಳಿ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.
ವಿರುದ್ಧ
ಎದುರುದಾರರು: ಇಲ್ಲ
ಪತ್ರಿಕಾ ಪ್ರಕಟಣೆ
ಮೇಲ್ಕಂಡ ಅರ್ಜಿದಾರರ ಅಜ್ಜಿಯವರಾದ ರಾಮಲಿಂಗಮ್ಮ ಕೋಂ ಲೇಟ್ ಕಾಳಿಂಗಪ್ಪ ರವರು ನಂಜನಗೂಡು ತಾಲ್ಲೂಕು. ಚಿಕ್ಕಯ್ಯನಛತ್ರ ಹೋಬಳಿ, ರಾಂಪುರ ಗ್ರಾಮದಲ್ಲಿ ದಿನಾಂಕ 01–01–2007 ರಂದು ಮರಣ ಹೊಂದಿರುತ್ತಾರೆ. ಅವರು ಅವರ ಜೀವಿತ ಕಾಲದಲ್ಲಿ ದಿನಾಂಕ 25–05–2005 ರಂದು ಈ ಕೆಳಗಿನ ಷೆಡ್ಯೂಲ್ ಸ್ವತ್ತನ್ನು ಅರ್ಜಿದಾರರ ಪರವಾಗಿ ವಿಲ್ ಮಾಡಿರುತ್ತಾರೆ. ಇದೀಗ ಮೇಲ್ಕಂಡ ಅರ್ಜಿದಾರರು ಖಾತೆ ವಗೈರೆಗಳಿಗಾಗಿ ಪ್ರೊಬೇಟ್ ಪಡೆಯಲು ಈ ಘನ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಈ ಸಂಬಂಧ ಯಾವುದೇ ತಂಟೆ ತಕರಾರು ಇದ್ದಲ್ಲಿ ದಿನಾಂಕ 22–03–25 ರಂದು ಬೆಳಿಗ್ಗೆ 11.00 ಗಂಟೆಗೆ ಈ ಘನ ನ್ಯಾಯಾಲಯದಲ್ಲಿ ಹಾಜರಾಗಿ ಆಕ್ಷೇಪಣೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ತಕರಾರು ಏನು ಇಲ್ಲವೆಂದು ತಿಳಿದು ಏಕಪಕ್ಷೀಯ ಆದೇಶವನ್ನು ಮಾಡುತ್ತದೆ ಎಂದು ತಿಳಿಯತಕ್ಕದ್ದು
ಷೆಡ್ಯೂಲ್ ಸ್ವತ್ತುಗಳು
ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು. ಚಿಕ್ಕಯ್ಯನಛತ್ರ ಹೋಬಳಿ, ರಾಂಪುರ ಗ್ರಾಮಕ್ಕೆ ಸೇರಿದ ಸರ್ವೆ ನಂ. 109/1ರ ವಿಸ್ತೀರ್ಣ 0.10 ಗುಂಟೆ ಜಮೀನಿಗೆ ಚಕ್ಕುಬಂದಿ:
ಪೂರ್ವಕ್ಕೆ: ನಾಗೇಶ ರವರ ಜಮೀನು ; ಪಶ್ಚಿಮಕ್ಕೆ: ಕಾಳಿಂಗಪ್ಪರವರ ಜಮೀನು ; ಉತ್ತರಕ್ಕೆ: ಶಿವಮಲ್ಲಪ್ಪ ರವರ ಜಮೀನು ; ದಕ್ಷಿಣಕ್ಕೆ: ರಾಮೇಗೌಡ ರವರ ಜಮೀನು. ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಈ ದಿನ 28–02–2025 ರಂದು ನೀಡಲಾಗಿದೆ.
ಘನ ನ್ಯಾಯಾಲಯದ ಅಪ್ಪಣೆ ಮೇರೆಗೆ
ಸಹಿ/– ಮುಖ್ಯ ಆಡಳಿತಾಧಿಕಾರಿಗಳು
ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು
ಸಹಿ/– ಎಸ್.ಎಸ್. ಜಯರಾಮು
ಅರ್ಜಿದಾರರ ಪರ ವಕೀಲರು, ಮೈಸೂರು

ಬೋಗಾದಿ ಗ್ರಾಮದಿಂದ ಹಸು ಕಾಣೆಯಾಗಿದೆ

ಕಂಡವರು ತಕ್ಷಣ ಕರೆಮಾಡಿ
ಸುರೇಶ್–9513122433

WANTED
Adv No: CC/2025/005
* Receptionist - 2 (Male)
* Accounts - 3 (Male & Female)
(B.Com with 2 years experience)
* Customer Relationship Manager
(Experience : 2 years minimum)
Mail in your resumes to: theclovers.mysore@gmail.com
Or Contact : 9606998085

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

ಸಾರ್ವಜನಿಕ ಪ್ರಕಟಣೆ
ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ, ಮೈಸೂರು–570007, ಎನ್.ಆರ್ ಮೊಹಲ್ಲಾ, 2ನೇ ಅಡ್ಡ ರಸ್ತೆ, ಟ್ಯಾಂಕ್ ರಸ್ತೆ, ಗುರು ನಿವಾಸ್, ಮನೆ ನಂಬರ್: 7 ರ ನಿವಾಸಿಯಾದ ಶ್ರೀ ಕಮಲ್ ಕುಮಾರ್ ಪೇಸ್ವಾನಿ ಬಿನ್. ಲೇಟ್ ಗೋವಿಂದ್ ರಾಮ್ ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.
ಷೆಡ್ಯೂಲ್ ಸ್ವತ್ತಿನ ಪರಬಾರೆಯ ವಿಚಾರದಲ್ಲಿ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು, ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.
ಷೆಡ್ಯೂಲ್
ಐಟಂ–1 : ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಜಯಪುರ ಹೋಬಳಿ, ತಳೂರು ಗ್ರಾಮದ ಸರ್ವೆ ನಂಬರ್ 25/2 ರಲ್ಲಿನ ಒಂದು ಎಕರೆ ಒಂದು ಗುಂಟೆ (1.01.00.00) ವಿಸ್ತೀರ್ಣದ ವಸತಿ Layout - Residential ಉದ್ದೇಶಕ್ಕೆ ಅನ್ಯಕ್ರಾಂತವಾಗಿರುವ ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ ರವರ ಆದೇಶ ಸಂಖ್ಯೆ ಎ.ಎಲ್.ಎನ್.(2) ಸಿಆರ್. 147/2007–08 ದಿನಾಂಕ 15/12/2008 ರ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಸರ್ಕಾರಿ ರಸ್ತೆ ; ಪಶ್ಚಿಮಕ್ಕೆ: ಮುರಡಗಳ್ಳಿ ರಸ್ತೆ ; ಉತ್ತರಕ್ಕೆ: ಸರ್ಕಾರಿ ರಸ್ತೆ ; ದಕ್ಷಿಣಕ್ಕೆ: ಸರ್ವೆ ನಂಬರ್ 25/1.
ಐಟಂ–2: ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಜಯಪುರ ಹೋಬಳಿ, ಮುರುಡಗಳ್ಳಿ ಗ್ರಾಮದ ಸರ್ವೆ ನಂಬರ್ 37/3ರಲ್ಲಿನ ಒಂದು ಎಕರೆ ಹತ್ತು ಗುಂಟೆ (1.10.00.00) ವಿಸ್ತೀರ್ಣದ ವಸತಿ Layout Residential ಅನ್ಯಕ್ರಾಂತವಾಗಿರುವ ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆರವರ ಆದೇಶ ಸಂಖ್ಯೆ ಎ.ಎಲ್.ಎನ್. (3)ಸಿಆರ್.186/2008–09 ದಿನಾಂಕ 20–04–2009, ರ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂಬರ್ 25 ; ಪಶ್ಚಿಮಕ್ಕೆ: ಕಳ್ಳಹಳ್ಳಿ ಗಡಿ ; ಉತ್ತರಕ್ಕೆ: ಸರ್ವೆ ನಂಬರ್ 37/4 ; ದಕ್ಷಿಣಕ್ಕೆ: ಸರ್ವೆ ನಂಬರ್ 37/2.
Sd/- M.N. Prakash Kalappa, KAR-1996-2000, Advocate & Legal Consultant, #2-3, First Floor, PRI Complex, 67/7A, New Sayyaji Rao Road, Fort Mohalla, Mysore-570 004.
Mob: 9343112535. Email: mnprakashkalappa@gmail.com
ಮೈಸೂರು, 1–03–2025

ಶ್ರೀ ಕೇಶವ ಪತ್ತಿನ ಸಹಕಾರ ಸಂಘ (ನಿ)
ನಂ.31, ಶ್ರೀ ಕಾಂಪ್ಲೆಕ್ಸ್ ನ್ಯೂ ಕಾಂತರಾಜ್ ಅರಸ್ ರಸ್ತೆ, ಕುವೆಂಪುನಗರ, ಮೈಸೂರು

ಶ್ರೀ ಕೇಶವ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಶ್ರೀ ಎಂ.ಲೋಕೇಶ್ ಅವರು ಹಾಗೂ ಉಪಾಧ್ಯಕ್ಷರಾಗಿ ಶ್ರೀ ಪ್ರಜ್ವಲ್ ಎಸ್.ಶ್ರೀವತ್ಸ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.
ಇವರಿಗೆ ಅಭಿನಂದನೆಗಳು
ಪ್ರಕಟಣೆ: ಸುರೇಶ್, ಮಹೇಶ್, ಮೊಹಮ್ಮದ್ ಆಸೀಫ್, ಒಲಂಪಿಯ ಮಹೇಶ್, ಪವನಣ್ಣ, ಎಸ್.ಮಹೇಶ್ Ex-Corporator, ಕೆ.ಎಸ್.ಮರಿಗೌಡ್ರು ಮತ್ತು ಮಂಚಪ್ಪ, ಮೈಸೂರು

SITES FOR SALE
70% Bank Loan Available
Ready to Register / Construct
Aishwarya Garden
After Yelwala, NH 275, Mysore-Hunsur Main Road. Call: 7338445413

NOT GETTING YOUR STAR OF MYSORE & ಮೈಸೂರು ಮಿತ್ರ
Call: 98452-96447 / 99003-82840

Mega Walk-in Drive
rProcess is hiring for an AI Data Annotation Project. We are looking for candidates with good communication, basic computer skills, attention to detail, and a result - focused approach.
Walk-in with all Documents:
3rd March to 8th March 2025 (9AM to 5PM)
Walk-in Venue
1. rProcess, Gunamba Towers, No. 579/2, D. Subbaiah Road, Lakshmi Puram, Mysuru - 04
2. rProcess "Meghna Haven", T N Pura Main Road, Nadanahalli, Mysuru - 28
Contact for more information:
99800 07732 / 63617 94249 / 96637 10867
Apply to Email: careers@rprocess.net
visit us on www.rprocess.in

WANTED TEACHERS
SRI PARAMAHAMSA VIDYANIKETANA
No.4, Near Sankranthi Circle, Hebbal 2nd Stage, Mysuru - 570017

• NURSERY TEACHERS	- NST, MONTESSORI TRAINING
• ENGLISH & SOCIAL	- MA, BA, B.Ed
• MATHS & SCIENCE	- MSC, BSC (PCM & CBZ), B.Ed
• KANNADA	- MA, BA, B.Ed
• COMPUTER SCIENCE	- MCA/BCA/BE
• ACCOUNTANT	- B.COM, M.COM, BBM

Proficiency in Spoken English and Computer Knowledge are pre-requisite for all the positions.
Interested candidates may mail their detailed Resume to shreeparama1994@gmail.com within March 10th 2025.
Contact:
0821-2303094, 8431122400
9740133838, 8105529560

ಪುರಸಭಾ ಕಾರ್ಯಾಲಯ ಪಾಂಡವಪುರ, ಮಂಡ್ಯ ಜಿಲ್ಲೆ–571434.
ಇ–ಮೇಲ್: itstaff_ulb_pandavapura@yahoo.com ದಿ:08236–255137
ಸಂಖ್ಯೆ:ಪು.ಸ.ಕಾ.ಪಾಂ/ರಾನಿ/ಹರಾಜು/2024–2025 ದಿನಾಂಕ:27.02.2025
ಬಹಿರಂಗ ಹರಾಜು /ಇ–ಪ್ರೊಕ್ಯೂರ್‌ಮೆಂಟ್ ಇಸ್ತಿಯಾರ್ ಪ್ರಕಟಣೆ
ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಪಾಂಡವಪುರ ಪುರಸಭೆಯ ವಿವಿಧ ಬಾಬ್ತುಗಳ "ಸುಂಕ ವಸೂಲಾತಿ ಹಕ್ಕನ್ನು" 2025–26ನೇ ಸಾಲಿಗೆ ಪುರಸಭೆ ದಿನಾಂಕ:01.04.2025 ರಿಂದ 31.03.2026ರ ವರೆಗೆ(12 ತಿಂಗಳಿಗೆ ಮಾತ್ರ) ವಿಧಿಸುವ ಷರತ್ತುಗಳಿಗೆ ಒಳಪಟ್ಟು ಮಾನ್ಯ ಅಧ್ಯಕ್ಷರು, ಪುರಸಭೆ, ಪಾಂಡವಪುರ ರವರು ಹಾಗೂ ಪುರಸಭಾ ಸದಸ್ಯರುಗಳು, ಮತ್ತು ಮುಖ್ಯಾಧಿಕಾರಿಗಳ ಸಮ್ಮುಖದಲ್ಲಿ ದಿನಾಂಕ:07.03.2025ರ ಶುಕ್ರವಾರ ಬೆಳಿಗ್ಗೆ:10.30ಗಂಟೆಗೆ "ಕಛೇರಿ ಆವರಣದಲ್ಲಿ" ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲಾಗುತ್ತಿದ್ದು, ಆಸಕ್ತರು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಹರಾಜಿನಲ್ಲಿ ಭಾಗವಹಿಸಿ, ಸವಾಲುಗಳ ಮೂಲಕ ಸುಂಕ ವಸೂಲಿ ಮಾಡುವ ಹಕ್ಕನ್ನು ಪಡೆದುಕೊಳ್ಳಬಹುದಾಗಿರುತ್ತದೆ.
ಹರಾಜುಗಳ ವಿವರ

ಕ್ರ ಸಂ	ಹರಾಜಿನ ವಿವರ	ಠೇವಣಿ ಮೊತ್ತ	ನಿಗಧಿಪಡಿಸಿರುವ ಕನಿಷ್ಠ ಬಿಡ್ಡಿನ ದರ (ಜಿ.ಎಸ್.ಟಿ 18% ಒಳಗೊಂಡಂತೆ)
01	ಪುರಸಭೆಗೆ ಸೇರಿದ ಸಂತೆ ಮಾಳದಲ್ಲಿ ಗುರುವಾರದಂದು ನಡೆಯುವ ಒಂದು ದಿನದ ಸಂತೆಯ ನೆಲ ಸುಂಕ ವಸೂಲಿ ಮಾಡುವ ಹಕ್ಕು.	2,00,000=00	8,15,000=00.
02	ಪುರಸಭೆ ವ್ಯಾಪ್ತಿಯಲ್ಲಿ ಮಾರಾಟ ಮಾಡುವ ವ್ಯಾಪಾರಸ್ಥರಿಂದ ಸೇರಿದ ದಿನವಹಿ ನೆಲಸುಂಕ (ಗುರುವಾರ ಹೊರತುಪಡಿಸಿ) ವಸೂಲಿ ಮಾಡುವ ಹಕ್ಕು.	2,00,000=00	10,05,000=00
3	ಪುರಸಭೆಗೆ ಸೇರಿದ ಖಾಸಗಿ ಬಸ್ ನಿಲ್ದಾಣದಲ್ಲಿ ವಾಹನಗಳ ಸುಂಕ ವಸೂಲಾತಿ ಹಕ್ಕು	50,000=00	5,15,000=00
4	ಪುರಸಭೆಗೆ ಸೇರಿದ ಮಾಂಸದ ಮಾರುಕಟ್ಟೆಯಲ್ಲಿರುವ ಹತ್ತು (10) ಅಂಗಡಿಗಳಲ್ಲಿ ಮಾಂಸ ಕಟಾಯಿಸಿ ಮಾರುವ ಹಕ್ಕನ್ನು ರೂಢಿಸಿಕೊಳ್ಳುವುದು.	50,000=00	1,50,000=00
5	ಪುರಸಭೆಗೆ ಸೇರಿದ ಕೃಷ್ಣಾನಗರ ಪಂಪ್‌ಹೌಸ್‌ನಲ್ಲಿರುವ 9 ತೆಂಗಿನ ಮರ ಮತ್ತು ಪುರಸಭಾ ಕಛೇರಿ ಆವರಣದಲ್ಲಿರುವ 2 ತೆಂಗಿನ ಮರದ ಫಸಲು ಕೊಯ್ದುಕೊಳ್ಳುವ ಹಕ್ಕು	5000=00	55,000=00

* ಮೇಲಿನ ಎಲ್ಲಾ ಕ್ರಮ ಸಂಖ್ಯೆ (1) ರಿಂದ (5) ರವರೆಗಿನ ಹರಾಜು ಅವಧಿ : 01.04.2025 ರಿಂದ 31.03.2026 ರ ವರೆಗೆ
ಸೂಚನೆ : ಹೆಚ್ಚಿನ ಮಾಹಿತಿಗಾಗಿ ಕಛೇರಿಯನ್ನು ಸಂಪರ್ಕಿಸುವುದು. ದೂರವಾಣಿ ಸಂಖ್ಯೆ : 08236–255137
ಸಹಿ/–ಅಧ್ಯಕ್ಷರು, ಪುರಸಭೆ, ಪಾಂಡವಪುರ
ಸಹಿ/–ಉಪಾಧ್ಯಕ್ಷರು ಪುರಸಭೆ, ಪಾಂಡವಪುರ
ಸಹಿ/–ಮುಖ್ಯಾಧಿಕಾರಿ, ಪುರಸಭೆ, ಪಾಂಡವಪುರ
ವಾಪಾಸಂಇ/ಸನಿ–ಮಂ/ಕೆಎಸ್‌ಎಂಸಿಎ/708/2024–25